ಸಂಪುಟ 1, ಸಂಚಿಕೆ 17

# ನ್ಯೂ ಇಂಡಿಯಾ ಸಮಾಚಾರ

ಮಾರ್ಚ್ 1–15, 2021
ಉಚಿತ ವಿತರಣೆಗಾಗಿ



## ಪೂರ್ವೋದಯ

### ನವ ಭಾರತಕ್ಕಾಗಿ ಒಂದು ಹೊಸ ಮಂತ್ರ

ಪೂರ್ವ ಮತ್ತು ಪಶ್ಚಿಮ ಪ್ರದೇಶಗಳ ನಡುವಿನ ಅಭಿವೃದ್ಧಿಯಲ್ಲಿ ಸಮಾನತೆ ತರಲು ಸರ್ಕಾರ ಕೈಗೊಂಡ ಸಂಕಲ್ಪ ಮತ್ತು ಉಪಕ್ರಮಗಳು ದೇಶದ ಪೂರ್ವ ಭಾಗದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೂರಕ

# ವಿಶ್ವ ಗ್ರಾಹಕ ಹಕ್ಕುಗಳ ದಿನ

WORLD CONSUMER RIGHTS DAY
15 March




## ನವ ಭಾರತದಲ್ಲಿ ಗ್ರಾಹಕರ ವಿಶ್ವಾಸ, ನಂಬಿಕೆ ಗರಿಷ್ಠ ಮಟ್ಟದಲ್ಲಿ

- ಜಾಗತಿಕ ಗ್ರಾಹಕ ಮಂಡಳಿಯ ಸಮೀಕ್ಷೆ ಪ್ರಕಾರ ಕಳೆದ ಕೆಲವು ವರ್ಷಗಳಿಂದ ಭಾರತದ ಮೇಲಿನ ಗ್ರಾಹಕರ ವಿಶ್ವಾಸ ಉತ್ತುಂಗದಲ್ಲಿದೆ.
- ಕೊರೊನಾ ವೈರಾಣು ಸಾಂಕ್ರಾಮಿಕ ಸಂದರ್ಭದಲ್ಲಿ ಸರ್ಕಾರ 1986 ಗ್ರಾಹಕರ ರಕ್ಷಣಾ ಕಾಯ್ದೆ ಬದಲಿಗೆ ಗ್ರಾಹಕರ ಸಂರಕ್ಷಣಾ ಕಾಯ್ದೆ 2019 ರ ಕಾಯ್ದೆಯನ್ನು 2020 ರ ಜುಲೈನಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಿ ಜಾರಿಗೆ ತಂದಿದೆ. ಈ ಕಾಯ್ದೆ ಮೊದಲ ಬಾರಿಗೆ ಇ–ವಾಣಿಜ್ಯ ಘಟಕಗಳ ಕರ್ತವ್ಯಗಳು ಮತ್ತು ಕಟ್ಟುಪಾಡುಗಳನ್ನು ಪಟ್ಟಿ ಮಾಡಿದೆ.
- ಗ್ರಾಹಕರ ಹಕ್ಕುಗಳ ಉಲ್ಲಂಘನೆ, ನ್ಯಾಯಯುತವಲ್ಲದ ವ್ಯಾಪಾರ ಅಭ್ಯಾಸಗಳು ಮತ್ತು ಸುಳ್ಳು ಅಥವಾ ದಾರಿ ತಪ್ಪಿಸುವ ಜಾಹೀರಾತುಗಳಿಗೆ ಸಂಬಂಧಿಸಿದ ವಿಷಯಗಳನ್ನು ನಿಯಂತ್ರಿಸಲು 2020ರ ಜುಲೈನಲ್ಲಿ ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವನ್ನು [ಸಿಸಿಪಿಎ] ಸ್ಥಾಪಿಸಲಾಗಿದೆ.
- ಅಗತ್ಯ ಸರಕುಗಳ ಪಟ್ಟಿಯಲ್ಲಿ ಮುಖಗವಸುಗಳು ಮತ್ತು ಕರ ಶುಚಿಗೊಳಿಸುವ ಸ್ಯಾನಿಟೈಸರ್‌ಗಳನ್ನು ಅಗತ್ಯವಸ್ತುಗಳ ಕಾಯ್ದೆಯಡಿ 2020ರ ಜೂನ್‌ವರೆಗೆ ಸೇರ್ಪಡೆ ಮಾಡಲಾಗಿದೆ. ಸಾಂಕ್ರಾಮಿಕದ ನಡುವೆ ಇವುಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ, ನಿಯಮಬಾಹಿರವಾಗಿ ಸಂಗ್ರಹ ಮಾಡುವುದನ್ನು ನಿಲ್ಲಿಸುವ ಮತ್ತು ಪೂರೈಕೆ ಕೊರತೆ ನಿವಾರಿಸಲು ಕ್ರಮ.
- ದೂರುಗಳನ್ನು ಸಲ್ಲಿಸಲು ಕರೆ ಮಾಡಬೇಕಾದ ರಾಷ್ಟ್ರೀಯ ಸಹಾಯವಾಣಿ : 1800–11–4000 ಅಥವಾ 14404 ಅಥವಾ ಲಾಗಿನ್ ಆಗಿ https://consumerhelpline.gov.



“ವಿಶ್ವ ಗ್ರಾಹಕ ಹಕ್ಕುಗಳ ದಿನಕ್ಕೆ ಶುಭಾಶಯಗಳು. ಆರ್ಥಿಕತೆಯಲ್ಲಿ ಗ್ರಾಹಕರು ಮಹತ್ವದ ಪಾತ್ರ ವಹಿಸಲಿದ್ದಾರೆ. ಗ್ರಾಹಕರ ರಕ್ಷಣೆಯಷ್ಟೇ ಅಲ್ಲದೇ ಗ್ರಾಹಕರ ಸಮೃದ್ಧತೆಯನ್ನೂ ಸಹ ಸರ್ಕಾರ ಕೇಂದ್ರೀಕರಿಸಿದೆ.

–ಪ್ರಧಾನ ಮಂತ್ರಿ ನರೇಂದ್ರ ಮೋದಿ

**ಸಂಪಾದಕ**
ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪಿಐಬಿ, ನವದೆಹಲಿ

**ಸಲಹಾ ಸಂಪಾದಕರು**
ವಿನೋದ್ ಕುಮಾರ್
ಸಂತೋಷ್ ಕುಮಾರ್

**ವಿನ್ಯಾಸಕ**
ರವೀಂದ್ರ ಕುಮಾರ್ ಶರ್ಮ

**ಮುದ್ರಕರು ಮತ್ತು ಪ್ರಕಾಶಕರು**
ಸತ್ಯೇಂದ್ರ ಪ್ರಕಾಶ್
ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್ ಪರವಾಗಿ

**ಮುದ್ರಣಾಲಯ**
ಇನ್‌ಫಿನಿಟಿ ಅಡ್ವರ್ಟೈಸಿಂಗ್
ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ–ಒನ್ ಕಾರ್ಪೋರೇಟ್
ಪಾರ್ಕ್, 10ನೇ ಮಹಡಿ,
ನವದೆಹಲಿ–ಫರೀದಾಬಾದ್ ಬಾರ್ಡರ್
ಎನ್‌ಹೆಚ್–1 ಫರೀದಾಬಾದ್–121003

**ಪ್ರಕಾಶಕರು**
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್
2ನೇ ಮಹಡಿ, ಸೂಚನಾ ಭವನ,
ನವದೆಹಲಿ–110003

ನ್ಯೂ ಇಂಡಿಯಾ ಸಮಾಚಾರ

RNI No. : DELKAN/2020/78828

response-nis@pib.gov.in


# ನ್ಯೂ ಇಂಡಿಯಾ ಸಮಾಚಾರ


ಸಂಪುಟ 1, ಸಂಚಿಕೆ 17 ಮಾರ್ಚ್ 1-15, 2021


## ಒಳಗೆ


| | | |
|---|---|---|
| 1 | ಸಂಪಾದಕೀಯ | ಪುಟ. 02 |
| 2 | ಅಂಚೆ ಪೆಟ್ಟಿಗೆ | ಪುಟ. 03 |
| 3 | ಸುದ್ದಿ ತುಣುಕುಗಳು | ಪುಟ.04-05 |
| 4 | ಮಹಿಳಾ ದಿನ | ಪುಟ.06-08 |
| 5 | ಪ್ರಧಾನ ಮಂತ್ರಿ ಅವರ ಕೇರಳ ಮತ್ತು ತಮಿಳುನಾಡು ಭೇಟಿ | ಪುಟ. 09 |
| 6 | ಮಹಾತ್ವಾಕಾಂಕ್ಷಿ ಯೋಜನೆ | ಪುಟ.10-11 |
| 7 | ಸಂಸತ್ತಿನಲ್ಲಿ ಪ್ರಧಾನ ಮಂತ್ರಿ | ಪುಟ.12-13 |
| 8 | ಮುಖಪುಟ ಲೇಖನ | ಪುಟ.14-23 |
| 9 | ವ್ಯಕ್ತಿತ್ವ | ಪುಟ. 24 |
| 10 | ಲಡಾಖ್‌ನಲ್ಲಿ ಸೇನೆ ಹಿಂತೆಗೆತ | ಪುಟ. 25 |
| 11 | ಏರೋ ಇಂಡಿಯಾ | ಪುಟ.26-27 |
| 12 | ವನ್ಯಜೀವಿ ರಕ್ಷಣೆ | ಪುಟ. 28-30 |
| 13 | ಕೊರೊನಾ ವಿರುದ್ಧ ಸಮರ | ಪುಟ. 31 |
| 14 | ಆರೋಗ್ಯ | ಪುಟ.32-33 |
| 15 | ಅವಿಸ್ಮರಣೀಯರು: ಮಹಾರಾಜ ಸುಹೇಲ್‌ದೇವ್ | ಪುಟ. 34-35 |
| 16 | ವಿಶೇಷ ವರದಿ | ಪುಟ. 36-39 |
| 17 | ಸಕಾರಾತ್ಮಕ ಕ್ರಮ | ಪುಟ. 40 |

# ಸಂಪಾದಕೀಯ

ನಮಸ್ಕಾರ!

ದಿ ನ್ಯೂ ಇಂಡಿಯಾ ಸಮಾಚಾರ ಓದುಗರಿಂದ ಲವಲವಿಕೆಯ ಪ್ರತಿಕ್ರಿಯೆ ಪಡೆಯುತ್ತಿದೆ. ಇದೇ ಕಾಲಕ್ಕೆ ಸರ್ಕಾರದ ಮೇಲೆ ಜನರ ನಂಬಿಕೆಯೂ ವೃದ್ಧಿಸುತ್ತಿದ್ದು, ಇದರಿಂದ ಹೆಚ್ಚು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹೊಸ ಶಕ್ತಿ ದೊರೆತಿದೆ ಮತ್ತು ದೇಶದ ಪ್ರಗತಿ ಪಥವನ್ನು ಮುಂದಕ್ಕೆ ಕೊಂಡೊಯ್ಯುತ್ತಿರುವ ಬಗ್ಗೆ ವರದಿ ನೀಡುವ ಪ್ರಯತ್ನ ನಮ್ಮದಾಗಿದೆ. 2014ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಧಿಕಾರ ವಹಿಸಿಕೊಂಡ ನಂತರ ಈಶಾನ್ಯ ರಾಜ್ಯಗಳನ್ನು ಕೇಂದ್ರೀಕರಿಸಿ "ಪೂರ್ವದತ್ತ ಕಾರ್ಯಪ್ರವೃತ್ತನಾಗು" ನೀತಿಯನ್ನು ಜಾರಿಗೆ ತಂದರು. ಇದರಡಿ ಈ ಪ್ರದೇಶ ಹೆದ್ದಾರಿಗಳು, ಐ–ವೇಗಳು, ರೈಲ್ವೆಗಳು ಮತ್ತು ವಾಯುಮಾರ್ಗಗಳಿಂದ ಸಂಪರ್ಕ ಹೊಂದಿದ್ದು, ಜನರ ಜೀವನ ಸುಗಮವಾಗಿದೆ.

ಪತ್ರಿಕೆಯ ಈ ಆವೃತ್ತಿ ಪೂರ್ವ ಭಾರತದ ಯಶೋಗಾಥೆಯನ್ನು ಒಳಗೊಂಡಿದ್ದು, ಈ ಭಾಗ ಒಂದು ಕಾಲದಲ್ಲಿ ವ್ಯವಹಾರದ ಕೇಂದ್ರವಾಗಿತ್ತು. ಪೂರ್ವ ಭಾರತವನ್ನು ಸರ್ಕಾರ ಇದೀಗ ಪ್ರಗತಿಪಥದ ಚಾಲಕನನ್ನಾಗಿ ಮಾಡುತ್ತಿದೆ. ಇಡೀ ಈಶಾನ್ಯ ಪ್ರದೇಶದೊಂದಿಗೆ ಪಶ್ಚಿಮ ಬಂಗಾಳ ಈ ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸಲಿದೆ.

ಅಂತಾರಾಷ್ಟ್ರೀಯ ಮಹಿಳೆಯರ ದಿನದ ಹಿನ್ನೆಲೆಯಲ್ಲಿ ಈ ಆವೃತ್ತಿಯಲ್ಲಿ ದೇಶದ ಮಹಿಳಾ ಸಾಧಕಿಯರ ಕಥೆಗಳನ್ನು ಸಹ ಕಟ್ಟಿಕೊಡುತ್ತಿದ್ದೇವೆ. ವನ್ಯ ಜೀವಿಗಳ ಸಂರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಸಹ ನೀವು ಓದಬಹುದು. ಈ ಸಂಚಿಕೆಯಲ್ಲಿ ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್‌ಧನ್ ಯೋಜನೆಯ ವರದಿ ಜತೆಗೆ ದಕ್ಷಿಣ ರಾಜ್ಯಗಳ ವರದಿಗಳಿವೆ.

ಅದೇ ಪ್ರೀತಿ ಮತ್ತು ವಿಶ್ವಾಸದೊಂದಿಗೆ ನಿಮ್ಮ ಪ್ರತಿಕ್ರಿಯೆಯನ್ನು ನಮಗೆ ಬರೆಯಿರಿ.

ವಿಳಾಸ : ಬ್ಯೂರೋ ಆಫ್ ಔಟ್‌ರೀಚ್ ಅಂಡ್ ಕಮ್ಯುನಿಕೇಷನ್,
ಎರಡನೇ ಮಹಡಿ, ಸೂಚನಾ ಭವನ್, ನವದೆಹಲಿ – 110003

ಇ–ಮೇಲ್ : response-nis@pib.gov.in

(ಜೈದೀಪ್ ಭಟ್ನಾಗರ್)

# ಅಂಚೆ ಪೆಟ್ಟಿಗೆ




ಮಾನ್ಯರೆ,

ನ್ಯೂ ಇಂಡಿಯಾ ಸಮಾಚಾರ್ ಪತ್ರಿಕೆಯನ್ನು ಸ್ವೀಕರಿಸಲು ಮತ್ತು ಓದಲು ನನಗೆ ಸಂತಸವಾಗುತ್ತಿದೆ. ಭಾರತದ ಬಗ್ಗೆ ನೈಜ ಸುದ್ದಿಗಳನ್ನು ಪ್ರಕಟಿಸುವುದು ನಿಜಕ್ಕೂ ಉತ್ತಮ ಉಪಕ್ರಮ. ದೇಶ ಮತ್ತು ಜನತೆಯ ಒಟ್ಟಾರೆ ಹಿತಾಸಕ್ತಿ ಮತ್ತು ಸರ್ಕಾರದ ಚಟುವಟಿಕೆಗಳು ಇದರಲ್ಲಿವೆ. ಇದು ಮುದ್ರಣ ಮಾಧ್ಯಮವಾಗಿದೆ ಮತ್ತು ಇದರ ಮೂಲಕ ಕಾರ್ಯಕ್ರಮಗಳು ಮತ್ತು ದೇಶದ ಅಭಿವೃದ್ಧಿ ಚಟುವಟಿಕೆಗಳನ್ನು ನೀಡಲಾಗುತ್ತಿದೆ. ಸಾಗರೋತ್ತರ ಭಾರತೀಯರಿಗೂ ಇದನ್ನು ತಲುಪಿಸಬೇಕೆಂದು ಸಲಹೆ ನೀಡುತ್ತಿದ್ದೇನೆ.

ಈ ಪತ್ರಿಕೆ ಶಾಲೆಗಳು, ಕಾಲೇಜುಗಳು, ವಿಶ್ವ ವಿದ್ಯಾಲಯಗಳು, ಯುವ ಸಮೂಹ, ಶಿಕ್ಷಕರು ಮತ್ತು ಪ್ರಾಧ್ಯಾಪಕರು ಸಹ ಹೊಸ ಯೋಜನೆಗಳು ಮತ್ತು ಅಭಿವೃದ್ಧಿ ಕುರಿತು ತಿಳಿದುಕೊಳ್ಳಲು ಸಹಕಾರಿಯಾಗಿದೆ. ಒಟ್ಟಾರೆ ಸುದ್ದಿ ಮತ್ತು ದೇಶದ ಅಭಿವೃದ್ಧಿ ಕುರಿತು ಹೆಚ್ಚು ಕಲಿಯಲು ನಾನು ಬಯಸುತ್ತೇನೆ. ನಿಮಗೆ ಎಲ್ಲಾ ರೀತಿಯಲ್ಲೂ ಯಶಸ್ಸು ಲಭಿಸಲಿ.

**ಜೈ ಹಿಂದ್**
**ಕೌಶಿಕ್ ವ್ಯಾಸ್**

ಮಾನ್ಯರೆ,

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಇ-ಆವೃತ್ತಿಯನ್ನು ಆರಂಭಿಸಿರುವುದು ಉತ್ತಮ ಕ್ರಮವಾಗಿದೆ ಮತ್ತು ಪತ್ರಿಕೆಯನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿರುವುದಕ್ಕೆ ಧನ್ಯವಾದಗಳು. ಇತ್ತೀಚಿನ ಆರ್ಥಿಕ ಬೆಳವಣಿಗೆ, ಸಾಮಾಜಿಕ ನೀತಿಗಳು, ವೈಜ್ಞಾನಿಕ ಅನುಶೋಧನೆಗಳ ಕುರಿತ ಮೌಲ್ಯಯುತ ಮಾಹಿತಿ ವಿದ್ಯಾರ್ಥಿಗಳಿಗೆ ಹೆಚ್ಚು ಉಪಕಾರಿಯಾಗಿದೆ. ಯುವ ಮನಸ್ಸುಗಳ ಮೇಲೆ ಪತ್ರಿಕೆ ಅತ್ಯುತ್ತಮ ಪರಿಣಾಮ ಉಂಟು ಮಾಡುವ ವಿಶ್ವಾಸವಿದೆ. ನಿಮಗೆ ಎಲ್ಲಾ ರೀತಿಯಲ್ಲೂ ಶುಭವಾಗಲಿ.

**ಡಾ|| ಎಸ್.ಟಿ. ರಾಘವಾಮ, ಸಹಾಯಕ ಪ್ರಾಧ್ಯಾಪಕರು,**
**ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್,**
**ಆಂಧ್ರ ಪ್ರದೇಶ. stvraghavamma@gmail.com**

ಮಾನ್ಯರೆ.

ಈ ಸುದ್ದಿ ಪತ್ರಿಕೆ ಪ್ರಕಟವಾಗುತ್ತಿರುವುದಷ್ಟೇ ಅಲ್ಲದೇ ಪ್ರತಿಯೊಂದು ಮಾಹಿತಿಯ ಅಂಶಗಳನ್ನು ಇದರಲ್ಲಿ ನೀಡುತ್ತಿರುವುದಕ್ಕೆ ನಿಮಗೆ ಸ್ವಾಗತ ಮತ್ತು ಧನ್ಯವಾದಗಳು. ಇದರ ಜತೆಗೆ "ನಿಮ್ಮ ಮಗುವನ್ನು ಹೇಗೆ ಸೂಕ್ತ ದಿಕ್ಕಿನತ್ತ ಕರೆದೊಯ್ಯಬಹುದು" ಎಂಬ ವಿಷಯ ಕುರಿತು ಕೆಲವು ಮಾಹಿತಿಯನ್ನು ಸೇರ್ಪಡೆ ಮಾಡಬೇಕೆಂದು ತಮಗೆ ನಾನು ಸಲಹೆ ನೀಡುತ್ತಿದ್ದೇನೆ.

**ಧನ್ಯವಾದಗಳು.**

**ಪ್ರಕಾಶ್ ಭೂಷಣ್**
**mailme_prakashbhushan@rediffmail.com**

ಮಾನ್ಯರೆ,

ನ್ಯೂ ಇಂಡಿಯಾ ಸಮಾಚಾರ್‌ನ ಸಂಪಾದಕ ತಂಡಕ್ಕೆ ಅಭಿನಂದನೆಗಳು. ನಾನು ಸಂಪುಟ 1 ಮತ್ತು ಸಂಚಿಕೆ 15 ಅನ್ನು ಮೊದಲ ಬಾರಿಗೆ ನೋಡಿದೆ. ಕೋವಿಡ್-19 ವಿರುದ್ಧ ಸಮರ, ಸುಸ್ಥಿರ ಅಭಿವೃದ್ಧಿ ಮತ್ತು ಭಾರತದ ಬದ್ಧತೆ ಕುರಿತ ಪ್ರತಿಯೊಂದು ಮಾಹಿತಿಯುಕ್ತ ಲೇಖನಗಳು ಅತ್ಯುತ್ತಮವಾಗಿವೆ. ಪತ್ರಿಕೆಯ ಹೆಸರನ್ನು ಯಾವುದೇ ಕಾರಣಕ್ಕೂ ಬದಲಿಸಬೇಡಿ ಎಂದು ಸಲಹೆಯನ್ನು ನೀಡುತ್ತಿದ್ದೇನೆ. ಈ ಪತ್ರಿಕೆಗೆ ಅತ್ಯುತ್ತಮ ಯಶಸ್ಸು ಲಭಿಸಲಿ.

**ಧನ್ಯವಾದಗಳು ಮತ್ತು ಅಭಿನಂದನೆಗಳು**

**ಎ.ಬಿ.ಎಸ್.ವಿ. ಪ್ರಸಾದ್ ರಾವ್,**
**ಹಿರಿಯ ವಿಜ್ಞಾನಿ [ನಿವೃತ್ತ], ಇಸ್ರೋ, ಹೈದರಾಬಾದ್, ತೆಲಂಗಾಣ**
**anupojukk@gmail.com**

ನಮಸ್ತೆ,

ಫೆ. 1-15 ರ ನ್ಯೂ ಇಂಡಿಯಾ ಸಮಾಚಾರ್ ಸಂಚಿಕೆಯನ್ನು ಓದಿ ಅಚ್ಚರಿಗೊಂಡಿದ್ದೇನೆ. ವೈವಿಧ್ಯಮಯ ಪ್ರದೇಶಗಳನ್ನು ಒಳಗೊಂಡ ವಿಷಯ ಬಹಳ ತಿಳಿವಳಿಕೆಯಿಂದ ಕೂಡಿದೆ. ದೈನಂದಿನ ವೃತ್ತ ಪತ್ರಿಕೆ ಓದುವ ನನ್ನಂತಹವರಿಗಷ್ಟೇ ಅಲ್ಲದೇ, ಯು.ಪಿ.ಎಸ್.ಸಿ, ಎನ್.ಡಿ.ಎ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುತ್ತಿರುವವರಿಗೆ ಪ್ರಯೋಜನಕಾರಿ. ನ್ಯೂ ಇಂಡಿಯಾ ಸಮಾಚಾರ್ ತಂಡದ ಪ್ರತಿಯೊಬ್ಬರಿಗೂ ನನ್ನ ಶುಭಾಶಯಗಳು. ಉತ್ತಮ ಕೆಲಸಗಳನ್ನು ಮುಂದುವರಿಸಿ.

**ಅಭಿನಂದನೆಗಳು.**

**ಆನಂದ್ ಕಿಶೋರ್ ಪಾಂಡೆ, ನವ ದೆಹಲಿ.**
**pandey.anandkishore6@gmail.com**

## ಡಿಜಿಟಲ್ ಕ್ಯಾಲೆಂಡರ್




**ಭಾರತ ಸರ್ಕಾರದ**
**ಡಿಜಿಟಲ್ ಕ್ಯಾಲೆಂಡರ್ ಮತ್ತು ಡೈರಿಯು**
**ಅಧಿಕೃತ ರಜಾದಿನಗಳ ಪಟ್ಟಿ ಮತ್ತು**
**ವಿವಿಧ ಪ್ರಮುಖ ದಿನಾಂಕಗಳ ಜೊತೆಗೆ**
**ಸರ್ಕಾರದ ವಿವಿಧ ಯೋಜನೆಗಳು,**
**ಘಟನೆಗಳು ಮತ್ತು ಪ್ರಕಟಣೆಗಳ ಬಗ್ಗೆ**
**ಇತ್ತೀಚಿನ ಮಾಹಿತಿಯನ್ನು ಒದಗಿಸುತ್ತದೆ**

ಇದನ್ನು ಗೂಗಲ್ ಪ್ಲೇ ಸ್ಟೋರ್ ಮತ್ತು ಐಒಎಸ್‌ನಿಂದ ಡೌನ್ಲೋಡ್ ಮಾಡಬಹುದು

ಗೂಗಲ್ ಪ್ಲೇ ಸ್ಟೋರ್ ಲಿಂಕ್
https://play.google.com/store/apps/details?id=in.gov.calendar

ಐಒಎಸ್ ಲಿಂಕ್
https://apps.apple.com/in/app/goi-calendar/id1546365594

**https://goicalendar.gov.in/**

# ಹೊಸ ರಾಜ್‌ಪಥದಲ್ಲಿ ಮುಂದಿನ ವರ್ಷದ ಗಣರಾಜ್ಯೋತ್ಸವ

ಭಾರತ 2022ರಲ್ಲಿ 75ನೇ ಸ್ವಾತಂತ್ರ್ಯೋತ್ಸವಕ್ಕೆ ಪ್ರವೇಶಿಸಲಿದ್ದು, ಈ ಸಮಾರಂಭ ಮತ್ತೊಂದು ಮೈಲಿಗಲ್ಲಿಗೆ ಸಾಕ್ಷಿಯಾಗಲಿದೆ. ಹೊಸ ರಾಜ್‌ಪಥದಲ್ಲಿ ಗಣರಾಜ್ಯೋತ್ಸವ ಸಮಾರಂಭವನ್ನು ಆಯೋಜಿಸಲಾಗುತ್ತಿದೆ. 2021ರ ಫೆಬ್ರವರಿ 4 ರಂದು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಖಾತೆ [ಸ್ವತಂತ್ರ್ಯ ನಿರ್ವಹಣೆ] ಸಚಿವ ಹರ್ದೀಪ್ ಎಸ್ ಪುರಿ ಅವರು ಸೆಂಟ್ರಲ್ ವಿಸ್ತಾ ಮಾರ್ಗದಲ್ಲಿ ಭೂಮಿ ಪೂಜೆ ನೆರವೇರಿಸಿದರು. ಈ ಯೋಜನೆಯ ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳ್ಳಲಿದೆ. ಬ್ರಿಟಿಷರು ನಿರ್ಮಿಸಿದ್ದ ಮೂಲ ಸೌಕರ್ಯದಿಂದ ಭಾರತ 75ನೇ ಸ್ವಾತಂತ್ರ್ಯೋತ್ಸವದ ವೇಳೆಗೆ ಹೊರ ಬರಲಿದೆ. ಅಲ್ಲದೇ ಭಾರತ 74ನೇ ಗಣರಾಜ್ಯೋತ್ಸವದ ಮೆರವಣಿಗೆ ನಡೆಸುವಾಗ ರಾಜ್‌ಪಥ್‌ಗೆ ಹೊಸ ಸೊಬಗು ಇರುತ್ತದೆ. ಈ ಯೋಜನೆಯಡಿ ರಾಜ್‌ಪಥ್ ಆಸುಪಾಸಿನಲ್ಲಿ ಹಸಿರಿರುವ ಪ್ರದೇಶ ಹೆಚ್ಚಾಗಲಿದೆ ಮತ್ತು ಸಾರ್ವಜನಿಕ ಅವಶ್ಯಕತೆಗಳಾದ ಶೌಚಾಲಯಗಳು, ಕುಡಿಯುವ ನೀರು, ವಾಹನ ನಿಲುಗಡೆ ಮತ್ತಿತರ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.



## ಕೇಂದ್ರ ಸಶಸ್ತ್ರ ಮೀಸಲು ಪಡೆಗಳ ಸಿಬ್ಬಂದಿ, ಅವಲಂಬಿತರಿಗೆ ಆಯುಷ್ಮಾನ್ ಸಿ.ಎ.ಪಿ.ಎಫ್




ವಿಶ್ವದ ಅತಿ ದೊಡ್ಡ, ಆರೋಗ್ಯ ಸೇವಾ ಯೋಜನೆ – ಆಯುಷ್ಮಾನ್ ಭಾರತ್‌ನಡಿ ಐದು ಲಕ್ಷ ರೂಪಾಯಿವರೆಗೆ ಉಚಿತ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮವನ್ನು ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ [ಸಿ.ಎ.ಪಿ.ಎಫ್] ಗಳಿಗೆ ವಿಸ್ತರಿಸಲಾಗಿದೆ. "ಆಯುಷ್ಮಾನ್ ಸಿ.ಎ.ಪಿ.ಎಫ್" ಕಾರ್ಯಕ್ರಮ 2021, ಮೇ 1 ರ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾಗಲಿದೆ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜನ್ಮ ದಿನಾಚರಣೆ ಅಂಗವಾಗಿ ಜನವರಿ 23 ರಂದು "ಪರಿಕ್ರಮ್ ದಿವಸ್" ಆಚರಿಸಲಾಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಸ್ಸಾಂನ ಗುವಾಹಾತಿಯಲ್ಲಿ ನಡೆದ ಸಮಾರಂಭವನ್ನು ಉದ್ಘಾಟಿಸಿದರು. ಈ ಯೋಜನೆಯನ್ನು ಆರಂಭಿಸಲು ಇದಕ್ಕಿಂತ ಉತ್ತಮ ದಿನ ಇಲ್ಲ ಎಂದು ಅಮಿತ್ ಶಾ ಹೇಳಿದರು. ಈ ಕಾರ್ಯಕ್ರಮದಡಿ ಸಿ.ಎ.ಪಿ.ಎಫ್ ಸಿಬ್ಬಂದಿ ಮತ್ತು ಅವರ ಕುಟುಂಬಗಳು 24,000 ಆಸ್ಪತ್ರೆಗಳಲ್ಲಿ ಸರಳವಾಗಿ ಕಾರ್ಡ್ ಬಳಸುವ ಮೂಲಕ ಈ ಯೋಜನೆಯ ಸೌಲಭ್ಯ ಪಡೆಯಲಿದ್ದಾರೆ.

## 5 ತಿಂಗಳ ಮಗುವಿನ ಚಿಕಿತ್ಸೆಗೆ 6 ಕೋಟಿ ರೂ. ಮೊತ್ತದ ಔಷಧ ಆಮದು ಸುಂಕದಲ್ಲಿ ಜಿಎಸ್‌ಟಿ ಮನ್ನಾ

ಅಪರೂಪದ ಆನುವಂಶಿಕ ಕಾಯಿಲೆಯಿಂದ ಬಳಲುತ್ತಿರುವ ಐದು ತಿಂಗಳ ಮಗುವಿನ ದೇಹಸ್ಥಿತಿಯ ವಿಚಾರದಲ್ಲಿ ಸೂಕ್ಷ್ಮತೆ ತೋರಿ ಸರ್ಕಾರ 6 ಕೋಟಿ ರೂ. ಆಮದು ಸುಂಕ ಮತ್ತು ಆಮದು ಔಷಧದ ಮೇಲಿನ ಜಿಎಸ್‌ಟಿ ಮನ್ನಾ ಮಾಡಿದೆ. ಐದು ತಿಂಗಳ ತೀರಾ ಕಾಮತ್ ಸ್ಪೈನಲ್ ಮಸ್ಕ್ಯುಲಾರ್ ಅಟ್ರೊಪಿ [ಎಸ್‌ಎಂಎ] ಟೈಪ್–1 ನಿಂದ



ಬಳಲುತ್ತಿದೆ. ಈ ಕಾಯಿಲೆಯಲ್ಲಿ ನರಕೋಶಗಳ ಸಂಪೂರ್ಣ ಸ್ಥಗಿತವು ಸ್ನಾಯುವಿನ ಮೇಲೆ ಶೂನ್ಯ ನಿಯಂತ್ರಣಕ್ಕೆ ಕಾರಣವಾಗಿದೆ. ಇದಕ್ಕೆ ಬಳಸುವ ಜೊಲ್ಗೆನ್‌ಸ್ಮಾ ಔಷಧವನ್ನು ಅಮೇರಿಕದಿಂದ ಆಮದು ಮಾಡಿಕೊಳ್ಳಲಾಗಿದೆ ಮತ್ತು ಇದರ ವೆಚ್ಚ 16 ಕೋಟಿ ರೂಪಾಯಿ. ಚಿಕಿತ್ಸೆಗೆ ಬೇಕಾದ ಔಷಧ ಪಡೆಯಲು ಈ ಕುಟುಂಬ ಕ್ರೌಡ್ ಫಂಡಿಂಗ್ ಮೂಲಕ ಹಣ ಸಂಗ್ರಹಿಸಿತ್ತಲ್ಲದೇ ಆಮದು ಸುಂಕ ಮತ್ತು ಆಮದು ಔಷಧಗಳ ಮೇಲಿನ ಜಿಎಸ್‌ಟಿ ಮನ್ನಾ ಮಾಡುವಂತೆ ವಿನಂತಿಸುತ್ತಿತ್ತು. ಇದನ್ನು ಪರಿಗಣಿಸಿದ ಸರ್ಕಾರ, 2021ರ ಫೆಬ್ರವರಿ 9 ರಂದು ಎಲ್ಲಾ ತೆರಿಗೆಗಳನ್ನು ಮನ್ನಾ ಮಾಡಿ ಈ ಕುಟುಂಬವನ್ನು ಚಕಿತಗೊಳಿಸಿತು.

# ಯುವ ಬರಹಗಾರರ ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ ಪ್ರಾರಂಭ

2022ರಲ್ಲಿ ಭಾರತ 75ನೇ ಸ್ವಾತಂತ್ರ್ಯೋತ್ಸವ ಆಚರಿಸುತ್ತಿದ್ದು, ಯುವ ಲೇಖಕರಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಸರ್ಕಾರ ರಾಷ್ಟ್ರೀಯ ಯೋಜನೆ ಪ್ರಾರಂಭಿಸುತ್ತಿದೆ. 2021ರ ಜನವರಿ 31 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಮನ್ ಕಿ ಬಾತ್'ನಲ್ಲಿ ಈ ಕುರಿತು ಮಾತನಾಡಿದರು. ವೈವಿಧ್ಯಮಯ ವಿಷಯಗಳ ಬಗ್ಗೆ ಬರೆಯಬಲ್ಲ ಬರಹಗಾರರ ತಂಡವನ್ನು ಅಭಿವೃದ್ಧಿಪಡಿಸಲು ಇದು ಸಹಕಾರಿ. ಜತೆಗೆ ಮಾತೃಭಾಷೆಯಲ್ಲಿ ತಮ್ಮನ್ನು ತಾವು ನಿರೂಪಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಈ ಯೋಜನೆಯು 22 ಭಾರತೀಯ ಭಾಷೆಗಳಲ್ಲಿ ಲೇಖಕರ ಗುಂಪನ್ನು ರೂಪಿಸುವ ಹಾಗು ಪೋಷಿಸುವ ಗುರಿ ಹೊಂದಿದೆ. ಯುವ ಲೇಖಕರಿಗೆ ಕಾದಂಬರಿ, ಕಾಲ್ಪನಿಕವಲ್ಲದ ಪ್ರವಾಸ ಕಥನ, ನೆನಪುಗಳು, ನಾಟಕ, ಕವನ ಮುಂತಾದ ಹಲವು ಪ್ರಕಾರಗಳಲ್ಲಿ ಬರೆಯಲು ಮಾರ್ಗದರ್ಶನ ನೀಡಲಾಗುತ್ತದೆ. ರಾಷ್ಟ್ರೀಯ ಬುಕ್ ಟ್ರಸ್ಟ್ [ಎನ್.ಬಿ.ಟಿ] ಲೇಖಕರಿಗೆ ಎರಡು ಹಂತಗಳಲ್ಲಿ ತರಬೇತಿ ಕಾರ್ಯಕ್ರಮ ಆಯೋಜಿಸಿದೆ. ಮೊದಲ ಹಂತದಲ್ಲಿ ಎರಡು ವಾರಗಳ ಆನ್‌ಲೈನ್ ಕಾರ್ಯಕ್ರಮ ಏರ್ಪಡಿಸಿದೆ. ಪ್ರತಿಯೊಂದು ಭಾಷೆಯಲ್ಲೂ ಇಬ್ಬರು ತಜ್ಞ ಬರಹಗಾರ ಮಾರ್ಗದರ್ಶಕರುಗಳನ್ನು ಎನ್‌ಬಿಟಿ ನಿಯೋಜಿಸುತ್ತಿದ್ದು, ಇವರು ಬರಹಗಾರರಿಗೆ ತರಬೇತಿ ನೀಡಲಿದ್ದಾರೆ. ಎರಡನೇ ಹಂತದಲ್ಲಿ ಸಾಹಿತ್ಯ ಉತ್ಸವಗಳು, ಪುಸ್ತಕ ಮೇಳಗಳು, ವರ್ಚುವಲ್ ಪುಸ್ತಕ ಮೇಳ, ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು ಮುಂತಾದ ವಿವಿಧ ಅಂತಾರಾಷ್ಟ್ರೀಯ ಕಾರ್ಯಕ್ರಮದಲ್ಲಿ ಪರಸ್ಪರ ಸಂವಾದದ ಮೂಲಕ ತಮ್ಮ ಕೌಶಲ ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಮಾರ್ಗದರ್ಶನ ಕಾರ್ಯಕ್ರಮದಲ್ಲಿ ಯುವ ಲೇಖಕರು ರಚಿಸುವ ಒಂದು ಪುಸ್ತಕ ಅಥವಾ ಸರಣಿ ಪುಸ್ತಕಗಳನ್ನು ಎನ್‌ಬಿಟಿ ಪ್ರಕಟಿಸಲಿದೆ. ಅರ್ಜಿ ಸಲ್ಲಿಸಲು ಸಂಪರ್ಕಿಸಬೇಕಾದ ವಿಳಾಸ: director@nbtindia.gov.in.

## ಸುಮಾರು ನಾಲ್ಕು ದಶಕಗಳ ನಂತರ ಅಲಪ್ಪುರ ಬೈಪಾಸ್ ಸಾರ್ವಜನಿಕರಿಗೆ ಮುಕ್ತ



ಸುಮಾರು ನಾಲ್ಕು ದಶಕಗಳ ಕಾಯುವಿಕೆ ನಂತರ 2021ರ ಜನವರಿ 28 ರಂದು ಕೇರಳದ 6.8 ಕಿಲೋಮೀಟರ್ ಉದ್ದದ ಅಲಪ್ಪುರ ಬೈಪಾಸ್ ರಸ್ತೆಯನ್ನು ಸಾರ್ವಜನಿಕ ಸೇವೆಗಾಗಿ ಮುಕ್ತಗೊಳಿಸಲಾಯಿತು. ಈ ಯೋಜನೆಗೆ 348 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇದು ಕೊಮ್ಮಾಡಿಯಿಂದ ಕಲರ್ಕೋಡ್ ನಡುವೆ ಸಂಪರ್ಕ ಕಲ್ಪಿಸಲಿದೆ. ಈ ಬೈಪಾಸ್ ತಿರುವನಂತಪುರಂ–ಎರ್ನಾಕುಲಂ ನಡುವಿನ ಸಂಚಾರದ ಅಡಚಣೆಗಳನ್ನು ನಿವಾರಿಸಲಿದ್ದು, ಪ್ರಯಾಣಿಕರಿಗೆ ಸುಗಮ ಸಾರಿಗೆಯನ್ನು ಖಾತ್ರಿಪಡಿಸಲಿದೆ. 1980ರಲ್ಲಿ ಈ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು, ಆದರೆ ಹಲವಾರು ನಿರ್ಬಂಧಗಳಿಂದಾಗಿ ಮಾರ್ಗ ನಿರ್ಮಾಣ ವಿಳಂಬವಾಗಿತ್ತು. ಈ ಬೈಪಾಸ್‌ನಲ್ಲಿ ಪ್ರಯಾಣಿಸುವುದು ಪ್ರಯಾಣಿಕರಿಗೆ ಆಸಕ್ತಿದಾಯಕವಾಗಿರುತ್ತದೆ. ಏಕೆಂದರೆ ಇದು ಅರೇಬಿಯನ್ ಸಮುದ್ರದ ವಿಹಂಗಮ ನೋಟವನ್ನು ಸಹ ನೀಡುತ್ತದೆ. ಸುಮಾರು 6.8 ಕಿಲೋಮೀಟರ್ ಉದ್ದದಲ್ಲಿ 3.2 ಕಿಲೋಮೀಟರ್ ಎತ್ತರಿಸಿದ ಮಾರ್ಗವನ್ನು ಹೆದ್ದಾರಿಯಂತೆ ನಿರ್ಮಿಸಲಾಗಿದೆ. ಇದು ಅಲಪ್ಪುರ ಕಿನಾರೆಗೆ ಸಮಾನಾಂತರವಾಗಿದ್ದು, ಈ ವಿಸ್ತೃತ ಮಾರ್ಗದಲ್ಲಿ ಜನರಿಗೆ ಸಮುದ್ರದ ಆಕರ್ಷಕ ನೋಟ ಕಾಣಸಿಗುತ್ತದೆ.

## 2030ರ ವೇಳೆಗೆ ಇಂಧನ ಬಳಕೆಯಲ್ಲಿ ಭಾರತ ಮೂರನೇ ದೊಡ್ಡ ರಾಷ್ಟ್ರವಾಗಲಿದೆ



2030ರ ವೇಳೆಗೆ ಭಾರತ ಇಂಧನ ಬಳಕೆಯಲ್ಲಿ ಐರೋಪ್ಯ ಒಕ್ಕೂಟ [ಇಯು]ವನ್ನು ಹಿಂದಿಕ್ಕಲಿದೆ. ಅಂತಾರಾಷ್ಟ್ರೀಯ ಇಂಧನ ಸಂಸ್ಥೆ [ಐಇಎ]ಯ 2021ರ ಎನರ್ಜಿ ಔಟ್‌ಲುಕ್‌ನಲ್ಲಿ ಈ ಅಂದಾಜು ಮಾಡಲಾಗಿದೆ. ಮುಂದಿನ ಎರಡು ದಶಕಗಳಲ್ಲಿ ಇಂಧನ ಬೇಡಿಕೆಯ ಬೆಳವಣಿಗೆಯಲ್ಲಿ ಭಾರತ ಹೆಚ್ಚಿನ ಪಾಲು ಹೊಂದಿರುತ್ತದೆ ಎಂದು ಸಂಸ್ಥೆ ಮುನ್ಸೂಚನೆ ನೀಡಿದೆ. ಸೌರಶಕ್ತಿಯ ಬೆಳವಣಿಗೆ ಹೆಚ್ಚಿನ ರೀತಿಯಲ್ಲಿ ಕಾಣಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಭಾರತದ ವಿದ್ಯುತ್ ಉತ್ಪಾದನೆಯಲ್ಲಿ ಸೌರ ಇಂಧನದ ಪ್ರಮಾಣ ಶೇ.4ಕ್ಕಿಂತ ಕಡಿಮೆ ಇದೆ. 2040ರ ವೇಳೆಗೆ ಶೇ.18ಕ್ಕೆ ಏರಿಕೆಯಾಗಲಿದೆ. ಕೋವಿಡ್–19 ಸಾಂಕ್ರಾಮಿಕದ ಮುನ್ನ 2019 ಮತ್ತು 2030ರ ನಡುವೆ ಭಾರತದ ಇಂಧನ ಬೇಡಿಕೆ ಶೇ.50 ರಷ್ಟು ಹೆಚ್ಚಾಗುತ್ತದೆ ಎಂದು ಅಂದಾಜಿಸಲಾಗಿತ್ತು. ಆದರೆ ಈಗ ಈ ಅವಧಿಯಲ್ಲಿನ ಬೆಳವಣಿಗೆಯು ಶೇ.35 ರಷ್ಟು ಅಂದಾಜಿಸಲಾಗಿದೆ. 2040ರ ವೇಳೆಗೆ ಇತರೆ ಯಾವುದೇ ದೇಶಕ್ಕಿಂತ ಭಾರತ ಇಂಧನ ಬೇಡಿಕೆಯಲ್ಲಿ ಅತಿ ದೊಡ್ಡ ಏರಿಕೆಗೆ ಕಾರಣವಾಗಲಿದೆ. ■

# ಮಹಿಳೆಯರ ಸಂಭ್ರಮಾಚರಣೆ

ಸದೃಢ ಮತ್ತು ಸಶಕ್ತ ಮಹಿಳೆ ಒಂದು ಬಲವಾದ ಶಕ್ತಿ. ಎಲ್ಲ ಅಡೆತಡೆಗಳನ್ನು ಮೀರಿ ಇತಿಹಾಸ ಸೃಷ್ಟಿಸಿದ ಅಂತಹ ಪ್ರಬಲ ಮಹಿಳೆಯರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ನಾವು ಗೌರವ ಸಲ್ಲಿಸುತ್ತಿದ್ದೇವೆ.



ಪ್ರತಿವರ್ಷ ಮಾರ್ಚ್ 8 ರಂದು ಅಂತಾರಾಷ್ಟ್ರೀಯ ಮಹಿಳೆಯರ ದಿನವನ್ನು ಆಚರಿಸುತ್ತೇವೆ. ಇದು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಆಚರಿಸುವ ದಿನ. ಈ ಬಾರಿಯ ಮಹಿಳಾ ದಿನಾಚರಣೆಯ ಧ್ಯೇಯವಾಕ್ಯವೆಂದರೆ ಸವಾಲುಗಳನ್ನು ಆಯ್ಕೆಮಾಡಿ. #ChooseToChallenge ಲಿಂಗ ಸಮಾನತೆಯ ಜಗತ್ತನ್ನು ಸೃಷ್ಟಿಸುವುದು ಇದರ ಹಿಂದಿನ ಉದ್ದೇಶ. ಈ ವರ್ಷದ ಧ್ಯೇಯವಾಕ್ಯಕ್ಕೆ ಅನುಗುಣವಾಗಿ ನಾವು ಮಹಿಳೆಯರ ಸಾಧನೆಗಳನ್ನು ಆಚರಿಸುತ್ತಿದ್ದೇವೆ. ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಒದಗಿಸಿದಾಗ ಮಹಿಳೆಯರು ಸಾಧಿಸಿ, ಪ್ರಕಾಶಮಾನರಾಗಬಹುದು ಎಂಬುದು ಇದರ ಪ್ರಮುಖ ಅಂಶವಾಗಿದೆ.



## ಕಾರ್ನೆಲಿಯ ಸೊರಬ್ಜಿ

ಈಕೆ ಭಾರತದ ಮೊದಲ ಮಹಿಳಾ ವಕೀಲರು. ಮುಂಬೈ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆಯಲ್ಲಿ ಪದವಿ ಶಿಕ್ಷಣ ಪೂರೈಸಿದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಸೇರಿದರು. ಆದರೂ ಇವರು ಪದವಿ ಪಡೆಯಲು ಸಾಧ್ಯವಾಗಲಿಲ್ಲ. ಆ ಕಾಲದಲ್ಲಿ ಯಾವುದೇ ಮಹಿಳೆ ಪದವಿ ಪಡೆದಿರಲಿಲ್ಲ. 1894ರಲ್ಲಿ ಭಾರತಕ್ಕೆ ಮರಳಿದ ಅವರು, ದೀರ್ಘ ಸೆಣಸಾಟದ ನಂತರ ಪರ್ದಾ ಮಹಿಳೆಯರ ಪರವಾಗಿ ವಕಾಲತು ನಡೆಸಿದರು. ಮಹಿಳೆಯರ ವಿದ್ಯಾಭ್ಯಾಸಕ್ಕೆ ಅವಕಾಶವೇ ಇಲ್ಲದಿದ್ದ ಆ ಕಾಲದಲ್ಲಿ ಆಕೆ ವಕೀಲಿಕೆ ನಡೆಸಿದ್ದಷ್ಟೇ ಅಲ್ಲ ಲಿಂಗ ತಾರತಮ್ಯದ ವಿರುದ್ಧವೂ ಹೋರಾಡಿದರು.



## ಆನಂದಿ ಗೋಪಾಲ್ ಜೋಷಿ

ಈಕೆ ಭಾರತದ ಮೊದಲ ಮಹಿಳಾ ವೈದ್ಯರು. ವೈಯಕ್ತಿಕ ದುರಂತದಿಂದಾಗಿ ಇವರಿಗೆ ವೈದ್ಯಕೀಯ ಕಲಿಯುವ ಆಸಕ್ತಿ ಹುಟ್ಟಿಕೊಂಡಿತು. ಸರಿಯಾದ ವೈದ್ಯಕೀಯ ಆರೈಕೆಯಿಲ್ಲದೆ ಈಕೆ 10 ದಿನಗಳ ತನ್ನ ಮಗನನ್ನು ಕಳೆದುಕೊಳ್ಳಬೇಕಾಯಿತು. ಇದು ಅವರಿಗೆ ವೈದ್ಯರಾಗುವ ದೃಢ ನಿಶ್ಚಯಕ್ಕೆ ಕಾರಣವಾಯಿತಲ್ಲದೇ ಈ ರೀತಿಯ ದುರಂತದಿಂದ ಇತರೆ ಮಹಿಳೆಯರನ್ನು ರಕ್ಷಿಸಲು ಸಹಕಾರಿಯಾಯಿತು. 1886ರಲ್ಲಿ ಅಮೇರಿಕಾಗೆ ತೆರಳಿದ ಆನಂದಿ ಗೋಪಾಲ್ ಜೋಷಿ, ವೈದ್ಯಕೀಯ ವಿಭಾಗದಲ್ಲಿ ಎಂಡಿ ಪದವಿ ಪಡೆದರು. ಮಹಿಳೆಯರು ಮನೆಯಿಂದ ಹೊರಗೆ ಕಾಲಿಡಲೂ ಸಾಧ್ಯವಾಗದಿದ್ದಂತಹ ಕಾಲದಲ್ಲಿ ಈಕೆ ಹೆಚ್ಚಿನ ವಿದ್ಯಾಭ್ಯಾಸ ಕೈಗೊಂಡು ಒಂದು ಉತ್ತಮ ನಿದರ್ಶನವಾದರು ಜತೆಗೆ ತಲೆಮಾರುಗಳ ಮಹಿಳೆಯರಲ್ಲಿ ಸ್ಫೂರ್ತಿಗೆ ಕಾರಣರಾದರು.



## ಎ. ಲಲಿತ

ಒಬ್ಬ ಯುವ ವಿಧವೆ ಮತ್ತು ಏಕ ಪೋಷಕಿ. ಎಲ್ಲಾ ಪೂರ್ವಗ್ರಹಗಳನ್ನು ಮುರಿದ ಅವರು ದೇಶದ ಮೊದಲ ಎಲೆಕ್ಟ್ರಿಕಲ್ ಇಂಜಿನಿಯರ್ ಆದರು. ಬಾಲ್ಯದಿಂದಲೂ ಈಕೆ ವಿಜ್ಞಾನದ ಬಗ್ಗೆ ಆಸಕ್ತಿ ಹೊಂದಿದ್ದರು. ತನ್ನ ಪತಿಯ ನಿಧನದ ನಂತರ ಸಾಕಷ್ಟು ಬಗೆಯ ವಿರೋಧ ಎದುರಿಸಿದರೂ ಎಂಜಿನಿಯರಿಂಗ್ ಶಿಕ್ಷಣ ಮುಂದುವರಿಸಲು ನಿರ್ಧರಿಸಿದರು. 1964ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ಇಂಜಿನಿಯರ್‌ಗಳು ಮತ್ತು ವಿಜ್ಞಾನಿಗಳ ಸಮ್ಮೇಳದಲ್ಲಿ ಈಕೆ ಭಾರತವನ್ನು ಪ್ರತಿನಿಧಿಸಿದ್ದರು.



## ಅನ್ನಾ ಚಾಂಡಿ

ಅನ್ನಾ ಚಾಂಡಿ ಭಾರತದ ಮೊದಲ ಮಹಿಳಾ ನ್ಯಾಯಾಧೀಶರು ಮತ್ತು ಹೈಕೋರ್ಟ್‌ನ ಮೊದಲ ಮಹಿಳಾ ನ್ಯಾಯಮೂರ್ತಿಗಳು. ಎಲ್ಲಾ ಅಡೆತಡೆಗಳು ಮತ್ತು ಲಿಂಗ ತಾರತಮ್ಯವನ್ನು ಧಿಕ್ಕರಿಸಿ 1926ರಲ್ಲಿ ಕಾನೂನಿನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಬಳಿಕ 1937ರಲ್ಲಿ ಟ್ರಿವಾಂಕೂರ್‌ನ ಮೊದಲ ಮುನ್ಸಿಫ್ ಆಗಿ ನೇಮಕಗೊಂಡರು. ಈ ಮೂಲಕ ಮೊದಲ ಮಹಿಳಾ ನ್ಯಾಯಾಧೀಶರಾದರು. 1959ರಲ್ಲಿ ಕೇರಳ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾದ ನಂತರ ಅವರು ಹೈಕೋರ್ಟ್‌ನ ಮೊದಲ ಮಹಿಳಾ ನ್ಯಾಯಮೂರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.



## ಡಾಕ್ಟರ್ ಮುತ್ತುಲಕ್ಷ್ಮಿ ರೆಡ್ಡಿ

ಈಕೆ ಭಾರತದ ಮೊದಲ ಮಹಿಳಾ ಶಾಸಕಿ. 1926ರಲ್ಲಿ ಇವರನ್ನು ಮದ್ರಾಸ್‌ನ ವಿಧಾನಪರಿಷತ್‌ಗೆ ನೇಮಿಸಲಾಯಿತು. 1912ರಲ್ಲಿ ಇವರು ಮೊದಲ ಮಹಿಳಾ ವೈದ್ಯಕೀಯ ವಿದ್ಯಾರ್ಥಿನಿ ಮತ್ತು ಪದವಿ ಪಡೆದ ಮೊದಲ ಮಹಿಳೆ. ಮಹಾತ್ಮಾ ಗಾಂಧೀಜಿ ಹಾಗು ಡಾಕ್ಟರ್ ಆ್ಯನಿ ಬೆಸೆಂಟ್ ಅವರಿಂದ ಇವರು ಹೆಚ್ಚು ಪ್ರಭಾವಿತರಾಗಿದ್ದರು. ತಮ್ಮ ಜೀವನವನ್ನು ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಮುಡುಪಾಗಿಟ್ಟರು. ಮಹಿಳೆಯರು ಸಾರ್ವಜನಿಕವಾಗಿ ವಿರಳವಾಗಿ ಕಾಣುವ ಮತ್ತು ಕೇಳುವ ಸಮಯದಲ್ಲಿ ಇವರು ಮಹಿಳಾ ವಿಮೋಚಕರಾಗಿ ಕೆಲಸ ಮಾಡಿದರು.



## ಪ್ರಿಯಾ ಜಿಂಗನ್

ಈಕೆ 001 ಮೊದಲ ಮಹಿಳಾ ಕೆಡೆಟ್. 1992ರ ಸೆಪ್ಟೆಂಬರ್‌ನಲ್ಲಿ ಭಾರತೀಯ ಸೇನೆಗೆ ಸೇರ್ಪಡೆಯಾದ ಮೊದಲ ಮಹಿಳಾ ಕೆಡೆಟ್. ಸೇನೆಯಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿದ ನಂತರ ಜಿಂಗನ್ ಮತ್ತು ಇತರೆ 24 ಮಂದಿ ಮೊದಲ ಮಹಿಳಾ ಅಧಿಕಾರಿಗಳಾದರು. ಕಾನೂನಿನ ಹಿನ್ನೆಲೆ ಹೊಂದಿದ್ದ ಅವರು ಅಡ್ವೋಕೆಟ್ ಜನರಲ್ ಆಗಿ ನೇಮಕಗೊಂಡಿದ್ದರು. ಸೇನೆಯಲ್ಲಿ ಇವರು 10 ವರ್ಷಗಳ ಕಾಲ ಸೇವೆ ಸಲ್ಲಿಸಿದರು. 2002ರಲ್ಲಿ ಮೇಜರ್ ಹುದ್ದೆಯಿಂದ ನಿವೃತ್ತರಾದರು. 2018ರಲ್ಲಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಪ್ರಿಯಾ ಜಿಂಗನ್ ಅವರನ್ನು ಸನ್ಮಾನಿಸಿದರು.



## ಸರ್ಲಾ ಥಕ್ರಾಲ್

ಈಕೆ ಭಾರತದ ಮೊದಲ ಮಹಿಳಾ ಪೈಲೆಟ್. 1936 ರಲ್ಲಿ 21 ವರ್ಷದವರಿದ್ದಾಗಲೇ ಪೈಲೆಟ್ ಪರವಾನಗಿ ಪಡೆದರು ಮತ್ತು ಜಿಪ್ಸಿ ಮಾಥ್ ಸೋಲೋ ಹಾರಾಟ ನಡೆಸಿದರು. ನಾಲ್ಕು ವರ್ಷದ ಮಗುವಿನ ತಾಯಿಯಾದ ಈಕೆ ಸೀರೆ ಉಟ್ಟು ನಿರಂತರವಾಗಿ 1000 ಗಂಟೆಗಳ ಕಾಲ ಹಾರಾಟ ನಡೆಸಿದರಲ್ಲದೇ ಭಾರತದ ಮೊದಲ ಎ ದರ್ಜೆಯ ಪರವಾನಗಿ ಪಡೆದ ಖ್ಯಾತಿಗೆ ಪಾತ್ರರಾಗಿದ್ದಾರೆ. ಥಕ್ರಾಲ್ ಇತರೆ ಮಹಿಳೆಯರಿಗೆ ತನ್ನ ಹೆಜ್ಜೆಗಳನ್ನು ಅನುಸರಿಸಲು ಮಾರ್ಗ ತೋರಿಸಿದವರಾಗಿದ್ದಾರೆ.



## ಅನ್ನಾ ರಾಜನ್ ಮಲ್ಹೋತ್ರ

ಇವರು ಭಾರತದ ಮೊದಲ ಮಹಿಳಾ ಐಎಎಸ್ ಅಧಿಕಾರಿ. ಮಲ್ಹೋತ್ರ ಅವರು 1951ರಲ್ಲಿ ನಾಗರಿಕ ಸೇವೆಗೆ ಸೇರ್ಪಡೆಯಾದರು. ಪರೀಕ್ಷೆಯಲ್ಲಿ ತೇರ್ಗಡೆಯಾದರೂ ಸಹ ಈಕೆ ಐ.ಎ.ಎಸ್ ಹುದ್ದೆ ಪಡೆಯಲು ಹೋರಾಡಬೇಕಾಯಿತು. ಇವರ ಪ್ರಯತ್ನಗಳು ಅಂತಿಮವಾಗಿ ಫಲ ನೀಡಿತು. ಇವರು ದೇಶದ ಮೊದಲ ಉಪ ಜಿಲ್ಲಾಧಿಕಾರಿಯಾಗಿ ನೇಮಕಗೊಂಡರು. ತನ್ನ ಹೆಜ್ಜೆಗಳನ್ನು ಅನುಸರಿಸಲು ಇತರೆ ಮಹಿಳೆಯರಿಗೆ ಉದಾಹರಣೆಯಾದರು. ಇವರು ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ■

# ಮಹಿಳಾ ಸಾಧಕರಿಗೆ ನಮನ...

## #ಸವಾಲುಗಳನ್ನು ಆಯ್ಕೆ ಮಾಡಿ (#ChooseToChallenge)


ಕೃಷ್ಣನ್ ನಾಯರ್ ಶಾಂತಕುಮಾರಿ ಚಿತ್ರಾ


ಸುಮಿತ್ರಾ ಮಹಾಜನ್


ನೀರೂ ಕುಮಾರ್


ಲಾಜವಂತಿ


ಜಸ್ವಂತಿ ಬೇನ್ ಪೋಪಟ್


ಬಾಂಬೆ ಜಯಶ್ರೀ


ಸಿಂಧೂ ತಾಯಿ ಸಪ್ಕಾಲ್


ಸುಧಾ ಸಿಂಗ್


ಮೃದುಲಾ ಸಿನ್ಹಾ [ಮರಣೋತ್ತರವಾಗಿ]


ನಿದುಮೋಲು ಸುಮತಿ


ಉಷಾ ಯಾದವ್


ಭೂರಿ ಬಾಯಿ


ಬೀರೂಬಾಲಾ ರಾಭಾ


ಚುಟನೀ ದೇವಿ


ದುಲಾರಿ ದೇವಿ


ಗುರು ಮಾ ಕಮಲಿ ಸೋರೇನ್


ಸಂಜಿದಾ ಖಾತುನ್


ಲಾಖಿಮಿ ಬರುವಾ


ಪಾಪಮ್ಮಾಳ್


ಪಿ. ಅನಿತಾ


ಸಂಖುಮಿ ಬಾಲುಚುವಾಕ್


ಶಾಂತಿ ದೇವಿ


ಬಿಜೋಯಾ ಚಕ್ರವರ್ತಿ


ಅಂಶು ಜಾಮ್ಸೇನ್ ಪಾ


ರಜನೀ ಬೆಕ್ಟರ್


ಮೌಮಾ ದಾಸ್


ಪೂರ್ಣಮಾಸೀ ಜಾನಿ


ರಾಧೇ ದೇವಿ


ಪ್ರಕಾಶ್ ಕೌರ್

**ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ 29 ಮಹಿಳಾ ಸಾಧಕಿಯರಿಗೆ ಗೌರವ ಸಲ್ಲಿಸುತ್ತಿದ್ದೇವೆ. ಇವರೆಲ್ಲರೂ ಈ ವರ್ಷದ ಪದ್ಮ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಇವರೆಲ್ಲರೂ ತಮ್ಮ ಕ್ಷೇತ್ರಗಳಲ್ಲಿ ತೋರಿದ ಸಾಧನೆಯಿಂದಾಗಿ ಇತರರಿಗೆ ಮಾದರಿಯಾಗಿದ್ದಾರೆ. ಈ ವರ್ಷದ ಅಂತಾರಾಷ್ಟ್ರೀಯ ಮಹಿಳಾ ದಿನದ ಧ್ಯೇಯ ವಾಕ್ಯ "ಸವಾಲುಗಳನ್ನು ಆಯ್ಕೆ ಮಾಡಿ" #ChooseToChallenge. ಇದರ ಹಿಂದಿನ ಉದ್ದೇಶ ಲಿಂಗ ಸಮಾನತೆಯ ಜಗತ್ತು ನಿರ್ಮಿಸುವುದಾಗಿದೆ.**

# ಕಳೆದ 6 ವರ್ಷಗಳಲ್ಲಿ ತಮಿಳುನಾಡಿಗೆ 50,000 ಕೋಟಿ ರೂ. ತೈಲ ಮತ್ತು ಅನಿಲ ಯೋಜನೆಗಳ ಅನುಮೋದನೆ

2021-22ರ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಕರಾವಳಿ ರಾಜ್ಯಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ. ಇದರ ಅನ್ವಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ತಮಿಳುನಾಡು ಮತ್ತು ಕೇರಳಕ್ಕೆ ಭೇಟಿ ನೀಡಿ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿದರು. ಕಳೆದ ಆರು ವರ್ಷಗಳಲ್ಲಿ ತಮಿಳುನಾಡು ರಾಜ್ಯಕ್ಕೆ 50,000 ಕೋಟಿ ರೂ. ಮೊತ್ತದ ತೈಲ ಮತ್ತು ಅನಿಲ ಯೋಜನೆಗಳ ಅನುಷ್ಠಾನಕ್ಕಾಗಿ ಮಂಜೂರಾತಿ ನೀಡಲಾಗಿದೆ.

ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಪ್ರವಾಸೋದ್ಯಮ, ಸಾಂಸ್ಕೃತಿಕ ವಲಯದಲ್ಲಿ ಮತ್ತಷ್ಟು ಅಭಿವೃದ್ಧಿ ಸಾಧಿಸುವ ಬದ್ಧತೆಯೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ 2021 ರ ಫೆಬ್ರವರಿ 14 ರಂದು ಕರಾವಳಿ ರಾಜ್ಯಗಳಲ್ಲಿ ಪ್ರಮುಖ ಯೋಜನೆಗಳನ್ನು ಉದ್ಘಾಟಿಸಿದರು ಮತ್ತು ಶಿಲಾನ್ಯಾಸ ನೆರವೇರಿಸಿದರು.

**ತಮಿಳುನಾಡಿಗೆ ಹೊಸ ಯೋಜನೆಗಳು:**

- ಚೆನ್ನೈ ಮೆಟ್ರೋ ರೈಲು ಯೋಜನೆಯ ಮೊದಲ ಹಂತ ಉದ್ಘಾಟನೆ
- 143 ಕಿಲೋಮೀಟರ್ ಉದ್ದದ ರಾಮನಾಥಪುರಂ ನಿಂದ ತೂತುಕುಡಿ ನಡುವಿನ ನೈಸರ್ಗಿಕ ಅನಿಲ ಕೊಳವೆ ಮಾರ್ಗ ಉದ್ಘಾಟನೆ. ಇದು 4,500 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಅತಿ ದೊಡ್ಡ ನೈಸರ್ಗಿಕ ಅನಿಲ ಕೊಳವೆ ಮಾರ್ಗದ ಭಾಗವಾಗಿದೆ.
- ವಾಷರ್‌ಮೆನ್ ಪೇಟ್‌ನಿಂದ ವಿಮ್ಕೋ ನಗರ್ ವರೆಗೆ ಮೆಟ್ರೋ ರೈಲು ಮಾರ್ಗ ಉದ್ಘಾಟನೆ, ಇದು ಉತ್ತರ ಚೆನ್ನೈನಿಂದ ವಿಮಾನ ನಿಲ್ದಾಣ ಮತ್ತು ಕೇಂದ್ರೀಯ ರೈಲ್ವೆ ನಿಲ್ದಾಣವನ್ನು ಸಂಪರ್ಕಿಸಲಿದೆ.
- ವಿಲ್ಲುಪುರಂ–ಕಡಲೂರ್–ಮೈಲಾಡುತುರೈ–ತಂಜಾವೂರು ಮತ್ತು ಮೈಲಾಡುತುರೈ–ತಿರುವನೂರು ನಡುವಿನ ಏಕಪಥದ ರೈಲ್ವೆ ವಿದ್ಯುದೀಕರಣ ಮಾರ್ಗದ ಉದ್ಘಾಟನೆ.
- 636 ಕಿಲೋಮೀಟರ್ ಉದ್ದದ ಆನಿಕಟ್ ಕಾಲುವೆಯ ಆಧುನೀಕರಣ ಯೋಜನೆಗೆ ಶಿಲಾನ್ಯಾಸ.
- ಮದ್ರಾಸ್‌ನ ಐಐಟಿ ಡಿಸ್ಕವರಿ ಕ್ಯಾಂಪಸ್‌ಗೆ ಶಿಲಾನ್ಯಾಸ.

**ಅರ್ಜುನ್ : ದೇಶೀಯವಾಗಿ ವಿನ್ಯಾಸಗೊಳಿಸಲಾದ ಯುದ್ಧ ಟ್ಯಾಂಕ್**

ದೇಶೀಯವಾಗಿ ವಿನ್ಯಾಸಗೊಳಿಸಲಾದ ಹಾಗೂ ತಯಾರಿಸಲಾದ ಪ್ರಮುಖ ಯುದ್ಧ ಟ್ಯಾಂಕ್ ಅರ್ಜುನ್ ಮಾರ್ಕ್ 1ಎ ಅನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೇನೆಗೆ ಸಮರ್ಪಿಸಿದರು. ಇದು ದೇಶ ಸ್ವಾವಲಂಬಿಯಾಗುತ್ತಿರುವ ದಿಕ್ಕಿನತ್ತ ಸಾಗಿರುವ ಹೆಜ್ಜೆ ಎಂದು ಹೇಳಿದರು.

ಪ್ರಧಾನ ಮಂತ್ರಿಗಳ ಪೂರ್ಣ ಭಾಷಣ ಆಲಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ




> ತಮಿಳುನಾಡಿನ ಸಂಸ್ಕೃತಿಯನ್ನು ರಕ್ಷಿಸುವ ಮತ್ತು ಆಚರಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದು ನಮ್ಮ ಗೌರವ.
>
> **–ಪ್ರಧಾನ ಮಂತ್ರಿ ನರೇಂದ್ರ ಮೋದಿ**

**ಕೇರಳಕ್ಕೆ ಹೊಸ ಯೋಜನೆಗಳು:**

- ಬಿಪಿಸಿಎಲ್‌ನ ಕೊಚ್ಚಿ ಸಂಸ್ಕರಣಾ ಕೇಂದ್ರದಲ್ಲಿ 6,000 ಕೋಟಿ ರೂ. ಮೊತ್ತದ ಪ್ರೊಪೈಲೀನ್ ಡಿರೈವೆಟಿವ್ಸ್ ಪೆಟ್ರೋಕೆಮಿಕಲ್ಸ್ ಘಟಕ ಉದ್ಘಾಟನೆ. ಇದರಿಂದ 4,000 ಕೋಟಿ ರೂ. ಮೊತ್ತದ ವಿದೇಶಿ ವಿನಿಯಮ ಉಳಿಸಲು ಸಹಕಾರಿ.
- ಕೊಚ್ಚಿಯ ವೆಲ್ಲಿಂಗ್ಟನ್ ದ್ವೀಪದಲ್ಲಿ ರೊ–ರೊ ಹಡಗು ಸೇವೆ ಉದ್ಘಾಟನೆ.
- 25.72 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕೊಚ್ಚಿಯ ಸಾಗರಿಕ ಹಡಗು ದಾಣ ಉದ್ಘಾಟನೆ, ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಮತ್ತು ವಿದೇಶಿ ವಿನಿಮಯ ಗಳಿಕೆಗೆ ಸಹಕಾರಿ.
- ಕೊಚ್ಚಿ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ 27.5 ಕೋಟಿ ರೂ. ವೆಚ್ಚದಲ್ಲಿ ಮರೈನ್ ಎಂಜಿನಿಯರಿಂಗ್ ತರಬೇತಿ ಸಂಸ್ಥೆ "ವಿಜ್ಞಾನ್ ಸಾಗರ್" ಉದ್ಘಾಟನೆ. ಇದು ಭಾರತದ ಏಕೈಕ ಮರೈನ್ ಎಂಜಿನಿಯರಿಂಗ್ ಸಂಸ್ಥೆಯಾಗಿದ್ದು, 114 ವಿದ್ಯಾರ್ಥಿಗಳಿಗೆ ಪದವಿ ಪೂರ್ವ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲಿದೆ.
- ದಕ್ಷಿಣ ಕಲ್ಲಿದ್ದಲು ಬರ್ತ್‌ನ ಪುನರ್ ನಿರ್ಮಾಣಕ್ಕೆ ಶಿಲಾನ್ಯಾಸ. ಇದರಿಂದ ಲಾಜಿಸ್ಟಿಕ್ ವೆಚ್ಚ ತಗ್ಗಲಿದ್ದು, ಕಾರ್ಗೋ ಸಾಮರ್ಥ್ಯ ಹೆಚ್ಚಾಗಲಿದೆ. ■

# ಅಸಂಘಟಿತ ವಲಯದ ಕಾರ್ಮಿಕರಿಗೆ ಪಿಂಚಣಿ ಖಾತರಿ

ಸಮರ್ಥ ದೇಹ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯ ತನಕ ಜೀವನ ಹೇಗೋ ನಡೆಯುತ್ತದೆ. ಅದಾಗ್ಯೂ ವೃದ್ಧಾಪ್ಯದಲ್ಲಿ ದುರ್ಬಲ ದೇಹದೊಂದಿಗೆ ಜೀವನ ನಡೆಸುವ ಚಿಂತೆ ಪ್ರತಿಯೊಬ್ಬರನ್ನೂ ಕಾಡುತ್ತದೆ. ಬಹುತೇಕ ಅಸಂಘಟಿತ ಕಾರ್ಮಿಕರಿಗೆ ಆರ್ಥಿಕ ಬೆಂಬಲದ ಖಾತರಿ ಬೇಕಾಗುತ್ತದೆ. ಆದರೆ ಅಸಂಘಟಿತ ವಲಯದಲ್ಲಿರುವವರು ವೃದ್ಧಾಪ್ಯದಲ್ಲಿ ನಿರ್ದಯತೆಗೆ ಒಳಗಾಗಬೇಕಾಗುತ್ತದೆ. ಅಂತೆಯೇ ಅಸಂಘಟಿತ ಕಾರ್ಮಿಕರಿಗೆ ಆರ್ಥಿಕ ಭದ್ರತೆ ಒದಗಿಸಲು ಪಿಎಂ ಶ್ರಮ ಯೋಗಿ ಮಾನ್‌ಧನ್ ಯೋಜನೆಯನ್ನು ಎರಡು ವರ್ಷಗಳ ಹಿಂದೆ ಜಾರಿಗೊಳಿಸಲಾಯಿತು.







ನಿರ್ದಿಷ್ಟ ವಯಸ್ಸು ತಲುಪಿದ ನಂತರ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವವರೆಗೆ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಕಷ್ಟವಾಗುತ್ತದೆ ಇದಕ್ಕಾಗಿ ಅಸಂಘಟಿತ ವಲಯದಲ್ಲಿನ ಕಾರ್ಮಿಕರಿಗೆ ನೆರವು ನೀಡಲು ಮತ್ತು ಅಂತಹ ಪರಿಸ್ಥಿತಿಯಿಂದ ಉಂಟಾಗುವ ಹಣಕಾಸಿನ ತೊಂದರೆಗಳನ್ನು ತಗ್ಗಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 2019ರ ಮಾರ್ಚ್ 5 ರಂದು ಗುಜರಾತ್‌ನ ವಸ್ತ್ರಾಲ್‌ನಲ್ಲಿ ಪ್ರಧಾನಮಂತ್ರಿ ಶ್ರಮ ಯೋಗಿ ಮಾನ್‌ಧನ್ [ಪಿಎಂ–ಎಸ್‌ವೈಎಂ] ಯೋಜನೆಗೆ ಚಾಲನೆ ನೀಡಿದರು. ಪಿಎಂ–ಎಸ್‌ವೈಎಂ ಪಿಂಚಣಿ ಯೋಜನೆಯಾಗಿದ್ದು, ಸುಮಾರು 42 ಕೋಟಿ ಅಸಂಘಟಿತ ವಲಯ ಕಾರ್ಮಿಕರಿಗೆ ಇದು ಅನ್ವಯವಾಗಲಿದೆ. ವೃದ್ಧಾಪ್ಯ ತಲುಪಿದ ಅಸಂಘಟಿತ ವಲಯದ ಕಾರ್ಮಿಕರಿಗೆ ಈ ಯೋಜನೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಖಾತರಿಪಡಿಸುತ್ತದೆ.

> ಶ್ರಮ ಯೋಗಿ ಮಾನ್‌ಧನ್ ಯೋಜನೆಗೆ ಸಂಪರ್ಕ ಸಾಧಿಸಲು ದೇಶದ ಎಲ್ಲಾ ಕುಟುಂಬಗಳು ಸಹಾಯ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ. ಶ್ರೀಮಂತ ವರ್ಗದ ಈ ಕಾರ್ಯ ಬಡವರಿಗೆ ಹೆಚ್ಚು ಪ್ರಯೋಜನ ತರುತ್ತದೆ. ನಿಮ್ಮ ಸೇವೆಯಲ್ಲಿ ತೊಡಗಿರುವವರಿಗಾಗಿ ನಿಮ್ಮ ಕೊಡುಗೆ ದೇಶಕ್ಕೆ ಹೆಚ್ಚು ಬಲ ನೀಡಲಿದೆ.
>
> **–ಪ್ರಧಾನ ಮಂತ್ರಿ ನರೇಂದ್ರ ಮೋದಿ**



ಅಸಂಘಟಿತ ವಲಯದ ಒಟ್ಟಾರೆ ಶೇ. 85 ರಷ್ಟು ಕಾರ್ಮಿಕ ಶಕ್ತಿ ದೇಶದ ಜಿಡಿಪಿಗೆ ಸುಮಾರು ಶೇ. 50 ರಷ್ಟು ಕೊಡುಗೆ ನೀಡುತ್ತದೆ. ಇವರಲ್ಲಿ ಹೆಚ್ಚಾಗಿ ಮನೆ ಕೆಲಸದವರು, ಗೃಹ ಆಧರಿತ ಕಾರ್ಮಿಕರು, ಕೃಷಿ ಕಾರ್ಮಿಕರು, ಭೂ ರಹಿತ ಕಾರ್ಮಿಕರು. ರಿಕ್ಷಾ ಎಳೆಯುವವರು, ಬೀದಿ ಬದಿ ವ್ಯಾಪಾರಿಗಳು, ಸರಕು ತುಂಬುವವರು, ಇಟ್ಟಿಗೆ ಭಟ್ಟಿ ಕಾರ್ಮಿಕರು, ಚಮ್ಮಾರರು, ಚಿಂದಿ ಆಯುವವರು, ಶುಚಿತ್ವದ ಕೆಲಸ ಮಾಡುವವರು, ನಿರ್ಮಾಣ ಕಾರ್ಮಿಕರು, ಬೀಡಿ ಕಾರ್ಮಿಕರು, ಕೈಮಗ್ಗ ಕಾರ್ಮಿಕರು, ಚರ್ಮೋದ್ಯಮದ ಕಾರ್ಮಿಕರು, ಶ್ರವಣ-ದೃಶ್ಯ ಕಾರ್ಮಿಕರು ಮತ್ತು ಇದೇ ರೀತಿಯ ವೃತ್ತಿಯಲ್ಲಿ ತೊಡಗಿರುವವರು, ಸರ್ಕಾರ ಇಂತಹ ಕಾರ್ಮಿಕರ ಕೆಲಸಕ್ಕೆ ಗೌರವ ನೀಡಿ "ಶ್ರಮ್ ಯೋಗಿ" ಎಂದು ಮಾನ್ಯತೆ ನೀಡಿದೆ.

- ಈ ಯೋಜನೆ ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಇದ್ದು, ಮಾಸಿಕ ಆದಾಯ 15,000 ಅಥವಾ ಇದಕ್ಕೂ ಕಡಿಮೆ ಇರಬೇಕು. ಇವರು ಉಳಿತಾಯ ಖಾತೆ ಹಾಗೂ ಆಧಾರ್ ಸಂಖ್ಯೆ ಹೊಂದಿರಬೇಕು.
- ಈ ಯೋಜನೆಗೆ ಸೇರ್ಪಡೆಯಾಗಲು ಕನಿಷ್ಠ 18 ವರ್ಷ ಮತ್ತು ಗರಿಷ್ಠ 40 ವರ್ಷವಾಗಿರಬೇಕು.
- ಇದು ಸ್ವಯಂ ಮತ್ತು ಕೊಡುಗೆ ಆಧಾರಿತ ಯೋಜನೆ. ಚಂದಾದಾರರು 60 ವರ್ಷದ ನಂತರ ಕನಿಷ್ಠ 3,000 ರೂಪಾಯಿ ಖಾತರಿ ಮಾಸಿಕ ಆದಾಯ ಪಡೆಯಲಿದ್ದಾರೆ.
- ಪಿಎಂ-ಎಸ್‌ವೈಎಂ ಯೋಜನೆಗೆ ನೋಂದಣಿಯಾಗಲು ಅರ್ಜಿ ಭರ್ತಿ ಮಾಡಬೇಕು ಹಾಗೂ ಆಧಾರ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆಗಳ ವಿವರಗಳನ್ನು ನೀಡಬೇಕು. ಫಲಾನುಭವಿಯನ್ನು ದಾಖಲಿಸಲು ಸಮುದಾಯ ಸೇವಾ ಕೇಂದ್ರ [ಸಿಎಸ್‌ಸಿ] ಮಾಡುವ ವೆಚ್ಚವನ್ನು ಸರ್ಕಾರ ಭರಿಸುತ್ತದೆ.
- ಪಿಎಂ-ಎಸ್‌ವೈಎಂ ಯೋಜನೆಗೆ ಚಂದಾದಾರರಾದವರು ಪ್ರತಿ ತಿಂಗಳು ಕೊಡುಗೆ ನೀಡಬೇಕು. 18 ರಿಂದ 40 ವರ್ಷದವರು ಚಂದಾದಾರರಾಗುವ ವಯೋಮಿತಿಗೆ ಅನುಗುಣವಾಗಿ ನಿಗದಿತ ಮೊತ್ತ 55 ರೂಪಾಯಿಯಿಂದ 200 ರೂಪಾಯಿವರೆಗೆ ವಿವಿಧ ಹಂತಗಳಲ್ಲಿ ಇರಲಿದೆ.

**ಈ ಯೋಜನೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೆ ಬಂದಿದೆ. ಸಮುದಾಯ ಸೇವಾ ಕೇಂದ್ರಗಳಲ್ಲಿ [ಸಿಎಸ್‌ಸಿ] ನೋಂದಣಿ ನಡೆಯುತ್ತಿದ್ದು, ದೇಶಾದ್ಯಂತ 3,52,598 ಕೇಂದ್ರಗಳಿವೆ.**

**ಈವರೆಗೆ 44,88,676 ಮಂದಿ ನೋಂದಣಿಯಾಗಿದ್ದಾರೆ.**

- ಕೊಡುಗೆ 50:50ರ ಆಧಾರದ ಮೇಲೆ ಇರಲಿದೆ. ಕೇಂದ್ರ ಸರ್ಕಾರ ಕೂಡ ಫಲಾನುಭವಿಗೆ ಸಮಾನಾಂತರವಾಗಿ ಕೊಡುಗೆ ನೀಡಲಿದೆ.
- ಒಂದು ವೇಳೆ ಚಂದಾದಾರ ಮೃತಪಟ್ಟರೆ ಅವನ/ಅವಳ ಸಂಗಾತಿ ಶೇ. 50 ರಷ್ಟು ಪಿಂಚಣಿ ಹಣವನ್ನು ಪಡೆಯಲು ಅರ್ಹತೆ ಪಡೆಯಲಿದ್ದಾರೆ.
- ಪಿಎಂ-ಎಸ್‌ವೈಎಂಗೆ ಕೊಡುಗೆ ನೀಡಲು ಅವನ/ಅವಳ ಬ್ಯಾಂಕ್ ಖಾತೆ, ಜನ್‌ಧನ್ ಖಾತೆಯ ಮೂಲಕ ಸ್ವಯಂಚಾಲಿತವಾಗಿ ವರ್ಗಾವಣೆ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ.
- ಈ ಯೋಜನೆಯಿಂದ ನಿರ್ಗಮಿಸುವವರಿಗೆ ಹೊಂದಿಕೊಳ್ಳುವ ರೀತಿಯ ವ್ಯವಸ್ಥೆ ಇದೆ. ಚಂದಾದಾರರು ಯಾವುದೇ ಸಮಯದಲ್ಲಿ ನಿರ್ಗಮಿಸಬಹುದು. ನಿರ್ಗಮಿಸಿದ ನಂತರ ತನ್ನ ಕೊಡುಗೆಯ ಪಾಲನ್ನು ಯೋಜನೆಯ ನಿಬಂಧನೆಗಳಂತೆ ಹಿಂತಿರುಗಿಸಲಾಗುವುದು.
- ಪಿಎಂ-ಎಸ್‌ವೈಎಂ ಕೇಂದ್ರ ವಲಯದ ಯೋಜನೆಯಾಗಿದ್ದು, ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಕಾರ್ಯಕ್ರಮವಾಗಿದೆ. ಇದನ್ನು ಭಾರತೀಯ ಜೀವ ವಿಮಾ ನಿಗಮ [ಎಲ್‌ಐಸಿ] ಮತ್ತು ಸಿಎಸ್‌ಸಿಗಳ ಮೂಲಕ ಅನುಷ್ಠಾನಕ್ಕೆ ತರಲಾಗಿದೆ.
- ಎಲ್‌ಐಸಿ ಪಿಂಚಣಿ ನಿಧಿ ವ್ಯವಸ್ಥಾಪಕರಾಗಿದ್ದು, ಪಿಂಚಣಿ ಪಾವತಿಯ ಜವಾಬ್ದಾರಿ ಹೊತ್ತಿದೆ. ಪಿಎಂ-ಎಸ್‌ವೈಎಂ ಪಿಂಚಣಿ ಯೋಜನೆಯಡಿ ಸಂಗ್ರಹಿಸಿದ ಮೊತ್ತವನ್ನು ಕೇಂದ್ರ ಸರ್ಕಾರ ನಿರ್ದಿಷ್ಟಪಡಿಸಿದಂತೆ ಹೂಡಿಕೆ ಮಾಡಲಾಗುತ್ತದೆ. ■

# ಶಾಸನಗಳು ಕೆಲವರ ಧ್ವನಿಗಳಾಗಿ ಅಲ್ಲ: ಅವು ಸಮಾಜದ ಅಗತ್ಯಗಳ ಪೂರೈಕೆಗಾಗಿ ರೂಪುಗೊಳ್ಳುತ್ತವೆ

ಆಯಾ ಸಂದರ್ಭದ ಅಗತ್ಯವನ್ನು ಮನಗಂಡು ಸರ್ಕಾರ ಕಾನೂನುಗಳನ್ನು ತರುತ್ತದೆ. ಪ್ರಗತಿಪರ ಸಮಾಜಕ್ಕೆ ಅಗತ್ಯವಿರುವ ಕಾರಣ ಅವುಗಳನ್ನು ಜಾರಿಗೊಳಿಸಲಾಗುತ್ತದೆ. ಕೃಷಿ ಮಸೂದೆಗಳ ಕುರಿತಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ವಿಷಯ ಮಂಡಿಸಿದರು. ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಗೆ ಅವರು ಸಂಸತ್ತಿನ ಉಭಯ ಸದನಗಳಲ್ಲಿ ಉತ್ತರ ನೀಡಿದರು. ಪ್ರಧಾನ ಮಂತ್ರಿಯವರು ಸರ್ಕಾರದ ಸಾಧನೆಗಳ ಬಗ್ಗೆ ಮಾತನಾಡಿದರಲ್ಲದೇ ಹಲವಾರು ಸಮಸ್ಯೆಗಳನ್ನು ನಿಭಾಯಿಸುವ ಬದ್ಧತೆಯನ್ನು ಪ್ರಸ್ತಾಪಿಸಿದರು. ಸಂಸತ್ತಿನ ಉಭಯ ಸದನಗಳಲ್ಲಿ ಪ್ರಧಾನಮಂತ್ರಿ ಅವರು ಮಾತನಾಡಿದ ಎಲ್ಲಾ ವಿಷಯಗಳ ಕುರಿತು ತಿಳಿಯಲು ಮುಂದೆ ಓದಿ...



**ಕೊರೊನಾ ವೈರಾಣು ಸಾಂಕ್ರಾಮಿಕ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಹಣಕಾಸು ನೆರವು ಮತ್ತು ಪರಿಹಾರ ಒದಗಿಸುವ ಪ್ರಯತ್ನಗಳನ್ನು ಮಾಡಲಾಯಿತು. "ಇದನ್ನು ಯಶಸ್ವಿಯಾಗಿ ಸಾಧಿಸಲಾಗಿದೆ" ಎಂಬ ಖುಷಿಯಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.**

ಸಂಸತ್ತಿನಲ್ಲಿ ಪ್ರಧಾನಿಯವರ ಭಾಷಣದ ಪೂರ್ಣ ಪಾಠಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಕೃಷಿ ಮಸೂದೆಗಳ ಕುರಿತು

### ಯಾವುದೇ ಮಂಡಿ ಮುಚ್ಚಿಲ್ಲ, ಎಂಎಸ್‌ಪಿ ಮುಂದುವರಿಯಲಿದೆ

ಕೃಷಿ ಮಸೂದೆಗಳ ಕುರಿತು ರೈತರ ಪರ ಧ್ವನಿ ಎತ್ತಿರುವವರ ಅಭಿಪ್ರಾಯಗಳನ್ನು ಸರ್ಕಾರ ಗೌರವಿಸುತ್ತದೆ. ಇದೇ ಕಾರಣದಿಂದ ಸರ್ಕಾರದ ಪ್ರಮುಖ ಸಚಿವರು ನಿರಂತರವಾಗಿ ರೈತ ಮುಖಂಡರ ಜತೆ ಮಾತುಕತೆಯಲ್ಲಿ ತೊಡಗಿದ್ದಾರೆ. ರೈತರ ಬಗ್ಗೆ ಅಪಾರ ಗೌರವವಿದೆ. ಕೃಷಿಗೆ ಸಂಬಂಧಿಸಿದ ಕಾನೂನುಗಳು ಸಂಸತ್‌ನಲ್ಲಿ ಅಂಗೀಕಾರವಾದ ನಂತರ ಯಾವುದೇ ಮಂಡಿಯನ್ನು ಮುಚ್ಚಲಾಗಿಲ್ಲ. ಇದೇ ರೀತಿ ಎಂಎಸ್‌ಪಿ ಮುಂದುವರಿದಿದೆ. ಎಂಎಸ್‌ಪಿ ಅಡಿ ಖರೀದಿ ಪ್ರಕ್ರಿಯೆಯೂ ನಿಲ್ಲದು. ಬಜೆಟ್‌ನಲ್ಲಿ ಮಂಡಿಗಳನ್ನು ಬಲವರ್ಧನೆಗೊಳಿಸಲು ಪ್ರಸ್ತಾಪಿಸಲಾಗಿದೆ. ಈ ವಾಸ್ತವವನ್ನು ಯಾರೂ ಅಲ್ಲಗಳೆಯಲಾರರು. ಕಿಸಾನ್ ರೈಲ್, ಇ–ನ್ಯಾಮ್ ನಂತಹ ಕೃಷಿ ಸುಧಾರಣೆಗಳು ದೇಶದ ಸಣ್ಣ ಮತ್ತು ದೊಡ್ಡ ರೈತರಿಗೆ ವಿಸ್ತಾರವಾದ ಅವಕಾಶಗಳನ್ನು ನೀಡುವ ಪರಿಶ್ರಮದ ಭಾಗವಾಗಿದೆ.

## ರೈತರ ಪ್ರತಿಭಟನೆ ಸಂದರ್ಭದ ಹಿಂಸಾಚಾರ ಕುರಿತು

### ಆಂದೋಲನ್‌ಜೀವಿ: ದೇಶದ ಒಂದು ಹೊಸ ತಳಿ

ಈ ದೇಶದಲ್ಲಿ ಟೋಲ್ ಪ್ಲಾಜಾಗಳನ್ನು ಎಲ್ಲಾ ಸರ್ಕಾರಗಳು ಸರ್ವಾನುಮತದಿಂದ ಸ್ವೀಕರಿಸಿದ ವ್ಯವಸ್ಥೆಯಾಗಿದೆ. ಟೋಲ್ ಪ್ಲಾಜಾವನ್ನು ಧ್ವಂಸಗೊಳಿಸುವುದು, ಇದನ್ನು ವಶಕ್ಕೆ ಪಡೆಯುವುದು ಮತ್ತು ಕಾರ್ಯನಿರ್ವಹಿಸದಂತೆ ಮಾಡುವ ಕೃತ್ಯಗಳು ರೈತ ಚಳವಳಿಗೆ ಕಳಂಕ ತರುವ ಪ್ರಯತ್ನಗಳೆ? ನಾವು ಕೆಲವು ಪದಗಳೊಂದಿಗೆ ಪರಿಚಿತರಾಗಿದ್ದು, ಅವು ಶ್ರಮ ಜೀವಿಗಳು, ಬುದ್ಧಿ ಜೀವಿಗಳು. ಕೆಲವು ಸಮಯದಿಂದ ನಾನು ಇದನ್ನು ಗಮನಿಸಿರುವಂತೆ ಈಗ ಹೊಸ ಸಮುದಾಯ ಮುಂದೆ ಬಂದಿದೆ. ಅದು ಆಂದೋಲನ್‌ಜೀವಿ. ಒಂದು ವೇಳೆ ವಕೀಲರ ಪ್ರತಿಭಟನೆ ಇದ್ದರೆ ಅವರು ಅಲ್ಲಿ ಕಾಣಸಿಗುತ್ತಾರೆ. ವಿದ್ಯಾರ್ಥಿಗಳ ಪ್ರತಿಭಟನೆ ಇದ್ದರೂ ಅಲ್ಲಿಯೂ ಕಂಡು ಬರುತ್ತಾರೆ. ಕಾರ್ಮಿಕರ ಪ್ರತಿಭಟನೆ ಇದ್ದರೂ ಸಹ ಅಲ್ಲಿಯೂ ಇವರು ಕಂಡು

ಬರುತ್ತಾರೆ. ಕೆಲ ಸಂದರ್ಭಗಳಲ್ಲಿ ಇವರು ಪರದೆ ಹಿಂದೆ ಇರುತ್ತಾರೆ. ಇನ್ನೂ ಕೆಲ ಸಮಯ ಮುಂದೆ ಇರುತ್ತಾರೆ. ಇಲ್ಲಿ ಆಂದೋಲನ್‌ಜೀವಿಯ ತಳಿ ಇದೆ. ಅವರು ಪ್ರತಿಭಟನೆ ಇಲ್ಲದಿದ್ದರೆ ಬದುಕುಳಿಯಲಾರರು ಮತ್ತು ಇಂತಹ ಚಟುವಟಿಕೆಯಿಂದ ತಮ್ಮನ್ನು ತಾವು ಜೀವಂತವಾಗಿರಿಸಿಕೊಳ್ಳುವ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ದೇಶ ಪ್ರಗತಿಯಾಗುತ್ತಿದ್ದು, ನಾವು ವಿದೇಶಿ ನೇರ ಹೂಡಿಕೆ [ಎಫ್‌ಡಿಐ] ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ ಈಚಿನ ದಿನಗಳಲ್ಲಿ ಹೊಸ ಎಫ್‌ಡಿಐ ಕಣಕ್ಕೆ ಇಳಿದಿದೆ. ಅದು ವಿದೇಶಿ ವಿನಾಶಕಾರಿ ಚಿಂತನೆ. ನಾವು ಇವುಗಳಿಂದ ದೇಶವನ್ನು ರಕ್ಷಿಸಬೇಕಾಗಿದೆ.

**ಕೋವಿಡ್–19**

## ಯೋಧರು ದೈವತ್ವದ ಸಾಕಾರ!

ಕೊರೊನಾ ಸಾಂಕ್ರಾಮಿಕವನ್ನು ಸಮರ್ಥವಾಗಿ ನಿಭಾಯಿಸಿದ ಶ್ರೇಯಸ್ಸು ಮುಂಚೂಣಿ ಕಾರ್ಯಕರ್ತರಿಗೆ ಸಲ್ಲಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. “ನಮ್ಮ ವೈದ್ಯರು, ದಾದಿಯರು, ಕೋವಿಡ್ ಸೇನಾನಿಗಳು, ಸಫಾಯಿ ಕರ್ಮಚಾರಿಗಳು, ಆ್ಯಂಬುಲೆನ್ಸ್ ಚಾಲಕರು... ಇಂತಹ ಜನತೆ ಮತ್ತು ಇನ್ನೂ ಹಲವಾರು ಮಂದಿ ದೈವತ್ವದ ಪ್ರತೀಕಗಳಾಗಿ ಜಾಗತಿಕ ಸಾಂಕ್ರಾಮಿಕ ಎದುರಿಸಲು ಭಾರತದ ಹೋರಾಟಕ್ಕೆ ಶಕ್ತಿ ತುಂಬಿದ್ದಾರೆ. ಸಾಂಕ್ರಾಮಿಕ ಸಂದರ್ಭದಲ್ಲಿ ಸಂತ್ರಸ್ತ ಜನರ ಖಾತೆಗಳಿಗೆ ನೇರ ನಗದು ಸೌಲಭ್ಯದ ಮೂಲಕ ಎರಡು ಲಕ್ಷ ಕೋಟಿ ರೂ. ಹಣ ವರ್ಗಾವಣೆ ಮಾಡಲಾಗಿದೆ. ಜನ್‌ಧನ್–ಆಧಾರ್–ಮೊಬೈಲ್ [ಜೆಎಎಂ] ಈ ಮೂರು ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತಂದಿದೆ. ಇದರಿಂದ ಕಡು ಬಡವರು, ಅಂಚಿನಲ್ಲಿರುವವರು, ದೀನ ದಲಿತರಿಗೆ ಅನುಕೂಲವಾಗಿದೆ. ಆದರೆ ದುರದೃಷ್ಟವೆಂದರೆ ಆಧಾರ್ ತಡೆಯಲು ಶತಪ್ರಯತ್ನ ಮಾಡಿದರು. ಆದರೆ ಈಗ ಅದೇ ಆಧಾರ್ ಸಾಂಕ್ರಾಮಿಕ ಸಂದರ್ಭದಲ್ಲಿ ಉಪಯುಕ್ತವಾಗಿರುವುದನ್ನು ಸಾಬೀತುಪಡಿಸಿತು.

**ಆರ್ಥಿಕತೆ ಕುರಿತು**

## ಎರಡಂಕಿ ಸಾಧನೆಯ ಭರವಸೆ

ಕೊರೊನಾ ಸಾಂಕ್ರಾಮಿಕದ ನಡುವೆ ಸುಧಾರಣೆಗಳು ಮುಂದುವರಿದಿದ್ದು, ಎರಡಂಕಿಯ ಪ್ರಗತಿ ಸಾಧಿಸುವ ವಿಶ್ವಾಸ ಮೂಡಿಸಿದೆ. ಇದು ಆರ್ಥಿಕತೆಯಲ್ಲಿ ಹೊಸ ಆವೇಗವನ್ನು ಸೃಷ್ಟಿಸಿದೆ. ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲು ಮೂಲಸೌಕರ್ಯ ವಲಯವನ್ನು ಬಲಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ದೇಶವನ್ನು ಸಮತೋಲಿತ ಅಭಿವೃದ್ಧಿಯತ್ತ ಕೊಂಡೊಯ್ಯಲು ಸರ್ಕಾರ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಇದರ ಪರಿಣಾಮ ದೇಶದಲ್ಲಿ ಇಂದು ದಾಖಲೆ ಪ್ರಮಾಣದಲ್ಲಿ ಟ್ರ್ಯಾಕ್ಟರ್‌ಗಳು ಮತ್ತು ಕಾರುಗಳ ಮಾರಾಟವಾಗುತ್ತಿದೆ. ಜಿಎಸ್‌ಟಿ ಸಂಗ್ರಹ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಈ ಎಲ್ಲಾ ಅಂಕಿ ಅಂಶಗಳು ಆರ್ಥಿಕತೆ ಚೇತರಿಸಿಕೊಂಡಿರುವುದನ್ನು ಸೂಚಿಸುತ್ತದೆ.

**ಆತ್ಮನಿರ್ಭರ್**

## ಭಾರತದಿಂದ ವಿಶ್ವಕ್ಕೆ ಒಳಿತು

ಕೋವಿಡ್ ನಂತರದ ಜಗತ್ತು ವಿಭಿನ್ನ ತಿರುವು ಪಡೆದಿದೆ ಎಂಬ ಅಂಶದತ್ತ ಪ್ರಧಾನ ಮಂತ್ರಿ ನರೇಂದ್ರ ಮೋದಿ ಗಮನ ಸೆಳೆದಿದ್ದಾರೆ. ಇಂತಹ ಸಮಯದಲ್ಲಿ ಜಾಗತಿಕ ಪ್ರವೃತ್ತಿಗಳಿಂದ ದೂರವುಳಿದರೆ ಅದರ ಪರಿಣಾಮ ವ್ಯತಿರಿಕ್ತವಾಗುತ್ತದೆ. ಆದ್ದರಿಂದಲೇ ಭಾರತ ಆತ್ಮನಿರ್ಭರ್ ಭಾರತ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದ್ದು, ಅದು ಮತ್ತಷ್ಟು ಜಾಗತಿಕ ಒಳಿತನ್ನು ಬಯಸುತ್ತದೆ. ಭಾರತ ಬಲಿಷ್ಠವಾಗುತ್ತಿದೆ ಮತ್ತು ಆತ್ಮನಿರ್ಭರ್ ಭಾರತ್‌ನಿಂದ ಜಾಗತಿಕ ಒಳಿತಿಗೆ ಕಾರಣವಾಗಿದೆ. “ಇಂದು ನಾವು ಔಷಧ ವಲಯದಲ್ಲಿ ಸ್ವಾವಲಂಬಿಗಳಾಗಿದ್ದೇವೆ. ಜಗತ್ತಿನ ರಕ್ಷಣೆಗೆ ಮುಂದಾಗಿದ್ದೇವೆ. ಭಾರತದ ಸ್ವಾವಲಂಬನೆಗೆ ಇದು ಅಗತ್ಯವಾಗಿದೆ. ವೋಕಲ್–ಫಾರ್–ಲೋಕಲ್ ದೇಶದ ಮೂಲೆ ಮೂಲೆಯಲ್ಲಿರುವ ಜನರಲ್ಲಿ ಇಂದು ಪ್ರತಿಧ್ವನಿಸುತ್ತಿದೆ” ಎಂದು ಹೇಳಿದ ಪ್ರಧಾನ ಮಂತ್ರಿ ಸ್ವಾಭಿಮಾನದ ಅಭಿವ್ಯಕ್ತಿ ಸ್ವಾವಲಂಬಿ ಭಾರತಕ್ಕೆ ಒಂದು ಮಹತ್ವದ ವಿಷಯ ಎಂದಿದ್ದಾರೆ.

**ಸುಧಾರಣೆ ಕುರಿತು**

## ಪ್ರಗತಿಯ ಹಾದಿಯಲ್ಲಿನ ಅಡೆತಡೆಗಳ ನಿವಾರಣೆ

- ನೌಕರರ ಭವಿಷ್ಯ ನಿಧಿ [ಇಪಿಎಫ್‌ಓ] ಅಡಿ 2014 ರ ವರೆಗೆ ನೌಕರರು 7 ರೂ. ಮತ್ತು 25 ರೂ. ಪಿಂಚಣಿ ಪಡೆಯುತ್ತಿದ್ದರು. ಇದರಲ್ಲಿ ಪರಿಷ್ಕರಣೆ ತಂದು 1,000 ರೂ. ಮಾಡಿದ್ದೇವೆ.
- ಶಿಫಾರಸು ಇಲ್ಲದೆ ಉದ್ಯೋಗ ದೊರೆಯದು ಎಂಬುದು ಜನರ ನಡುವಿನ ಮಾತಾಗಿತ್ತು. ನಾವು ಅದನ್ನು ಕೊನೆಗಾಣಿಸಿದ್ದೇವೆ.
- ತಮಿಳುನಾಡಿನಲ್ಲಿ ಚರ್ಚಿಲ್ ಸಿಗಾರ್ ಅಸಿಸ್ಟೆಂಟ್ [ಸಿಸಿಎ] ಹುದ್ದೆ ಇತ್ತು. 1940ರಲ್ಲಿ ಚರ್ಚಿಲ್ ಪ್ರಧಾನಿಯಾದಾಗ ಅವರು ತಿರುಚ್ಚಿಯಿಂದ ಸಿಗಾರ್‌ಗಳನ್ನು ಪಡೆಯುತ್ತಿದ್ದರು. ಸಿಗಾರ್ ಸಮಯಕ್ಕೆ ಸರಿಯಾಗಿ ತಲುಪುವಂತೆ ನೋಡಿಕೊಳ್ಳುವುದು ಸಿಸಿಎ ಕಾರ್ಯವಾಗಿತ್ತು. ದೇಶ ಸ್ವಾತಂತ್ರ್ಯ ಪಡೆದ ನಂತರವೂ ಸಿಸಿಎ ಹುದ್ದೆ ಮುಂದುವರಿದಿತ್ತು. ಇಂತಹ ಅನೇಕ ನಿರರ್ಥಕ ವ್ಯವಸ್ಥೆಗಳು ದೇಶದಲ್ಲಿ ಮುಂದುವರಿದಿದ್ದವು. ಮುಂಚೆ ಪ್ರಮಾಣ ಪತ್ರಗಳನ್ನು ದೃಢೀಕರಿಸುವುದು ಅಗತ್ಯವಾಗಿತ್ತು. ಇದಕ್ಕಾಗಿ ದೊಡ್ಡ ಸರದಿ ಸಾಲು ಇರುತ್ತಿತ್ತು. ಇದರಿಂದ ಏನು ಉಪಯೋಗ? ಈ ಎಲ್ಲಾ ರೂಢಿಗತ ಅಭ್ಯಾಸಗಳನ್ನು ನಾವು ತೆಗೆದುಹಾಕಿದ್ದೇವೆ. ಇದರಿಂದ ಜನರಿಗೆ ಸಾಕಷ್ಟು ಪ್ರಯೋಜನವಾಗಿದೆ. ▪

# ಅಭಿವೃದ್ಧಿ ಹೊಂದುತ್ತಿರುವ ಪೂರ್ವ ಭಾಗದಿಂದ ನವ ಭಾರತದ ಪ್ರಗತಿ

**ಕೊಲ್ಕತ್ತಾದಿಂದ ಕೊಹಿಮಾ, ಚಂಪಾರಣ್‌ನಿಂದ ಅಂಡಮಾನ್, ಬ್ರಹ್ಮಪುತ್ರದಿಂದ ಬಂಗಾಳ ಕೊಲ್ಲಿ ಮತ್ತು ಪುರಿ ಕಡಲ ಕಿನಾರೆವರೆಗೆ ಸುಮಾರು 50 ಕೋಟಿ ಜನ ಪೂರ್ವ ಭಾರತದಲ್ಲಿ ವಾಸಿಸುತ್ತಾರೆ. ಆದರೆ ದೇಶದ ಇತರೆ ಪ್ರದೇಶಗಳಿಗೆ ಹೋಲಿಸಿದರೆ ಈ ಭಾಗ ಅಭಿವೃದ್ಧಿಯಲ್ಲಿ ತೀವ್ರ ಹಿನ್ನೆಡೆಯಲ್ಲಿದೆ. ಈಗ ಮೊದಲ ಬಾರಿಗೆ ಸರ್ಕಾರ ಭಾರತದ ಸಮತೋಲಿತ ಅಭಿವೃದ್ಧಿಗಾಗಿ "ಮಿಷನ್ ಪೂರ್ವೋದಯ"ಕ್ಕೆ ಸ್ಪಷ್ಟ ಕರೆ ನೀಡಿದೆ. ಅಭಿಯಾನದ ಮಾದರಿಯಲ್ಲಿ ಕೆಲಸ ನಡೆಯುತ್ತಿದ್ದು, ಜನರ ಜೀವನ ಮಟ್ಟ ಸುಧಾರಣೆಗೆ ಒತ್ತು ನೀಡಲಾಗಿದೆ. ರೈಲು, ರಸ್ತೆ, ವಿಮಾನ ನಿಲ್ದಾಣಗಳು, ಬಂದರು, ಜಲ ಮಾರ್ಗಗಳು ನಿರ್ಮಾಣವಾಗುತ್ತಿದೆ. ಈ ಮೂಲಕ ಪೂರ್ವ ಭಾರತದ ಆರ್ಥಿಕಾಭಿವೃದ್ಧಿಯ ವೈಭವವನ್ನು ಮರು ಸ್ಥಾಪಿಸಲು ಹೊಸ ಅಭಿವೃದ್ಧಿ ಮಾದರಿಗಳನ್ನು ಅಳವಡಿಸುವ ಮೂಲಕ ದೇಶದ ಪೂರ್ವ ಭಾಗವನ್ನು ಬೆಳವಣಿಗೆ ಮತ್ತು ಅಭಿವೃದ್ಧಿಯತ್ತ ಕೊಂಡೊಯ್ಯಲಾಗುತ್ತಿದೆ.**



# ಪೂರ್ವದಲ್ಲಿ ಹೊಸ ಅರುಣೋದಯ

ಬ್ರಹ್ಮಪುತ್ರ ನದಿಯಲ್ಲಿ ಸೇತುವೆ ಇಲ್ಲದಿರುವುದು ಈ ಪ್ರದೇಶದ ಜನರಿಗೆ ಬಹುದೊಡ್ಡ ಅಡಚಣೆಯಾಗಿತ್ತು. ಮುಂಚೆ ಬ್ರಹ್ಮಪುತ್ರ ನದಿಯನ್ನು ದಾಟಲು ಇದ್ದ ಏಕೈಕ ಮಾರ್ಗವೆಂದರೆ ದೋಣಿ ಮತ್ತು ಪ್ರವಾಹ ಸಂದರ್ಭದಲ್ಲಿ ಇದೂ ಸಹ ಸಾಧ್ಯವಾಗುತ್ತಿರಲಿಲ್ಲ. ಮೂರು ವರ್ಷಗಳ ಹಿಂದೆಯೂ ಇದೇ ಪರಿಸ್ಥಿತಿ ಇತ್ತು. ಈಗಲೂ ಈ ನೆನಪುಗಳು ಸಾದಿಯಾದ 42 ವರ್ಷದ ಸಂದೀಪ್ ಶರ್ಮಾ ಅವರಿಗೆ ರೋಮಾಂಚನ ಉಂಟು ಮಾಡುತ್ತದೆ. ಸಾದಿಯಾ ಎಂಬುದು ಸ್ಥಳದ ಹೆಸರು, ಇಲ್ಲೀಗ ಭೂಪೇನ್ ಹಜಾರಿಕಾ ಸೇತುವೆ ನಿರ್ಮಾಣವಾಗಿದೆ. ಸಂದೀಪ್ ಅವರು ವಿಲೇವಾರಿ ಹಾಗು ಸುಲಭವಾಗಿ ಮಣ್ಣಿನಲ್ಲಿ ಕರಗುವ ಮರದ ಎಲೆಗಳ ತಟ್ಟೆಗಳನ್ನು ನಿರ್ಮಿಸುವ ವ್ಯಾಪಾರ ಹೊಂದಿದ್ದಾರೆ. ಇವರಿಗೆ ಕ್ಯಾನ್ಸರ್‌ನಿಂದ ಬಳಲುತ್ತಿರುವ ತಮ್ಮ ತಾಯಿಯನ್ನು ದಿಬ್ರುಘರ್‌ನ ಆಸ್ಪತ್ರೆಗೆ ಕರೆದೊಯ್ಯಲು ಈ ನದಿ ದಾಟುವುದು ಅತ್ಯಂತ ತ್ರಾಸದಾಯಕವಾಗಿತ್ತು. "ಬ್ರಹ್ಮಪುತ್ರ ನದಿಯಲ್ಲಿ ಭೂಪೇನ್ ಹಜಾರಿಕ ಸೇತುವೆ ಮತ್ತು ಬೊಗಿಬೀಲ್ ಸೇತುವೆ ನಿರ್ಮಿಸಿರುವುದು ವರವಾಗಿದೆ" ಎನ್ನುತ್ತಾರೆ. ಸೇತುವೆ ನಿರ್ಮಾಣದ ನಂತರ ಕಾರ್ಖಾನೆ ಆರಂಭಿಸಿದ ಸಂದೀಪ್‌ಗೆ ತಮ್ಮ ಉತ್ಪನ್ನಗಳನ್ನು ತಿನ್ಸುಕಿಯಾದಿಂದ ಕಾಜಿರಂಗದಲ್ಲಿ ಮಾರಾಟ ಮಾಡಲು ಸಹಕಾರಿಯಾಗಿದೆ. ಇವರ ಪ್ರಯಾಣದ ಅವಧಿ 8 ಗಂಟೆಯಿಂದ 45 ನಿಮಿಷಕ್ಕೆ ಇಳಿಕೆಯಾಗಿದೆ. ದಿಬ್ರುಘರ್‌ನ ಪ್ರಣಬ್ ಗೊಗೊಯ್ ಅವರದ್ದು ಮತ್ತೊಂದು ಯಶೋಗಾಥೆ ಇದೆ. ಬೊಗಿಬೀಲ್ ಸೇತುವೆ ನಿರ್ಮಾಣದ ನಂತರ ಅವರ ರೆಸಾರ್ಟ್‌ನ ವ್ಯವಹಾರ ಪ್ರವರ್ಧಮಾನಕ್ಕೆ ಬರುತ್ತಿದೆ. ಈ ಸೇತುವೆ ಬ್ರಹ್ಮಪುತ್ರ ನದಿಯ ಉತ್ತರ ತೀರದಲ್ಲಿರುವ ಧೇಮಜಿ ಜಿಲ್ಲೆಯ ತಿನಿಯಲಿ ಪಟ್ಟಣದ ಕುಲಜನ್ ರಾಜದೀಪ್ ಬೊರ್ಗೊಹೈನ್ ಅವರಿಗೆ ಬ್ರಹ್ಮಪುತ್ರ ನದಿಯ ದಕ್ಷಿಣ ಪಾತ್ರದ ದಿಬ್ರುಘರ್ ವಿಶ್ವವಿದ್ಯಾಲಯಕ್ಕೆ ತೆರಳಲು ಸಹಕಾರಿಯಾಗಿದೆ. ದೇಶದ ಅತಿ ದೊಡ್ಡ ರೈಲು–ರಸ್ತೆ ಬೋಗಿಬೀಲ್ ಸೇತುವೆಯಿಂದ ಈಶಾನ್ಯ ಭಾಗದಲ್ಲಿ ಜನ ಜೀವನ ಸುಗಮವಾಗಿದೆ. ಶಿಕ್ಷಣ ಮತ್ತು ವ್ಯಾಪಾರ ವಲಯಕ್ಕೆ ಈ ಸೌಕರ್ಯ ಪುಷ್ಟಿ ನೀಡಿದ್ದು, ಸ್ಥಳೀಯ ಜನರಿಗೆ ಇದು ಜೀವನಾಧಾರವಾಗಿದೆ. ಇಟಾನಗರ್ ಮತ್ತು ದಿಬ್ರುಘರ್ ನಡುವಿನ 700 ಕಿಲೋಮೀಟರ್ ಉದ್ದ ಇದೀಗ 200 ಕಿಲೋಮೀಟರ್‌ಗೆ ಇಳಿಕೆಯಾಗಿದೆ. ಪ್ರಯಾಣದ ಸಮಯ 24 ಗಂಟೆಯಿಂದ 5 ರಿಂದ 6 ಗಂಟೆಗೆ ತಗ್ಗಿದೆ. ಐದು ಕಿಲೋಮೀಟರ್ ಉದ್ದದ ಈ ಸೇತುವೆ ಈಶಾನ್ಯ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವುದಷ್ಟೇ ಅಲ್ಲದೇ ಈಶಾನ್ಯ ಭಾಗಗಳ ಅಭಿವೃದ್ಧಿ ವೇಗ ಹೆಚ್ಚಿಸಲು ಕೂಡ ಸಹಕಾರಿಯಾಗಿದೆ ಮತ್ತು ಸ್ವಾವಲಂಬನೆಗೆ ಇದೂ ಕೂಡ ಪೂರಕವಾಗಿದೆ. ಬದಲಾವಣೆಯ ಈ ಯಶೋಗಾಥೆ ಪೂರ್ವ ಮತ್ತು ಈಶಾನ್ಯ ಪ್ರದೇಶಗಳ ಜನರ ಜೀವನಕ್ಕೆ ಮಾತ್ರ ಸೀಮಿತವಾಗಿಲ್ಲ. ಕೈಗಾರಿಕೆಗಳ ಅಭ್ಯುದಯಕ್ಕೆ ಪೂರಕವಾಗಿದೆ.



"ಮೊದಲು ಊಹಿಸಲು ಅಸಾಧ್ಯವಾಗಿದ್ದ ಪರಿಸ್ಥಿತಿ ಇದೀಗ ಕಾರ್ಯಸಾಧ್ಯ ಸ್ಥಿತಿಗೆ ತಲುಪಿದೆ. ನಾನು ನನ್ನ ಕಾರ್ಖಾನೆಯನ್ನು ಪ್ರಾರಂಭಿಸಿದ್ದೇನೆ. ಈ ಅಭಿವೃದ್ಧಿಯಿಂದ ವ್ಯಾಪಾರ, ಆರೋಗ್ಯ, ಶಿಕ್ಷಣ, ಭದ್ರತೆ ಸೇರಿ ಎಲ್ಲರಿಗೂ ಅನುಕೂಲಕರವಾಗಿದೆ. ಇದು ಜನರ ಮನಸ್ಥಿತಿಯನ್ನು ಬದಲಾಯಿಸಲು ಮತ್ತು ವಿಸ್ತರಿಸಲು ಸಹಕಾರಿಯಾಗಿದೆ. ಈ ಹಿಂದೆ ನಮ್ಮ ಪ್ರದೇಶದ ಜನತೆ ರೈಲು ನೋಡಿರಲಿಲ್ಲ. ಈಗ ಬೆಂಗಳೂರು, ದೆಹಲಿ, ಮುಂಬೈ ನಂತಹ ನಗರಗಳಿಗೆ ರೈಲಿನ ಮೂಲಕ ತೆರಳಬಹುದಾಗಿದೆ"

-ಸಂದೀಪ್ ಶರ್ಮಾ

**ಹಲ್ದಿಯಾ ಪಶ್ಚಿಮ ಬಂಗಾಳದ ಪ್ರಮುಖ ವ್ಯಾಪಾರ ಮತ್ತು ಕೈಗಾರಿಕಾ ಪ್ರದೇಶವಾಗಿದೆ. ಇದು ಆತ್ಮನಿರ್ಭರ್ ಭಾರತ್‌ನ ಕೇಂದ್ರ ಬಿಂದುವಾಗಿ ಹೊರ ಹೊಮ್ಮುತ್ತಿದ್ದು, ವಿಶ್ವಭೂಪಟದಲ್ಲಿ ತನ್ನ ಗುರುತು ಮೂಡಿಸಲು ಸಿದ್ಧವಾಗಿದೆ. 2021 ರ ಫೆಬ್ರವರಿಯಲ್ಲಿ 350 ಕಿಲೋಮೀಟರ್ ಉದ್ದದ ದೋಭಿ-ದುರ್ಗಾಪುರ್ ನಡುವಿನ ಕೊಳವೆ ಮಾರ್ಗವನ್ನು ದೇಶಕ್ಕೆ ಸಮರ್ಪಿಸಲಾಗಿದೆ. ಸುಮಾರು ಎರಡು ವರ್ಷಗಳ ಹಿಂದೆ ಪ್ರಸಿದ್ಧ ಎಫ್‌ಎಂಸಿಜಿ ಕಂಪೆನಿಯ ಸರಕುಗಳನ್ನು ಒಳನಾಡಿನ ಜಲ ಮಾರ್ಗಗಳ ಸಾರಿಗೆ ಮೂಲಕ ಉತ್ತರ ಪ್ರದೇಶದ ವಾರಾಣಸಿಗೆ ಹಲ್ದಿಯಾದಿಂದ ಕಳುಹಿಸುವ ವ್ಯವಸ್ಥೆ ಮಾಡಲಾಗಿತ್ತು. ಸ್ವಾತಂತ್ರ್ಯಾ ನಂತರ ಇದೇ ಮೊದಲ ಬಾರಿಗೆ ಜಲ ಮಾರ್ಗದ ಮೂಲಕ ಅತ್ಯಂತ ಯಶಸ್ವಿಯಾಗಿ ವ್ಯಾಪಾರ ಮತ್ತು ವ್ಯವಹಾರ ನಡೆಸಬಹುದು ಎನ್ನುವುದನ್ನು ಇದು ನಿರೂಪಿಸಿದೆ. ಪೂರ್ವ ಭಾರತ ಇದೀಗ ಬಂಗಾಳ ಕೊಲ್ಲಿಯ ಜಲ ಮಾರ್ಗದಿಂದ ಸಂಪರ್ಕ ಪಡೆದುಕೊಂಡಿದೆ. ಈ ಜಲ ಮಾರ್ಗ ಈ ಭಾಗದ ರೈತರು ಹಾಗು ಸಣ್ಣ ಕೈಗಾರಿಕಾ ವಲಯಕ್ಕೆ ಹೊಸ ಅವಕಾಶಗಳನ್ನು ತೆರೆದಿಟ್ಟಿದೆ. ಕೈಗಾರಿಕೆಗಳು ಮತ್ತು ಕೃಷಿಗೆ ಕಚ್ಚಾ ವಸ್ತುಗಳನ್ನು ಸಾಗಿಸುವಲ್ಲಿ ಮತ್ತು ಮೌಲ್ಯವರ್ಧನೆಯ ನಂತರ ಉತ್ಪನ್ನಗಳನ್ನು ಹಿಂತಿರುಗಿ ಕಳುಹಿಸುವಲ್ಲಿ ಈ ಸೌಕರ್ಯ ಪ್ರಮುಖ ಪಾತ್ರ ವಹಿಸುತ್ತದೆ. ಹಲ್ದಿಯಾ ಮತ್ತು ವಾರಾಣಸಿ ನಡುವಿನ ಜಲಮಾರ್ಗ ಪೂರ್ವಭಾಗದ ಜನರ ಜೀವನ ಮತ್ತು ವ್ಯವಹಾರದ ಹಾದಿಯನ್ನೇ ಮಾರ್ಪಡಿಸಿದೆ.**

ಸ್ವಾತಂತ್ರ್ಯ ಪೂರ್ವದಲ್ಲಿ ಈಶಾನ್ಯ ಭಾಗ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಆದಾಗ್ಯೂ ನಂತರದಲ್ಲಿ ಖನಿಜ ಸಂಪನ್ಮೂಲಗಳು, ನೈಸರ್ಗಿಕ ಸೌಂದರ್ಯ ಮತ್ತು ಜೀವವೈವಿಧ್ಯದಿಂದ ಸಮೃದ್ಧವಾಗಿದ್ದರೂ ಇದು ತನ್ನ ವೈಭವವನ್ನು ಕಳೆದುಕೊಂಡಿತು. ಪಾರಾದೀಪ್, ವೈಜಾಗ್, ಹಲ್ದಿಯಾ ಮತ್ತು ಕೊಲ್ಕತ್ತಾದಂತಹ ದೇಶದ ಹಲವು ಬಂದರುಗಳನ್ನು ಹೊಂದಿದ್ದು, ಇದರಿಂದ ಇಲ್ಲಿನ ಶ್ರೀಮಂತಿಕೆಯನ್ನು ಅಳೆಯಬಹುದಾಗಿದೆ. ಸಂಪನ್ಮೂಲ ಸಮೃದ್ಧ ರಾಜ್ಯಗಳಾದ ಪಶ್ಚಿಮ ಬಂಗಾಳ, ಒಡಿಶಾ ಮತ್ತು ಎಂಟು ಈಶಾನ್ಯ ರಾಜ್ಯಗಳು ವೈವಿಧ್ಯಮಯ ಸಸ್ಯ ಸಂಕುಲ, ಪ್ರಾಣಿ ಸಂತತಿಯನ್ನು ಹೊಂದಿರುವ ಪ್ರದೇಶದ ಭಾಗಗಳಾಗಿವೆ. ಇದರ ನಡುವೆಯೂ ಈ ರಾಜ್ಯಗಳು ವ್ಯಾಪಕವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿವೆ.

ಇದು ಮಾತ್ರವಲ್ಲ, ಭಾರತದ ಪೂರ್ವ ಭಾಗ ಆಗ್ನೇಯ ಏಷ್ಯಾದ ಹೆಬ್ಬಾಗಿಲಂತೆ ಕಾರ್ಯನಿರ್ವಹಿಸುತ್ತದೆ ಮತ್ತು ಬಾಂಗ್ಲಾದೇಶ, ಭೂತಾನ್, ಮ್ಯಾನ್ಮಾರ್, ನೇಪಾಳ ಮತ್ತು ಚೈನಾದಂತಹ ಐದು ದೇಶಗಳ ಅಂತಾರಾಷ್ಟ್ರೀಯ ಗಡಿಗಳನ್ನು ಹೊಂದಿದೆ. ಸ್ವಾತಂತ್ರ್ಯೋತ್ತರದಲ್ಲಿ ಯಾವುದೇ ರೀತಿಯ ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳು ನಡೆದಿರಲಿಲ್ಲ. ಆದರೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಕಾಲದಲ್ಲಿ "ಪೂರ್ವದತ್ತ ನೋಡು" ನೀತಿಯನ್ನು ಜಾರಿಗೆ ತರಲಾಯಿತು. ಮಾಜಿ ಪ್ರಧಾನಮಂತ್ರಿಯವರ ಈ ಪರಂಪರೆಯನ್ನು 2014 ರ ನಂತರ ಮುಂದುವರಿಸಿ ಕಾರ್ಯನಿರ್ವಹಿಸಿದ ಪರಿಣಾಮ ಇಲ್ಲಿನ ಚಿತ್ರಣ ಬದಲಾಗಿದೆ. ಪೂರ್ವದತ್ತ ನೋಡು ನೀತಿಯನ್ನು ಪೂರ್ವದತ್ತ ಕಾರ್ಯಪ್ರವೃತ್ತವಾಗು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬದಲಾಯಿಸಿದ್ದು, ಇದರ ಪರಿಣಾಮ ಕಳೆದುಹೋದ ವೈಭವವನ್ನು ಪುನಃ ಸ್ಥಾಪಿಸಲು ಮತ್ತು ಅದನ್ನು ನಿರ್ಣಾಯಕ ವ್ಯಾಪಾರ ಕೇಂದ್ರವನ್ನಾಗಿ ಮಾಡಲು ಸಾಧ್ಯವಾಯಿತು. ಇದರ ಫಲಿತಾಂಶದಿಂದ ಹೆದ್ದಾರಿಗಳು, ಐ-ವೇಗಳು, ರೈಲ್ವೆ ಮತ್ತು ವಾಯು ಮಾರ್ಗಗಳನ್ನು [ಎಚ್‌ಐಆರ್‌ಎ] ಅಭಿವೃದ್ಧಿಪಡಿಸಲಾಯಿತು. ಕಲೆ, ಸಂಸ್ಕೃತಿ, ಕ್ರೀಡೆ, ಕೈಗಾರಿಕೆ ಮತ್ತು ವ್ಯಾಪಾರ ಮುಂಚೂಣಿಗೆ ಬಂತು. ಎಷ್ಟರ ಮಟ್ಟಿಗೆ ಎಂದರೆ ಈಗ ಅವರು ಭಾರತವನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಮೂಲಸೌಕರ್ಯ ವಲಯವನ್ನು ಕೇಂದ್ರೀಕರಿಸಿದ್ದು, ಈ ವಲಯದೊಂದಿಗೆ ಬಾಂಗ್ಲಾದೇಶ, ನೇಪಾಳ, ಭೂತಾನ್ ಮತ್ತು ಮ್ಯಾನ್ಮಾರ್ ನಡುವೆ ಜಲ ಮಾರ್ಗದ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದಾಗಿ ಆಗ್ನೇಯ ಏಷ್ಯಾದ ವಿವಿಧ ದೇಶಗಳೊಂದಿಗೆ ಭಾರತದ ವ್ಯವಹಾರ ಐತಿಹಾಸಿಕ ಗುರುತು ತಲುಪಿದೆ ಮತ್ತು ಇದರ ಶ್ರೇಯಸ್ಸು ಭಾರತದ ಖನಿಜ ಆಧಾರಿತ ಕೈಗಾರಿಕೆಗಳಿಗೆ ಸಲ್ಲುತ್ತದೆ. ಸರ್ಕಾರದ ಗಮನ ಅಭಿವೃದ್ಧಿಯತ್ತ ಇದ್ದರೂ ಸಹ ಅಭಿವೃದ್ಧಿಯನ್ನು ಕಾಪಾಡಿಕೊಳ್ಳಲು ಈ ಪ್ರದೇಶದಲ್ಲಿ ಶಾಂತಿ ಕಾಪಾಡಿಕೊಳ್ಳುವುದು ಮುಖ್ಯವಾಗಿದೆ ಎಂಬುದನ್ನು ಒಪ್ಪಿಕೊಂಡಿದೆ. ಇದರಿಂದಾಗಿ ಸಂಘರ್ಷಗಳನ್ನು



## ರೈಲ್ವೆ

ಈಶಾನ್ಯ ಭಾಗದಲ್ಲಿ **15,088** ಕೋಟಿ ರೂ. ವೆಚ್ಚದ ಆರು ರೈಲ್ವೆ ಯೋಜನೆಗಳು ಪೂರ್ಣ




**39.12 ಕಿಮೀ**

ಬೆಲೋನಿಯಾ-ಸಬ್ರುಮ್ ರೈಲು ಮಾರ್ಗ ಬಾಂಗ್ಲಾದೇಶದ ದಕ್ಷಿಣ ತ್ರಿಪುರ ಮತ್ತು ಚಟ್ಟೋಗ್ರಾಮ್ ಬಂದರಿಗೆ ಸುಲಭ ಪ್ರವೇಶ ಒದಗಿಸುತ್ತದೆ.

- ಸಾರೈಘಾಟ್‌ನಲ್ಲಿ ಬ್ರಹ್ಮಪುತ್ರ ನದಿಯ ಸಾರೈಘಾಟ್ ಮತ್ತು ತೇಜ್ಪುರ್ ಸಿಲಿಘಾಟ್ ಸೇತುವೆಗಳ ನಿರ್ಮಾಣಕ್ಕೆ ಅಂಗೀಕಾರ ನೀಡಲಾಗಿದೆ. 2,352 ಕಿಲೋಮೀಟರ್ ಉದ್ದದ ಎನ್.ಇ.ಆರ್.ನ ಬಿಜಿ ರೈಲ್ವೆ ಮಾರ್ಗದ ವಿದ್ಯುದ್ದೀಕರಣ ಪ್ರಗತಿಯಲ್ಲಿದೆ.
- ಹೌರಾ ಮತ್ತು ಮಾಲ್ಡಾ ವಲಯದ 219 ಕೋಟಿ ರೂ. ವೆಚ್ಚದ ಮೊನಿಗ್ರಾಮ್-ನಲ್ಹಟಿ ಮತ್ತು ಕಟ್ವಾ-ಅಜಿಮ್‌ಗಂಜ್ ನಡುವಿನ 140 ಕಿಲೋಮೀಟರ್ ರೈಲ್ವೆ ಮಾರ್ಗದ ವಿದ್ಯುದೀಕರಣ ಕಾರ್ಯ ಪೂರ್ಣಗೊಂಡಿದೆ. ಹೌರಾ ವಿಭಾಗದ 14 ಕಿಲೋಮೀಟರ್ ಉದ್ದದ ಮೂರು ಪಥದ ಮಾರ್ಗ, 27.17 ಕಿಲೋಮೀಟರ್ ಉದ್ದದ ಮಾಲ್ಡಾ ಮತ್ತು ಸಿಯಲ್ಡಾ ವಿಭಾಗಗಳ ಪೂರ್ವ ರೈಲ್ವೆ ಕಾಮಗಾರಿ ಆರಂಭಗೊಂಡಿದೆ.
- ಈಶಾನ್ಯ ಭಾಗದಲ್ಲಿ 2014-19ರ ಅವಧಿಯಲ್ಲಿ 231 ಕಿಲೋಮೀಟರ್ ಹೊಸ ಮಾರ್ಗ ನಿಯೋಜಿಸಲಾಗಿದೆ. 41 ಹೊಸ ರೈಲ್ವೆ ನಿಲ್ದಾಣಗಳನ್ನು ನಿರ್ಮಿಸಲಾಗಿದೆ. ಇದೇ ಮೊದಲ ಬಾರಿಗೆ ಅರುಣಾಚಲ ಪ್ರದೇಶ ಮತ್ತು ಮೇಘಾಲಯ ನಡುವೆ ರೈಲ್ವೆ ಸಂಪರ್ಕ ಸಾಧ್ಯವಾಗಿದೆ.



## ವಿಮಾನಯಾನ

- ಅರುಣಾಚಲ ಪ್ರದೇಶಕ್ಕೆ ಸಂಪರ್ಕ ಕಲ್ಪಿಸುವ ಹೊಲೊಂಗಿಯಲ್ಲಿರುವ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆ. 955.67 ಕೋಟಿ ರೂಪಾಯಿ ಅಂದಾಜು ವೆಚ್ಚದ ಕಾಮಗಾರಿ 2022 ರಲ್ಲಿ ಪೂರ್ಣಗೊಳ್ಳಲಿದೆ.
- 2018 ರಲ್ಲಿ ಸಿಕ್ಕಿಂಗೆ ಮೊದಲ ವಿಮಾನ ನಿಲ್ದಾಣ ದೊರೆಯಿತು. ಇತರ ರಾಜ್ಯಗಳು ಸಹ ಹೊಸ ವಿಮಾನ ನಿಲ್ದಾಣ ನಿರ್ಮಿಸುವ ಅಥವಾ ಹಾಲಿ ಇರುವ ವಿಮಾನ ನಿಲ್ದಾಣಗಳ ಸೌಲಭ್ಯ ಮತ್ತು ಸಾಮರ್ಥ್ಯ ಹೆಚ್ಚಳ ಕುರಿತು ಆಸಕ್ತವಾಗಿವೆ. ಈಶಾನ್ಯ ಭಾಗದಲ್ಲಿ ಪ್ರಸ್ತುತ 13 ವಿಮಾನ ನಿಲ್ದಾಣಗಳು ಕಾರ್ಯಾಚರಣೆ ಮಾಡುತ್ತಿವೆ.
- ಈ ವಲಯದಲ್ಲಿ ಹಾಲಿ ಇರುವ ವಿಮಾನ ನಿಲ್ದಾಣಗಳನ್ನು ವಿಸ್ತರಿಸಲಾಗುತ್ತಿದ್ದು, ಇಂಫಾಲದಲ್ಲಿರುವ ವಿಮಾನ ನಿಲ್ದಾಣದಲ್ಲಿ ಆಧುನಿಕ ಸೌಲಭ್ಯ ಕಲ್ಪಿಸಲು 3000 ಕೋಟಿ ರೂಪಾಯಿಗೂ ಹೆಚ್ಚು ಹಣ ವೆಚ್ಚ ಮಾಡಲಾಗಿದೆ.



# ಮೂಲಸೌಕರ್ಯಕ್ಕೆ ಹೊಸ ವೇಗ

ಬ್ರಹ್ಮಪುತ್ರ ನದಿಗೆ ಹೊಂದಿಕೊಂಡಂತೆ ಅರುಣಾಚಲ ಪ್ರದೇಶದ ಪಸಿಘಾಟ್‌ನಿಂದ ಅಸ್ಸಾಂನ ದಿಬ್ರುಘರ್, ಮೇಘಾಲಯ, ತ್ರಿಪುರ, ಮಿಜೋರಾಂ ನಡುವೆ ಅತಿ ಉದ್ದದ ರಸ್ತೆ, ರೈಲ್ವೆ ಸೇತುವೆಗಳನ್ನು ನಿರ್ಮಿಸಲಾಗಿದ್ದು, ಇದು ದೇಶದ ರೈಲ್ವೆ ನಕ್ಷೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ನಗರ ಯೋಜನೆಯಡಿ ಸಾವಿರಾರು ಕಿಲೋಮೀಟರ್ ಹೆದ್ದಾರಿಗಳ ನಿರ್ಮಾಣ ಮತ್ತು ಉಡಾನ್ ಯೋಜನೆಯಡಿ 92 ವಿಮಾನಯಾನ ಸೌಲಭ್ಯ. 19 ಹೊಸ ರಾಷ್ಟ್ರೀಯ ಜಲ ಮಾರ್ಗಗಳು ಕಾರ್ಯಾರಂಭ ಮಾಡಿವೆ. 2014ರ ನಂತರ 13 ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ಉಪ ಕ್ರಮಗಳು ಭಾರತದ ನೈಜ ಅಭಿವೃದ್ಧಿ ಕಥೆಯಾಗಿ ಮಾರ್ಪಟ್ಟಿವೆ.

## ಅಸ್ಸಾಂ

ರಾಜ್ಯದಲ್ಲಿ 1,300 ಕಿಲೋಮೀಟರ್ ರಾಷ್ಟ್ರೀಯ ಹೆದ್ದಾರಿಯನ್ನು 34,000 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಪ್ರಸಕ್ತ ಬಜೆಟ್‌ನಲ್ಲಿ ಅವಕಾಶ

536 ಕಿಲೋಮೀಟರ್ ಉದ್ದದ 35 ರಾಷ್ಟ್ರೀಯ ಹೆದ್ದಾರಿ ಯೋಜನೆಗಳನ್ನು **7,707.17** ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಕಾಮಗಾರಿಗೆ ಮಂಜೂರಾತಿ. ಅರುಣಾಚಲ ಪ್ರದೇಶದಲ್ಲಿ 3 ಯೋಜನೆಗಳು [66 ಕಿಲೋಮೀಟರ್] ಪೂರ್ಣಗೊಂಡಿವೆ.



ಭೂಪೇನ್ ಹಜಾರಿಕ ಸೇತುವೆ ಮತ್ತು ಸಾರೈಘಾಟ್ ಸೇತುವೆಗಳು ಅಸ್ಸಾಂನ ಆಧುನಿಕ ಅಸ್ಮಿತೆಯ ಗುರುತಾಗಿ ಹೊರ ಹೊಮ್ಮಿವೆ. ಶೀಘ್ರದಲ್ಲೇ ಧುಬಾರಿ ಮತ್ತು ಮಜುಲಿಯಲ್ಲಿ ಹೊಸ ಸೇತುವೆಗಳ ನಿರ್ಮಾಣ

ಪಶ್ಚಿಮ ಬಂಗಾಳದ ಹಲ್ದಿಯಾದಲ್ಲಿ 190 ಕೋಟಿ ರೂ ವೆಚ್ಚದಲ್ಲಿ ಹೊಸ ಮೇಲ್ಸೇತುವೆ ನಿರ್ಮಾಣ. ಇದರಿಂದ ಸಂಪರ್ಕ ವ್ಯವಸ್ಥೆ ಸುಧಾರಣೆಯಾಗಲಿದೆ ಮತ್ತು ಪ್ರಯಾಣದ ಅವಧಿ ತಗ್ಗಲಿದೆ.

### ಈಶಾನ್ಯ ರಾಜ್ಯಗಳಲ್ಲಿ ರಸ್ತೆ ನಿರ್ಮಾಣ

| **3,178**ಕಿಮೀ | **22,882**ಕಿಮೀ | **987**ಕಿಮೀ |
|---|---|---|
| ನಿರ್ಮಾಣ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದಿಂದ ನಿರ್ಮಾಣ | ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಿಂದ ನಿರ್ಮಾಣ | ಗಡಿ ರಸ್ತೆ ಸಂಘಟನೆಯಿಂದ ನಿರ್ಮಾಣ |

ಅಂಕಿಅಂಶಗಳು: ಮೇ 2014 ರಿಂದ 2019

ಒಡಿಶಾದಲ್ಲಿ ರಾಷ್ಟ್ರೀಯ ಹೆದ್ದಾರಿಯ ಉದ್ದ 2014ರಲ್ಲಿ 4,632 ಕಿಲೋಮೀಟರ್ ಇತ್ತು. ಇದು 2018ರ ವೇಳೆಗೆ 9,426 ಕಿಲೋಮೀಟರ್‌ಗೆ ಹೆಚ್ಚಳಗೊಂಡಿದೆ.

2014ರಲ್ಲಿ ಈಶಾನ್ಯ ಭಾಗದಲ್ಲಿ 96 ರಸ್ತೆ ಮತ್ತು ಸೇತುವೆಗಳಿಗೆ ಮಂಜೂರಾತಿ, ಈ ಪೈಕಿ 6 ಯೋಜನೆಗಳು ಪೂರ್ಣ, 90 ಯೋಜನೆಗಳು ಪ್ರಗತಿಯಲ್ಲಿ

ಈಶಾನ್ಯ ರಾಜ್ಯ ರಸ್ತೆ ವಲಯ ಯೋಜನೆಯನ್ನು ಸರ್ಕಾರ ಆರಂಭಿಸಿದೆ ಮತ್ತು ಅಂತರ್ ರಾಜ್ಯ ರಸ್ತೆಗಳನ್ನು ಆಯಾ ವಲಯದೊಳಗೆ ನಿರ್ವಹಿಸಲು ಕ್ರಮ

### ಅಸೋಮ್ ಮಾಲಾ ಯೋಜನೆ

ಮುಂದಿನ 15 ವರ್ಷಗಳಲ್ಲಿ ಭಾರತ್ ಮಾಲಾ ಯೋಜನೆಯಂತೆ ಅಸೋಮ್ ಮಾಲಾ ಯೋಜನೆ ಜಾರಿ ಮಾಡಿ ಆಧುನಿಕ ರಸ್ತೆ ಮೂಲಸೌಕರ್ಯ ನಿರ್ಮಾಣ. ವಿಸ್ತಾರ ಹೆದ್ದಾರಿ ಸಂಪರ್ಕ ಜಾಲದ ಜತೆಗೆ ಎಲ್ಲಾ ಹಳ್ಳಿಗಳನ್ನು ಮುಖ್ಯರಸ್ತೆಗಳೊಂದಿಗೆ ಸಂಪರ್ಕಿಸುವ ವ್ಯವಸ್ಥೆ

### ರಾಜಧಾನಿ ನಗರಗಳ ಸಂಪರ್ಕ

ಅಸ್ಸಾಂ, ಅರುಣಾಚಲ ಪ್ರದೇಶ ಮತ್ತು ತ್ರಿಪುರ ರಾಜ್ಯಗಳ ರಾಜಧಾನಿ ನಗರಗಳ ನಡುವೆ ರೈಲ್ವೆ ಜಾಲವನ್ನು ಸಂಪರ್ಕಿಸಲಾಗಿದೆ. ಮೇಘಾಲಯ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ ಮತ್ತು ಸಿಕ್ಕಿಂ ನಡುವೆ ಹೊಸ ರೈಲ್ವೆ ಬ್ರಾಡ್ ಗೇಜ್ ಮಾರ್ಗ ನಿರ್ಮಾಣ ಆರಂಭ.



### ಜಲ ಮಾರ್ಗಗಳು

- ಕೋಲ್ಕತ್ತಾ – ಹಲ್ದಿಯಾ ಬಂದರುಗಳಿಂದ ಭಾರತ – ಬಾಂಗ್ಲಾದೇಶ ನಡುವೆ ಶಿಷ್ಟಾಚಾರ ಮಾರ್ಗ ಮತ್ತು ಎನ್.ಡಬ್ಲ್ಯು2 [ಬ್ರಹ್ಮಪುತ್ರ] ಮೂಲಕ ಗುವಾಹತಿ ಟರ್ಮಿನಲ್‌ಗೆ ಭಾರೀ ಸರಕು ಮತ್ತು ಕಂಟೈನರ್‌ಗಳ ಸಾಗಾಟಕ್ಕೆ ಅವಕಾಶ. ಹಲ್ದಿಯಾದಲ್ಲಿ ಬಹುಮಾದರಿಯ ಟರ್ಮಿನಲ್ ನಿರ್ಮಿಸಲು ಭಾರತೀಯ ಒಳನಾಡು ಜಲ ಸಾರಿಗೆಯಿಂದ ಕಾರ್ಯಯೋಜನೆ.
- ಅಸ್ಸಾಂನಲ್ಲಿ ಮಹಾಬಾಹು–ಬ್ರಹ್ಮಪುತ್ರ ಯೋಜನೆ ಜಾರಿ. ನಿಯಮತಿ–ಮಜುಲಿ ದ್ವೀಪಗಳ ನಡುವೆ, ಉತ್ತರ ಗುವಾಹತಿ–ದಕ್ಷಿಣ ಗುವಾಹತಿ ಮತ್ತು ಧುಬ್ರಿ–ಹಸ್ತಿಂಗಿಮರಿ ಮಧ್ಯೆ ರೊ–ಪಾಕ್ಸ್ ಹಡಗು ಕಾರ್ಯಾಚರಣೆ. ರೋ–ಪಾಕ್ಸ್ ಸೇವೆಯಿಂದ ಈ ಭಾಗದ ದೂರ ಗಣನೀಯವಾಗಿ ಕಡಿಮೆಯಾಗಲಿದೆ.
- ತ್ರಿಪುರ–ಬಾಂಗ್ಲಾದೇಶ ಸಂಪರ್ಕಿಸುವ ಸೋನಾಮುರ–ದೌದ್ಕಂಡಿ ನಡುವೆ ಶಿಷ್ಟಾಚಾರದ ಒಳನಾಡು ಜಲ ಮಾರ್ಗ 2020ರ ಮೇನಲ್ಲಿ ಕಾರ್ಯಾರಂಭ.
- ಒಡಿಶಾದಲ್ಲಿ ಸಾಗರಮಾಲಾ ಯೋಜನೆಯಡಿ 20,000 ಕೋಟಿ ರೂ. ವೆಚ್ಚದ 34 ಯೋಜನೆಗಳನ್ನು ಗುರುತಿಸಲಾಗಿದೆ.

### ಹೊಸ ಉದ್ಯೋಗಾವಕಾಶಗಳು

ದುರ್ಗಾಪುರ ಮತ್ತು ಸಿಂಡ್ರಿ ರಸಗೊಬ್ಬರ ಕಾರ್ಖಾನೆಗಳಿಗೆ ಅನಿಲ ಪೂರೈಕೆ. ಈ ಕಾರ್ಖಾನೆಗಳ ಬೆಳವಣಿಗೆಗಳಿಂದ ಹೊಸ ಉದ್ಯೋಗಾವಕಾಶ ಹಾಗು ಸೂಕ್ತ ಮತ್ತು ಕಡಿಮೆ ಬೆಲೆಯಲ್ಲಿ ರೈತರಿಗೆ ರಸಗೊಬ್ಬರ ಪೂರೈಕೆ

### ಮಿಷನ್ ಪೂರ್ವೋದಯ



ಮಿಷನ್ ಪೂರ್ವೋದಯದಡಿ ಪೂರ್ವ ಭಾರತದಲ್ಲಿ ಕೇಂದ್ರ ಸರ್ಕಾರದಿಂದ ಸಮಗ್ರ ಉಕ್ಕು ಕೇಂದ್ರ ಸ್ಥಾಪನೆ

### ₹ 9,265 ಕೋಟಿ

ವೆಚ್ಚದಲ್ಲಿ ಈಶಾನ್ಯ ಭಾಗದಲ್ಲಿ ಇಂದ್ರಧನುಷ್ ಗ್ಯಾಸ್ ಗ್ರಿಡ್ ಲಿಮಿಟೆಡ್‌ನಿಂದ ಅನಿಲ ಗ್ರಿಡ್ ಯೋಜನೆ. 1,656 ಕಿಲೋಮೀಟರ್ ಉದ್ದದ ಅನಿಲ ಕೊಳವೆ ಮಾರ್ಗ ಸ್ಥಾಪನೆ, 8 ರಾಜ್ಯಗಳ ನಡುವೆ ಸಂಪರ್ಕ ಮತ್ತು ಇದರಿಂದ ಕೈಗಾರಿಕಾ ಬೆಳವಣಿಗೆಗೆ ಪುಷ್ಟಿ.



### 348-ಕಿಮೀ ಉದ್ದದ ಅನಿಲ ಕೊಳವೆ ಮಾರ್ಗ

ದೊಭಿ–ದುರ್ಗಾಪುರ್ ನಡುವೆ 348 ಕಿಲೋಮೀಟರ್ ನೈಸರ್ಗಿಕ ಅನಿಲ ಕೊಳವೆ ಮಾರ್ಗ ಯೋಜನೆ ಪ್ರಧಾನಮಂತ್ರಿ ಊರ್ಜಾಗಂಗಾ ಪೈಪ್‌ಲೈನ್ ಯೋಜನೆಯಡಿ ನಿರ್ಮಿಸಿದ್ದು, ದೇಶಕ್ಕೆ ಸಮರ್ಪಿಸಲಾಗಿದೆ.

### ಪಶ್ಚಿಮ ಬಂಗಾಳಕ್ಕೆ ಲಾಭ

ದೋಭಿ–ದುರ್ಗಾಪುರ್ ನೈಸರ್ಗಿಕ ಅನಿಲ ಕೊಳವೆ ಮಾರ್ಗದಿಂದ ಪಶ್ಚಿಮ ಬಂಗಾಳದ 10 ಜಿಲ್ಲೆಗಳಲ್ಲದೇ ಬಿಹಾರ, ಜಾರ್ಖಂಡ್ ರಾಜ್ಯಗಳಿಗೂ ಅನುಕೂಲಕರವಾಗಲಿದೆ.

## ಕೈಗಾರಿಕೆಗಳಿಗೆ ಅವಕಾಶ ...

ಈಶಾನ್ಯ ಪ್ರದೇಶ ಶ್ರೀಮಂತ ಸಂಪನ್ಮೂಲ ವಲಯ. ಇಲ್ಲಿ ಚಿನ್ನದಿಂದ ಹಿಡಿದು ಸುಣ್ಣದ ಕಲ್ಲು, ಡೊಲಮೈಟ್, ಬಾಕ್ಸೈಟ್, ಗ್ರಾಫೈಟ್, ಸಿಲ್ಲಿಮಾನೈಟ್ ಮತ್ತು ಕಬ್ಬಿಣದವರೆಗೆ ಖನಿಜಗಳು ಇಲ್ಲಿ ಕಂಡು ಬರುತ್ತವೆ. ಇದೇ ಕಾಲಕ್ಕೆ ಕೃಷಿ ವಲಯದಲ್ಲೂ ಸಾಕಷ್ಟು ಅವಕಾಶಗಳಿವೆ.

### ₹47.02 ಕೋಟಿ ಎಂಎಸ್‌ಎಂಇಗೆ

2019 ಜೂನ್‌ನಿಂದ 2020ರ ಮೇ ವರೆಗೆ ಈಶಾನ್ಯ ಪ್ರದೇಶದಲ್ಲಿ ಎಂ.ಎಸ್.ಎಂ.ಇಗಳ ಉತ್ತೇಜನಕ್ಕೆ 47.02 ಕೋಟಿ ರೂ. ವಿತರಣೆ

ತಪ್ಪಿಸಲು ಬೋಡೋ, ನಾಗಾ ಮತ್ತು ಬ್ರುರಿಯಾಂಗ್ ನಡುವೆ ಐತಿಹಾಸಿಕ ಒಪ್ಪಂದಳಿಗೆ ಸಹಿ ಹಾಕಲಾಗಿದೆ. ಈ ಪ್ರದೇಶದ ಅಭಿವೃದ್ಧಿ ಈಗ ಭಾರತದ ಪೂರ್ವ ಭಾಗಕ್ಕೆ ಚಾಲನೆ ನೀಡುತ್ತಿದ್ದು, ಪ್ರಗತಿಪಥದತ್ತ ಭಾರತ ಸಾಗುತ್ತಿದೆ.

**ಪೂರ್ವೋದಯಕ್ಕಾಗಿ ಹೊಸ ಮಂತ್ರ**

ಪೂರ್ವ ಭಾರತ ಇದೀಗ ದಕ್ಷಿಣ ಏಷ್ಯಾದ ಪ್ರವೇಶ ದ್ವಾರವಾಗಿದೆ. 2014 ರಿಂದೀಚೆಗೆ ಸರ್ಕಾರ ಅಭಿಯಾನದಂತೆ ಕಾರ್ಯನಿರ್ವಹಿಸುತ್ತಿದ್ದು, ಈ ಗುರಿ ಸಾಧನೆಗೆ ಸರ್ಕಾರ ಪೂರ್ವೋದಯ ಮಂತ್ರಕ್ಕೆ ಆದ್ಯತೆ ನೀಡಿದೆ. "ಭಾರತ ಮಾತೆಗೆ ಇದೀಗ ಪೂರ್ವ ಭಾರತ ಮತ್ತು ಪಶ್ಚಿಮ ಭಾರತ ಎರಡು ಕೈಗಳಿದ್ದಂತೆ. ಪೂರ್ವ ಭಾರತ ಅಭಿವೃದ್ಧಿಯಾಗದೇ ಪಶ್ಚಿಮ ಭಾರತ ಅಭಿವೃದ್ಧಿ ಸಾಧಿಸಿದರೆ ಭಾರತದ ಅಭಿವೃದ್ಧಿ ಸಾಧ್ಯವಿಲ್ಲ" ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈ ದೃಷ್ಟಿಯಲ್ಲಿ ಸರ್ಕಾರ ಈ ವಲಯದಲ್ಲಿ ಸಂಪರ್ಕ, ವಾಣಿಜ್ಯ ಮತ್ತು ಸಂಸ್ಕೃತಿ ಎಂಬ ಮೂರು ಸೂತ್ರಗಳಡಿ ಅಭಿವೃದ್ಧಿಗೆ ಆದ್ಯತೆ ನೀಡಿದೆ.

**ಪಶ್ಚಿಮ ಬಂಗಾಳ ಕೈಗಾರಿಕಾ ವಲಯದ ಕೇಂದ್ರ**

ಪಶ್ಚಿಮ ಬಂಗಾಳ ಕೇವಲ ಒಂದು ರಾಜ್ಯದ ಹೆಸರಲ್ಲ, ಬದಲಿಗೆ ಇದೊಂದು ಜೀವನ ವಿಧಾನ. ತ್ವರಿತ ಪ್ರಗತಿಗಾಗಿ ನಿರಂತರ ಪ್ರಯತ್ನಗಳು ಸಾಗಿದ್ದು, ಈ ವಲಯಕ್ಕೆ ಮೂಲ ಸೌಕರ್ಯ ಕಲ್ಪಿಸಲು ಪ್ರಯತ್ನಿಸಲಾಗುತ್ತಿದೆ. ಪಶ್ಚಿಮ ಬಂಗಾಳವನ್ನು ಪ್ರಮುಖ ಕೈಗಾರಿಕೆ ಮತ್ತು ತಯಾರಿಕಾ ತಾಣವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದು, ಮತ್ತೆ ತನ್ನ ವೈಭವವನ್ನು ಪಡೆಯಲಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

**ಪೂರ್ವೋತ್ತರ ರಾಜ್ಯಗಳಿಗೆ ಅತಿ ಹೆಚ್ಚು ಬಾರಿ ಭೇಟಿ ನೀಡಿದ ಪ್ರಧಾನಮಂತ್ರಿಗಳಲ್ಲಿ ನರೇಂದ್ರ ಮೋದಿ ಪ್ರಮುಖರಾಗಿದ್ದು, 40ಕ್ಕೂ ಹೆಚ್ಚು ಬಾರಿ ಇಲ್ಲಿಗೆ ಪ್ರವಾಸ ಕೈಗೊಂಡಿದ್ದಾರೆ. ಪ್ರತಿ 15 ದಿನಗಳಿಗೆ ಒಮ್ಮೆ ಸಚಿವರ ಭೇಟಿಯನ್ನು ಸಹ ನಿಗದಿಪಡಿಸಲಾಗಿದೆ.**

**ಇದೇ ಮೊದಲ ಬಾರಿಗೆ ಎಲ್ಲಾ ಸಚಿವಾಲಯಗಳು ಮತ್ತು ಇಲಾಖೆಗಳಿಗೆ ವಾರ್ಷಿಕ ಬಜೆಟ್‌ನ ವೆಚ್ಚದಲ್ಲಿ ಶೇ. 10 ರಷ್ಟು ಹಣವನ್ನು ಈಶಾನ್ಯ ರಾಜ್ಯಗಳಿಗೆ ಮೀಸಲಿಡುವುದನ್ನು ಕಡ್ಡಾಯ ಮಾಡಲಾಗಿದೆ.**

"ಪಶ್ಚಿಮ ಬಂಗಾಳ ಇಂದು ಯೋಚಿಸಿದರೆ ಭಾರತ ನಾಳೆ ಯೋಚಿಸುತ್ತದೆ" ಎಂಬ ಮಾತಿದೆ. ಇದರಿಂದ ಸ್ಫೂರ್ತಿ ಪಡೆದು ನಾವು ಮುನ್ನಡೆಯಬೇಕಿದೆ.

ಅದು ರಾಷ್ಟ್ರೀಯ ಹೆದ್ದಾರಿಯಾಗಿರಬಹುದು, ಜಲ ಮಾರ್ಗಗಳು, ವಾಯು ಮಾರ್ಗಗಳು, ಬಂದರು ಅಥವಾ ಹಳ್ಳಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕವೇ ಇರಬಹುದು. ರಾಜ್ಯದ ಅಭಿವೃದ್ಧಿಗೆ ನಿರಂತರ ಕೆಲಸ ನಡೆಯುತ್ತಿದೆ. ಸ್ಥಳೀಯರನ್ನು ಸಬಲೀಕರಣಗೊಳಿಸುವುದು ಅಭಿವೃದ್ಧಿಗೆ ಅತ್ಯಂತ ಅಗತ್ಯವಾಗಿದೆ. ಇಂತಹ ಸನ್ನಿವೇಶದಲ್ಲಿ ಸರ್ಕಾರದ ಯಾವುದೇ ಯೋಜನೆಗಳಿರಲಿ ಸ್ಥಳೀಯರಿಗೆ ಸುಗಮ ಜೀವನ ನಡೆಸಲು ಅವಕಾಶ ಕಲ್ಪಿಸಬೇಕು. ಬಡವರಿಗೆ 30 ಲಕ್ಷ ಮನೆಗಳ ನಿರ್ಮಾಣ, 90 ಲಕ್ಷ ಮಹಿಳೆಯರಿಗೆ ಉಜ್ವಲಾ ಯೋಜನೆಯಡಿ ಉಚಿತ ಅಡುಗೆ ಅನಿಲ. 4 ಕೋಟಿ ಜನರಿಗೆ ಜನ್ ಧನ್ ಯೋಜನೆಯಡಿ ಬ್ಯಾಂಕ್ ಖಾತೆ, ಜಲಜೀವನ್ ಮಿಷನ್ ನಡಿ 4 ಲಕ್ಷ ಮನೆಗಳಿಗೆ ಕೊಳವೆಗಳ ಮೂಲಕ ಶುದ್ಧ ಕುಡಿಯುವ ನೀರು ಒದಗಿಸುವುದು ಸೇರಿದಂತೆ ಪಶ್ಚಿಮ ಬಂಗಾಳದ ಜನರ ಜೀವನ ಮಟ್ಟ ಸುಧಾರಣೆಗೆ ನಿರಂತರ ಪ್ರಯತ್ನ ನಡೆಯುತ್ತಿದೆ.

ನೇಪಾಳ, ಭಾರತ ಮತ್ತು ಬಾಂಗ್ಲಾದೇಶಗಳ ನಡುವೆ ಆಂತರಿಕ ಸಂಪರ್ಕ ವ್ಯವಸ್ಥೆಯ ಸುಧಾರಣೆಗೂ ಒತ್ತು ನೀಡಲಾಗಿದೆ. ಕೊಲ್ಕತ್ತಾದ ಪೂರ್ವ ಪಶ್ಚಿಮ ಮೆಟ್ರೋ ಕಾರಿಡಾರ್‌ಗೆ 8,500 ಕೋಟಿ ರೂ ನಿಗದಿಮಾಡಲಾಗಿದೆ. ಇದು ದೇಶದ ಮೊದಲ ಒಳ ಜಲಮಾರ್ಗದ ಮೆಟ್ರೋ ರೈಲು ಯೋಜನೆಯಾಗಿದೆ.

ಪೂರ್ವ ಭಾರತದ ಜನರ ಜೀವನ ಮಟ್ಟ ಸುಧಾರಣೆ ಮತ್ತು ವ್ಯಾಪಾರ ವಹಿವಾಟಿಗೆ ಉತ್ತೇಜನ. ರೈಲು, ರಸ್ತೆಗಳು, ವಿಮಾನ ನಿಲ್ದಾಣಗಳು. ಬಂದರುಗಳು, ಜಲಮಾರ್ಗಗಳ ಅಭಿವೃದ್ಧಿ ಜತೆಗೆ ಕೈಗಾರಿಕೆಗಳಿಗೂ ಉತ್ತೇಜನ ನೀಡಲಾಗುತ್ತಿದೆ. ಅನಿಲ ಕೊರತೆಯಿಂದ ಇಲ್ಲಿ ಕೈಗಾರಿಕೆಗಳನ್ನು ಮುಚ್ಚಲು ಕಾರಣವಾಗಿದ್ದು, ಪೂರ್ವ ಭಾರತವನ್ನು ಪೂರ್ವ ಬಂದರುಗಳು ಮತ್ತು ಪಶ್ಚಿಮ ಬಂದರುಗಳೊಂದಿಗೆ ಸಂಪರ್ಕಿಸಲು ಸರ್ಕಾರ ನಿರ್ಧರಿಸಿದೆ. ಪ್ರಧಾನ ಮಂತ್ರಿ ಉರ್ಜಾ ಗಂಗಾ ಯೋಜನೆಯಡಿ ದೊಭಿ–ದುರ್ಗಾಪುರ್ ನಡುವೆ 350 ಕಿಲೋಮೀಟರ್



# ಉಗ್ರವಾದದ ನಿಯಂತ್ರಣ

**2014ರ ನಂತರ ಕೇಂದ್ರ ಸರ್ಕಾರ ಪೂರ್ವ ಮತ್ತು ಪಶ್ಚಿಮ ಭಾರತದ ನಡುವಿನ ಅಭಿವೃದ್ಧಿ ತಾರತಮ್ಯ ನಿವಾರಿಸಲು ಪ್ರಯತ್ನ ಆರಂಭಿಸಿತು. ಈ ಭಾಗದಲ್ಲಿ ಶಾಂತಿ, ಭದ್ರತೆ, ಸಂಪರ್ಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸಲು ಪ್ರಧಾನ ಆದ್ಯತೆ ನೀಡಿತು. ಶಾಂತತೆ ಇಲ್ಲದಿದ್ದರೆ ಅಭಿವೃದ್ಧಿ ಸಾಧ್ಯವಿಲ್ಲ.**

2015ರಲ್ಲಿ ಸರ್ಕಾರ ಮತ್ತು ನಾಗಾಲ್ಯಾಂಡ್ ನ ನ್ಯಾಷನಲ್ ಸೋಸಿಯಲಿಸ್ಟ್ ಕೌನ್ಸಿಲ್ ನ ಇಸ್ಕ-ಮುಯಿವ್ವ ಸಂಘಟನೆ ನಡುವೆ ಶಾಂತಿ ಒಪ್ಪಂದಕ್ಕೆ ಸಹಿಹಾಕಲಾಯಿತು. ಈ ಮೂಲಕ ಈಶಾನ್ಯ ಭಾಗದಲ್ಲಿ ಶಾಂತಿ ಸ್ಥಾಪಿಸಲು ಒತ್ತು ನೀಡಲಾಯಿತು. 80ಕ್ಕೂ ಹೆಚ್ಚು ಸುತ್ತಿನ ಮಾತುಕತೆ ನಂತರ ಒಪ್ಪಂದಕ್ಕೆ ಸಹಿ ಹಾಕಲಾಯಿತು.

**₹ 750 ಕೋಟಿ ಅಡಿ**

**ಬೋಡೋಲ್ಯಾಂಡ್ ಟೆರಿಟೋರಿಯಲ್ ಕೌನ್ಸಿಲ್ [ಬಿಟಿಸಿ] ಪ್ಯಾಕೇಜ್ 65 ಯೋಜನೆಗಳನ್ನು ಒಳಗೊಂಡ 749.64 ಕೋಟಿ ರೂ ಮಂಜೂರು. ಇದರಡಿ 711.19 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.**



**ಬೋಡೋ ಒಪ್ಪಂದ:** 2020ರ ಜನವರಿಯಲ್ಲಿ ಬೋಡೋ ಲ್ಯಾಂಡ್ ಒಪ್ಪಂದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಸ್ಸಾಂನ ವಿವಿಧ ಬಂಡುಕೋರ ಸಂಘಟನೆಗಳೊಂದಿಗೆ ಸಹಿ ಹಾಕಿವೆ.

2020ರ ಜನವರಿಯಲ್ಲಿ ಬೋಡೋ ಒಪ್ಪಂದಕ್ಕೆ ಸಹಿ ಹಾಕಿದ ನಂತರ 2,259 ವಿವಿಧ ಸಂಘಟನೆಗಳ ಕೇಡರ್‌ಗಳು ಶರಣಾಗಿದ್ದಾರೆ.

**₹ 350 ಕೋಟಿ**

**ಕಾರ್ಬಿ ಅಂಗ್ಲಾಂಗ್‌ಗೆ ಸ್ವಾಯತ್ತ ಪ್ರಾದೇಶಿಕ ಮಂಡಳಿ [ಕೆ.ಎ.ಎ.ಟಿ.ಸಿ] ಪ್ಯಾಕೇಜ್ ನಡಿ ನೀಡಲಾಗಿದೆ.**

ಕೆಎಎಟಿಸಿ ಪ್ಯಾಕೇಜ್ ನಡಿ **187.28 ಕೋಟಿ ರೂ.** ಮೊತ್ತದ 20 ಯೋಜನೆಗಳಿಗೆ ಮಂಜೂರಾತಿ ಮತ್ತು ಈ ವರೆಗೆ **95.71 ಕೋಟಿ ರೂ.** ಬಿಡುಗಡೆ

2018ರ ನಂತರ ಮಣಿಪುರದಲ್ಲಿ ಭದ್ರತಾ ಪರಿಸ್ಥಿತಿಯಲ್ಲಿ ಗಣನೀಯ ಸುಧಾರಣೆ ಕಂಡು ಬಂದಿದ್ದು, 2017 ಕ್ಕೆ ಹೋಲಿಸಿದರೆ ಒಳ ನುಸುಳುವಿಕೆ ಪ್ರಕರಣಗಳ ಸಂಖ್ಯೆಯಲ್ಲಿ ಶೇ. 24 ರಷ್ಟು ಕಡಿಮೆಯಾಗಿದೆ.

**ವಿಶೇಷ ಅಭಿವೃದ್ಧಿ ಯೋಜನೆಯಡಿ ದಿಮಾ ಹಸವೊ ಸ್ವಾಯತ್ತ ಬುಡಕಟ್ಟು ಮಂಡಳಿಗೆ [ಡಿಎಚ್‌ಎಟಿಸಿ]ಗೆ 121.39 ಕೋಟಿ ರೂ. ಮೊತ್ತದ 10 ಯೋಜನೆಗಳು ಮಂಜೂರಾಗಿದೆ ಮತ್ತು 73.80 ಕೋಟಿ ರೂ. ಬಿಡುಗಡೆ ಮಾಡಲಾಗಿದೆ.**

# ಸುಗಮ ಜೀವನದ ಬಗ್ಗೆ ಸರ್ಕಾರದ ಗಮನ

**ಉಜ್ವಲ ಯೋಜನೆಯ 8 ಕೋಟಿ ಫಲಾನುಭವಿಗಳ ಪೈಕಿ ಅರ್ಧಕ್ಕೂ ಹೆಚ್ಚು ಪೂರ್ವ ಭಾರತದವರಾಗಿದ್ದಾರೆ. 29 ಕೋಟಿ ಎಲ್‌ಪಿಜಿ ಸಂಪರ್ಕಗಳ ಪೈಕಿ, 11.5 ಕೋಟಿ; ಪ್ರಧಾನಮಂತ್ರಿ ಗ್ರಾಮೀಣ ವಸತಿ ಯೋಜನೆ ಅಡಿ ನಿರ್ಮಿಸಲಾಗಿರುವ 2 ಕೋಟಿ ಮನೆಗಳ ಪೈಕಿ, 1.12 ಕೋಟಿ; ಸ್ವಚ್ಛ ಭಾರತ ಅಭಿಯಾನದ ಅಡಿಯಲ್ಲಿ ನಿರ್ಮಿಸಲಾಗಿರುವ 10 ಕೋಟಿ ಶೌಚಾಲಯಗಳ ಪೈಕಿ 4.5 ಕೋಟಿ; ಮತ್ತು 1 ಕೋಟಿ ವಿದ್ಯುತ್ ಸಂಪರ್ಕಗಳನ್ನು ಈ ವಲಯದಲ್ಲಿ ಒದಗಿಸಲಾಗಿದೆ.**



**₹ 13,199.36**

**ಕೋಟಿ ರೂ. ಗಳನ್ನು ಈಶಾನ್ಯ ರಾಜ್ಯಗಳಿಗಾಗಿ 2014–15 ಮತ್ತು 2020–21ರ ಸಾಲಿನ ನಡುವೆ ಈಶಾನ್ಯ ವಲಯ ಅಭಿವೃದ್ಧಿ ಸಚಿವಾಲಯದಿಂದ ಬಿಡುಗಡೆ ಮಾಡಲಾಗಿದೆ.**

**90 ಲಕ್ಷ ಮಹಿಳೆಯರಿಗೆ ಅಡುಗೆ ಅನಿಲ ಸಂಪರ್ಕ ಪಶ್ಚಿಮ ಬಂಗಾಳದಲ್ಲಿ ಉಜ್ವಲ ಯೋಜನೆಯಡಿ ನೀಡಲಾಗಿದ್ದು, ಇದರಲ್ಲಿ 36 ಲಕ್ಷಕ್ಕೂ ಹೆಚ್ಚು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ.**




**ಪಶ್ಚಿಮ ಬಂಗಾಳದಲ್ಲಿ ಶೇ.99ರಷ್ಟು ಎಲ್‌ಪಿಜಿ ಅನಿಲ ವ್ಯಾಪ್ತಿ. 2014ರಲ್ಲಿ ಇದು ಕೇವಲ ಶೇ.41ರಷ್ಟಿತ್ತು.**

**ಧನ್ ಪುರಸ್ಕಾರ್ ಮೇಳ ಯೋಜನೆ ಅಡಿಯಲ್ಲಿ 5 ಲಕ್ಷ ಚಹಾ ತೋಟದ ಕಾರ್ಮಿಕರ ಬ್ಯಾಂಕ್ ಖಾತೆಗೆ ಕೋಟ್ಯಂತರ ರೂಪಾಯಿ ವರ್ಗಾವಣೆ ಮಾಡಲಾಗಿದೆ.**

- ಹೊಸದಾಗಿ ಹಾಲ್ದಿಯಾದಲ್ಲಿ ಉದ್ಘಾಟಿಸಲಾದ ಎಲ್‌ಪಿಜಿ ಆಮದು ಟರ್ಮಿನಲ್ ಅಧಿಕ ಬೇಡಿಕೆಯನ್ನು ಪೂರೈಸುವಲ್ಲಿ ದೊಡ್ಡ ಪಾತ್ರ ವಹಿಸುತ್ತದೆ ಮತ್ತು ಇಲ್ಲಿಂದ 2 ಕೋಟಿಗೂ ಅಧಿಕ ಜನರು ಅನಿಲ ಪಡೆಯುವ ಕಾರಣ, ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ಜಾರ್ಖಂಡ್, ಛತ್ತೀಸಗಢ, ಉತ್ತರ ಪ್ರದೇಶ ಮತ್ತು ಈಶಾನ್ಯದ ಕೋಟ್ಯಂತರ ಕುಟುಂಬಗಳಿಗೆ ಸೇವೆ ಒದಗಿಸಲಿದೆ.
- ಉಜಾಲ ಯೋಜನೆ ಅಡಿಯಲ್ಲಿ 92.29 ಲಕ್ಷ ಎಲ್.ಇ.ಡಿ. ಬಲ್ಬ್‌ಗಳನ್ನು ಪಶ್ಚಿಮ ಬಂಗಾಳದಲ್ಲಿ; 4.33 ಲಕ್ಷ ಮೇಘಾಲಯದಲ್ಲಿ; 71.76 ಲಕ್ಷ ಅಸ್ಸಾಂನಲ್ಲಿ; 4.99 ಲಕ್ಷ ಅರುಣಾಚಲ ಪ್ರದೇಶದಲ್ಲಿ; 10.99 ಲಕ್ಷ ನಾಗಾಲ್ಯಾಂಡ್‌ನಲ್ಲಿ; 2.99 ಮಣಿಪುರದಲ್ಲಿ; 10.54 ಲಕ್ಷ ತ್ರಿಪುರಾದಲ್ಲಿ ಮತ್ತು 6.15 ಲಕ್ಷ ಮಿಜೋರಾಂನಲ್ಲಿ ವಿತರಿಸಲಾಗಿದೆ. ಶೇ.100ರಷ್ಟು ವಿದ್ಯುದ್ದೀಕರಣವನ್ನು ಒಡಿಶಾದಲ್ಲಿ ಸಾಧಿಸಲಾಗಿದೆ.
- ಜಲ ಜೀವನ ಅಭಿಯಾನದ ಅಡಿಯಲ್ಲಿ ಪ್ರತಿಯೊಂದು ಕುಟುಂಬಕ್ಕೂ ಕೊಳವೆ ನೀರು ಸಂಪರ್ಕ ಒದಗಿಸಲಾಗಿದೆ. ಸಿಕ್ಕಿಂನ ವ್ಯಾಪ್ತಿ ಶೇ.73.16ಕ್ಕೆ ಹೆಚ್ಚಳವಾಗಿದ್ದರೆ, ಮಣಿಪುರದಲ್ಲಿ ಈ ವ್ಯಾಪ್ತಿ ಶೇ.42.01 ಆಗಿದೆ.
- 41.84 ಕೋಟಿ ಜನ್‌ಧನ್ ಖಾತೆಗಳ ಪೈಕಿ 16.22 ಕೋಟಿ ಈ ವಲಯದಲ್ಲಿದೆ.

ಉದ್ದದ ಕೊಳವೆ ಮಾರ್ಗವನ್ನು 2021ರ ಫೆಬ್ರವರಿಯಲ್ಲಿ ಲೋಕಾರ್ಪಣೆ ಮಾಡಲಾಗಿದೆ. ರಾಜ್ಯಕ್ಕೆ ಕೊಳವೆಯ ಮೂಲಕ ಅನಿಲ ಒದಗಿಸುವುದರ ಜೊತೆಗೆ, ಈ ಯೋಜನೆ 11 ಲಕ್ಷ ಮಾನವ ದಿನಗಳ ಉದ್ಯೋಗವನ್ನು ಸ್ಥಳೀಯರಿಗೆ ನೀಡಿದೆ. ಈ ಕೊಳವೆ ಅನಿಲ ಮಾರ್ಗ ಕೇವಲ ಕೈಗಾರಿಕೆಗಳಿಗೆ ಮಾತ್ರವಲ್ಲ, ಕೋಟ್ಯಂತರ ಮನೆಗಳಿಗೂ ಕೊಳವೆಯ ಅನಿಲ ಖಾತ್ರಿ ಪಡಿಸುತ್ತದೆ ಮತ್ತು ಮಾಲಿನ್ಯ ತಡೆಯಲು ಹಾಗು ಅವರ ಜೇಬಿಗೆ ನಿರಾಳ ನೀಡಲು ವಾಹನಗಳಿಗೆ ಸಿ.ಎನ್.ಜಿ. ಒದಗಿಸಲಿದೆ. ಇದು ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್‌ನ ದುರ್ಗಾಪುರ ಮತ್ತು ಸಿಂದ್ರಿ ರಸಗೊಬ್ಬರ ಕಾರ್ಖಾನೆಗಳಿಗೆ ನಿರಂತರ ಅನಿಲ ಪೂರೈಕೆಗೂ ಅನುವು ಮಾಡಿಕೊಡಲಿದೆ. ಉಜ್ವಲ ಯೋಜನೆಯನ್ನು ಪೂರ್ವ ಭಾರತದಲ್ಲಿ ಆರಂಭಿಸಿದ ತರುವಾಯ ಎಲ್‌ಪಿಜಿಯ ಬೇಡಿಕೆ ಮತ್ತು ಬಳಕೆ ಎರಡೂ ಗಣನೀಯವಾಗಿ ಹೆಚ್ಚಳವಾಗಿದೆ. ಹಾಲ್ದಿಯಾದ ಎಲ್.ಪಿ.ಜಿ. ಆಮದು ಟರ್ಮಿನಲ್ ಹೆಚ್ಚುತ್ತಿರುವ ಈ ಬೇಡಿಕೆಯನ್ನು ಪೂರೈಸಲು ಮಹತ್ವದ ಪಾತ್ರ ನಿರ್ವಹಿಸಲಿದೆ. ಇದು ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ಜಾರ್ಖಂಡ್, ಛತ್ತೀಸಗಢ, ಉತ್ತರಪ್ರದೇಶ ಮತ್ತು ಈಶಾನ್ಯದ ಕೋಟ್ಯಂತರ ಕುಟುಂಬಗಳಿಗೆ ನೆರವಾಗಲಿದೆ. ಈ ವರ್ಷದ ಬಜೆಟ್‌ನಲ್ಲಿ 25,000 ಕೋಟಿ ರೂ.ಗಳನ್ನು ಪಶ್ಚಿಮ ಬಂಗಾಳದ ಆರ್ಥಿಕ ಕಾರಿಡಾರ್ ಅಭಿವೃದ್ಧಿಗಾಗಿ ಹಂಚಿಕೆ ಮಾಡಲಾಗಿದೆ.

> **ಬಂಗಾಳ ಸದಾ ಕಾಲಕ್ಕಿಂತ ಮುಂದಿರುತ್ತಿತ್ತು. ಅದು ಕಳೆದ ಕೆಲವು ದಶಕಗಳಲ್ಲಿ ತನ್ನ ವೇಗವನ್ನು ಹೆಚ್ಚಿಸಿಕೊಂಡಿದ್ದರೆ, ಇಂದು ಬಂಗಾಳ ಎಲ್ಲಿರುತ್ತಿತ್ತು ಎಂದು ಊಹಿಸಿಕೊಳ್ಳಿ.**
>
> **-ಪ್ರಧಾನಮಂತ್ರಿ ನರೇಂದ್ರ ಮೋದಿ.**

## ನವ ಪೂರ್ವ ಭಾರತದ ಉದಯಕ್ಕೆ ನೀತಿ ಬದಲಾವಣೆಯ ಶಕ್ತಿ

ಪೂರ್ವ ಭಾರತದ ಪರಿವರ್ತನೆಯ ಮಾರ್ಗಸೂಚಿಯು ವಲಯದ ಅಭಿವೃದ್ಧಿಗಾಗಿ ಉನ್ನತ ಆದ್ಯತೆ ನೀಡುವ ನಾಲ್ಕು ಮೂಲ ಆಧಾರ ಸ್ತಂಭಗಳ ಮೇಲೆ ನಿಂತಿದೆ; ಮೂಲಸೌಕರ್ಯ ಹಾಗು ಸಂಪರ್ಕ ಯೋಜನೆಗಳ ವಿಸ್ತರಣೆ ಮತ್ತು ಚುರುಕುಗೊಳಿಸುವುದು; ಜನರಿಗೆ ಜೀವನೋಪಾಯ ಕಲ್ಪಿಸುವ ಯೋಜನೆ ಆರಂಭಿಸುವುದು; ಮತ್ತು ವಲಯದ ಸರ್ವಾಂಗೀಣ ಅಭಿವೃದ್ಧಿಗಾಗಿ ನೂತನ ಕ್ರಮಗಳನ್ನು ಕೈಗೊಳ್ಳುವುದು.

ಯಾವುದೇ ದೃಷ್ಟಿಕೋನವನ್ನು ಸಾಕಾರಗೊಳಿಸಲು, ಬಲವಾದ ಕಾರ್ಯವಿಧಾನದ ಅಗತ್ಯವಿದೆ. ಇದಕ್ಕೆ ನಿರಂತರ ಮೇಲ್ವಿಚಾರಣೆಯ ಅಗತ್ಯವೂ ಇರುತ್ತದೆ. ಪ್ರತಿ ಹದಿನೈದು ದಿನಗಳಿಗೆ ಒಮ್ಮೆ ಸಂಪುಟ ಸಚಿವರು ವಲಯಕ್ಕೆ ಭೇಟಿ ನೀಡಿ ಅಭಿವೃದ್ಧಿ ಯೋಜನೆಗಳ ಪರಿಶೀಲನೆ ನಡೆಸುತ್ತಿದ್ದಾರೆ. ಇದು



# ಶಿಕ್ಷಣ ಮತ್ತು ಕ್ರೀಡೆ

**2020 ಡಿಸೆಂಬರ್**

ಗುವಾಹಟಿಯಲ್ಲಿ ಹೊಸ ವೈದ್ಯಕೀಯ ಕಾಲೇಜಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. 2016ರವರೆಗೆ ಇದ್ದದ್ದು ಆರು ವೈದ್ಯಕೀಯ ಕಾಲೇಜುಗಳು. ಕಳೆದ ಐದು ವರ್ಷಗಳಲ್ಲಿ ಮತ್ತೆ ಆರು ವೈದ್ಯಕೀಯ ಕಾಲೇಜು ನಿರ್ಮಿಸಲಾಗಿದೆ.

ಗುವಾಹಟಿಯ ಏಮ್ಸ್ ಕಾಮಗಾರಿ ಭರದಿಂದ ನಡೆಯುತ್ತಿದೆ. ಪ್ರಥಮ ತಂಡದ ತರಗತಿಗಳು ಈಗಾಗಲೇ ಆರಂಭವಾಗಿದೆ. ಹೊಸ ಏಮ್ಸ್ ಅನ್ನು ಛಂಗ್ಸಾರಿಯಲ್ಲಿ ನಿರ್ಮಿಸಲಾಗುತ್ತಿದೆ. ಎರಡು ಹೊಸ ಎಂಜಿನಿಯರಿಂಗ್ ಕಾಲೇಜುಗಳು ಮತ್ತು 16 ಹೊಸ ಪಾಲಿಟೆಕ್ನಿಕ್‌ಗಳು ಆರಂಭಗೊಂಡಿವೆ.

ಗುವಾಹಟಿಯಲ್ಲಿನ ಹೊಸ ಸಾಯ್ ತರಬೇತಿ ಕೇಂದ್ರಕ್ಕೆ ಸ್ಥಳೀಯ ಕ್ರೀಡಾ ತಾರೆಗಳ ಹೆಸರಿಡಲಾಗುವುದು.




**6 ರಿಂದ 10ನೇ ತರಗತಿಗಳಿಗೆ ಮೊಬೈಲ್ ಆಪ್**

ವಿಶ್ವ ವಿದ್ಯಾ ಅಸ್ಸಾಂ ಮೊಬೈಲ್ ಆಪ್ ಅನ್ನು ಅಸ್ಸಾಂ ಬಿಡುಗಡೆ ಮಾಡಿದೆ. ಸಿಕ್ಕಿಂನ ಎಡ್ಯುಟೆಕ್ ಆಪ್ ಸಿಕ್ಕಿಂನ ಎಲ್ಲ ಶಾಲೆಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ.

- ಮಣಿಪುರ ಆತ್ಮರಕ್ಷಣೆ ಕಲೆ, ಥಾಂಗ್-ಟ ಗೆ ರಾಷ್ಟ್ರೀಯ ಮಾನ್ಯತೆ ಒದಗಿಸಲು, ಅದನ್ನು ಖೇಲೋ ಇಂಡಿಯಾ ಯುವ ಕ್ರೀಡಾಕೂಟ 2021ರಲ್ಲಿ ಸೇರ್ಪಡೆ ಮಾಡಲಾಗಿದೆ.
- 2021-22ರ ಸಾಲಿನ ಬಜೆಟ್‌ನಲ್ಲಿ ಪರಿಶಿಷ್ಟ ಪಂಗಡ ಪ್ರವರ್ಗದ ಮಕ್ಕಳಿಗಾಗಿ 304 ಏಕಲವ್ಯ ವಿದ್ಯಾಲಯಗಳನ್ನು ಈಶಾನ್ಯ ಭಾರತದಲ್ಲಿ ಪ್ರಸ್ತಾಪಿಸಲಾಗಿದೆ.
- ಶಿಕ್ಷಣ ಸಚಿವಾಲಯವು ಈಶಾನ್ಯ ವಲಯದಲ್ಲಿ ಸಾರ್ವಜನಿಕ ಖಾಸಗಿ ಪಾಲುದಾರಿಕೆ (ಪಿಪಿಪಿ) ಮಾದರಿಯಲ್ಲಿ ಮೂರು ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ)ಗಳನ್ನು ಸ್ಥಾಪಿಸಿದೆ.

## ‘ಭರೋಸ’ ಸಹಾಯವಾಣಿ

ಒಡಿಶಾದ ಎಲ್ಲಾ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಅರಿವಿನ ಭಾವನಾತ್ಮಕ ಪುನರ್ವಸತಿ ಸೇವೆಗಳನ್ನು ಒದಗಿಸಲು ಆರಂಭಿಸಲಾಗಿದೆ.

ಇಂಟರ್ನೆಟ್ ಸಂಪರ್ಕ ಸುಧಾರಣೆಗೆ ವಿಶೇಷ ಯೋಜನೆ ಕೈಗೊಳ್ಳಲಾಗಿದೆ. 2,004 ಮೊಬೈಲ್ ಗೋಪುರಗಳು 2,128 ಗ್ರಾಮಗಳಿಗೆ ಮೊಬೈಲ್ ಸೇವೆ ಒದಗಿಸುತ್ತಿವೆ. ಈಶಾನ್ಯದ 6000ಕ್ಕೂ ಹೆಚ್ಚು ಗ್ರಾಮಗಳಿಗೆ ಇಂಟರ್ನೆಟ್ ಸಂಪರ್ಕ ಕಲ್ಪಿಸಲಾಗಿದೆ.



ಸಕಾಲಿಕ ಪೂರೈಕೆ ಖಾತ್ರಿಪಡಿಸುತ್ತಿದೆ. ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿ, ಈಶಾನ್ಯದ ಯಾವುದೇ ಯೋಜನೆಗಳಲ್ಲಿ ಯಾವುದೇ ವಿಳಂಬ ಅಥವಾ ಸ್ಥಗಿತವಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು, ಜಂಟಿ ಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ಮುಖ್ಯ ನೋಡಲ್ ಅಧಿಕಾರಿ ಮತ್ತು ನಿರ್ದೇಶಕ ಮಟ್ಟದ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗುತ್ತಿದೆ. ಮಹತ್ವಾಕಾಂಕ್ಷೆಯ ಜಿಲ್ಲೆಗಳ ಮೇಲೆ ವಿಶೇಷ ಗಮನಹರಿಸಿ ಅಧಿಕಾರಿಗಳು ಆಗಾಗ್ಗೆ ಸ್ಥಳಕ್ಕೆ ಭೇಟಿ ನೀಡುವ ಮೂಲಕ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸುತ್ತಾರೆ.

ಈಶಾನ್ಯ ವಲಯ ಅಭಿವೃದ್ಧಿ ಸಚಿವಾಲಯ (ಡಿಓಎನ್‌ಇಆರ್) ಮಾತ್ರವೇ ಭೌಗೋಳಿಕ ವ್ಯಾಪ್ತಿಯನ್ನು ಒಳಗೊಂಡ ಪ್ರಾದೇಶಿಕ ಆಧಾರಿತ ಏಕೈಕ ಸಚಿವಾಲಯವಾಗಿದೆ. ಇದು ಈಶಾನ್ಯ ಭಾರತದ ಅಗತ್ಯಗಳತ್ತ ಗಮನ ಹರಿಸುತ್ತದೆ. ಇದಕ್ಕೆ ಹಂಚಿಕೆಯಾದ ನಿಧಿ ನಷ್ಟ ಆಗುವುದಿಲ್ಲ. ಇದು ತ್ವರಿತ ಮೂಲಸೌಕರ್ಯ ಖಾತ್ರಿಪಡಿಸುವುದರ ಜೊತೆಗೆ, ವಲಯದ ಹೊಸ ಮೂಲಸೌಕರ್ಯ ಯೋಜನೆಗಳಿಗೆ ಬಜೆಟ್‌ನಲ್ಲಿ ಹಣದ ಹರಿವು ಹೆಚ್ಚಿಸುತ್ತದೆ. ಜೊತೆಗೆ, ಡಿಓಎನ್.ಇ.ಆರ್.ನ ಬಜೆಟ್ ಹಂಚಿಕೆ, 2014ರಿಂದ ನಿರಂತರವಾಗಿ ಹೆಚ್ಚಳವಾಗಿದೆ. 2019-20ರಲ್ಲಿ ಡಿಓಎನ್‌ಇಆರ್ ಸಚಿವಾಲಯ ಪ್ರತಿಶತ 100ರಷ್ಟು ದಾಖಲೆಯ ವೆಚ್ಚ ಮಾಡಿತ್ತು.

ಸರ್ಕಾರ ಈಶಾನ್ಯದ ಜನರಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸಲು ಕ್ರಮ ಕೈಗೊಂಡಿದೆ. ಈಶಾನ್ಯ ಭಾರತದ ವಿದ್ಯಾರ್ಥಿಗಳಿಗೆ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ 27.50 ಕೋಟಿ ರೂ. ವೆಚ್ಚದಲ್ಲಿ ಹಾಸ್ಟೆಲ್ ನಿರ್ಮಿಸಲಾಗಿದೆ. ಜೊತೆಗೆ 116 ಕೋಟಿ ರೂ. ವೆಚ್ಚದಲ್ಲಿ ಈಶಾನ್ಯ ಸಮಾವೇಶ ಕೇಂದ್ರವನ್ನು ದೆಹಲಿಯ ದ್ವಾರಕಾದಲ್ಲಿ ನಿರ್ಮಿಸಲಾಗುತ್ತಿದೆ.



## ಕೃಷಿ ಮತ್ತು ಅರಣ್ಯ

ಈಶಾನ್ಯ ವಲಯದಲ್ಲಿ ಕೃಷಿ ಚಟುವಟಿಕೆಗಳಿಗೆ ಬೆಂಬಲ ನೀಡುವ ಸಲುವಾಗಿ, ಸರ್ಕಾರ ಹಲವು ಉಪಕ್ರಮಗಳನ್ನು ಆರಂಭಿಸಿದೆ.

### ಈಶಾನ್ಯದಲ್ಲಿ ಕೇಸರಿ

ಕೇಸರಿಯ ಕಣಜವನ್ನು ಈಶಾನ್ಯ ಭಾರತಕ್ಕೂ ವಿಸ್ತರಿಸಲಾಗಿದೆ



ಕೃಷಿ ಉಡಾನ್ ಯೋಜನೆ ಕಾರ್ಯಾಚರಣೆಗೊಂಡಿದ್ದು, ಕೃಷಿ ಉತ್ಪನ್ನಗಳು ಅಂದರೆ ಪೈನಾಪಲ್, ಶುಂಠಿ, ಕಿವಿ, ಸಾವಯವ ಉತ್ಪನ್ನಗಳನ್ನು ಬಗ್ಡೋಗ್ರಾ, ಗುವಾಹಟಿ ಮತ್ತು ಅಗರ್ತಲಾ ವಿಮಾನ ನಿಲ್ದಾಣಗಳಿಂದ ಸಾಗಣೆ ಮಾಡುತ್ತಿದೆ.

### ಪ್ರಥಮ ಪೂರ್ಣ ಸಾವಯವ ರಾಜ್ಯ



ಸಿಕ್ಕಿಂನ ಸುಮಾರು 75,000 ಹೆಕ್ಟೇರ್ ಕೃಷಿ ಭೂಮಿಯನ್ನು ಸುಸ್ಥಿರ ಬೇಸಾಯಕ್ಕೆ ಪರಿವರ್ತಿಸುವುದರೊಂದಿಗೆ ಸಿಕ್ಕಿಂ ಭಾರತದ ಪ್ರಥಮ ಸಂಪೂರ್ಣ ಸಾವಯವ ಕೃಷಿ ರಾಜ್ಯವಾಗಿದೆ.



**₹1000 ಕೋಟಿ ನಿಗದಿ**

ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಚಹಾ ಕಾರ್ಮಿಕರ ಅದರಲ್ಲೂ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ 2021-22ರ ಬಜೆಟ್‌ನಲ್ಲಿ ಹಂಚಿಕೆ ಮಾಡಲಾಗಿದೆ.

- ಅರುಣಾಚಲ ಪ್ರದೇಶದ ಜೈರೋ ಕಣಿವೆಯಲ್ಲಿ ಬೆಳೆಯುವ ಕಿವಿ ಹಣ್ಣಿಗೆ ಈಶಾನ್ಯಕ್ಕಾಗಿ ಇರುವ ಸಾವಯವ ಮೌಲ್ಯ ಸರಪಳಿ ಅಭಿವೃದ್ಧಿ ಅಭಿಯಾನ, 2020ರ ಅಕ್ಟೋಬರ್‌ನಲ್ಲಿ ಸಾವಯವ ಪ್ರಮಾಣ ಪತ್ರ ನೀಡಿದೆ.
- ಸುಮಾರು ಶೇ. 35ರಷ್ಟು ಬಿದಿರು ಬೇಸಾಯ ಈಶಾನ್ಯ ರಾಜ್ಯಗಳಲ್ಲಿದೆ. ಸರ್ಕಾರ, ಭಾರತೀಯ ಅರಣ್ಯ ಕಾಯಿದೆ 1927ರಲ್ಲಿ ಬಿದಿರನ್ನು ಮರದ ಬದಲಿಗೆ ಹುಲ್ಲು ಎಂದು ವರ್ಗೀಕರಿಸಲಾಗಿದೆ.
- ರಾಷ್ಟ್ರೀಯ ಬಿದಿರು ಅಭಿಯಾನದ ಅಡಿಯಲ್ಲಿ ಸರ್ಕಾರ 2020ರ ಸೆಪ್ಟೆಂಬರ್‌ನಲ್ಲಿ 9 ರಾಜ್ಯಗಳಲ್ಲಿ 22 ಬಿದಿರು ಕ್ಲಸ್ಟರ್ ಆರಂಭಿಸಿದೆ.

## ಕಲೆ, ಸಂಸ್ಕೃತಿ, ಆಹಾರ ಮತ್ತು ಪ್ರವಾಸೋದ್ಯಮ




**ಅಪ್ರತಿಮ ಪ್ರವಾಸಿ ತಾಣಗಳ ಅಭಿವೃದ್ಧಿ ಯೋಜನೆಯಡಿ ಅಭಿವೃದ್ಧಿಗಾಗಿ ದೇಶದ 17 ತಾಣಗಳ ಪೈಕಿ ಕಾಜಿರಂಗವನ್ನೂ ಗುರುತಿಸಲಾಗಿದೆ.**

ಈಶಾನ್ಯ ವಲಯದಲ್ಲಿ ವೇಗವರ್ಧಿತ, ಸಮಗ್ರ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆಯ ಹಾದಿಯಲ್ಲಿ ವಿವಿಧ ನಿರ್ಬಂಧಗಳನ್ನು ಗುರುತಿಸಲು, ಈಶಾನ್ಯಕ್ಕಾಗಿ ನೀತಿ ವೇದಿಕೆಯನ್ನು ಫೆಬ್ರವರಿ 2018ರಲ್ಲಿ ರಚಿಸಲಾಗಿದೆ. ಇದು ನೀತಿ ಆಯೋಗದ ಭಾರತದ ಮೊದಲ ಪ್ರಾದೇಶಿಕ ವೇದಿಕೆಯಾಗಿದೆ. ನೀತಿ ಆಯೋಗದ ಉಪಾಧ್ಯಕ್ಷರು ಮತ್ತು ಡಿಓಎನ್ಇಆರ್ ಸಚಿವರು ಈ ವೇದಿಕೆಯ ಸಹ ಅಧ್ಯಕ್ಷತೆ ವಹಿಸುತ್ತಾರೆ. ಈಶಾನ್ಯ ಮಂಡಳಿ (ಎನ್.ಇ.ಸಿ) ವೇದಿಕೆಯ ಸಚಿವಾಲಯವಾಗಿ ಕಾರ್ಯನಿರ್ವಹಿಸುತ್ತದೆ. ಇದು ಎಲ್ಲಾ ಈಶಾನ್ಯ ರಾಜ್ಯಗಳು ಮತ್ತು ಸಂಬಂಧಪಟ್ಟ ಕೇಂದ್ರ ಸಚಿವಾಲಯಗಳು / ಇಲಾಖೆಗಳಿಂದ ಪ್ರಾತಿನಿಧ್ಯವನ್ನು ಹೊಂದಿದೆ. ಐಐಟಿ ಗುವಾಹಟಿ, ಐಐಎಂ ಶಿಲ್ಲಾಂಗ್, ಎನ್.ಇ.ಆರ್.ಐ.ಎಸ್.ಟಿ, ಆರ್.ಐ.ಎಸ್ ಮತ್ತು ಆರ್.ಎಫ್.ಆರ್.ಐ.ನಂತಹ ಪ್ರಖ್ಯಾತ ತಜ್ಞರು ಮತ್ತು ಈಶಾನ್ಯದ ಪ್ರತಿಷ್ಠಿತ ಸಂಸ್ಥೆಗಳ ಪ್ರತಿನಿಧಿಗಳು ಇದರ ಸದಸ್ಯರಾಗಿದ್ದಾರೆ.

### ಪ್ರಗತಿಯ ಚಾಲಕ ಶಕ್ತಿಯಾಗಿ ಪರಿವರ್ತನೆಯಾದ ಈಶಾನ್ಯ

ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ ಮತ್ತು ತ್ರಿಪುರಾ ಭಾರತದ ಈಶಾನ್ಯ ರಾಜ್ಯಗಳಷ್ಟೇ ಆಗಿಲ್ಲ, ಆದರೆ ಅವು ದೇಶದ ಪ್ರಗತಿಯ ಚಾಲಕ ಶಕ್ತಿಯಾಗಿವೆ. ಪಶ್ಚಿಮ ಬಂಗಾಳದೊಂದಿಗೆ ಸೇರಿಕೊಂಡಿರುವ ಈ ರಾಜ್ಯಗಳು ದೇಶದ ಇತರ ಭಾಗಗಳೊಂದಿಗೆ ಸಮನಾಗಿ ಬೆಳವಣಿಗೆಯತ್ತ ಸಾಗುತ್ತಿವೆ. ಆಗ್ನೇಯ ಏಷ್ಯಾ ಮತ್ತು ಅದರ ಮಾರುಕಟ್ಟೆಗಳಿಗೆ ಭಾರತದ ಹೆಬ್ಬಾಗಿಲಾಗಿರುವುದರಿಂದ ಎಂಟು ರಾಜ್ಯಗಳಿಗೆ ವಿಶೇಷ ಪ್ರಾಮುಖ್ಯ ಇದೆ. ಅವು ಬಾಂಗ್ಲಾದೇಶ, ಭೂತಾನ್, ಮ್ಯಾನ್ಮಾರ್, ನೇಪಾಳ ಮತ್ತು ಚೀನಾದೊಂದಿಗೆ ಅಂತಾರಾಷ್ಟ್ರೀಯ ಗಡಿಗಳನ್ನು ಹೊಂದಿವೆ.

2014ರ ನಂತರ, 'ಪೂರ್ವದತ್ತ ಕ್ರಮ' ನೀತಿ ಆಗ್ನೇಯ ಏಷ್ಯಾ ದೇಶಗಳೊಂದಿಗೆ ಭಾರತದ ನಂಟಿನ ಹೆಚ್ಚಳಕ್ಕೆ ನೆರವಾಗಿದೆ. ವಲಯದ ಈ ತ್ವರಿತ ವೇಗದ ಅಭಿವೃದ್ಧಿ ಭಾರತದ ವಾಣಿಜ್ಯವನ್ನು 2014 ರಿಂದ ದ್ವಿಗುಣಗೊಳಿಸಿದೆ.




> **“ಒಂದು ಕಾಲದಲ್ಲಿ ನೇತಾಜಿ ಅವರು ಭಾರತದ ಸ್ವಾತಂತ್ರ್ಯದ ಹೆಬ್ಬಾಗಿಲು ಎಂದು ಬಣ್ಣಿಸಿದ್ದ ಈಶಾನ್ಯವನ್ನು ನವ ಭಾರತದ ಅಭಿವೃದ್ಧಿ ಗಾಥೆಯ ಹೆಬ್ಬಾಗಿಲಾಗಿ ಮಾಡುವತ್ತ ನಾವು ಈಗ ಶ್ರಮಿಸುತ್ತಿದ್ದೇವೆ.”**
> **– ಪ್ರಧಾನ ಮಂತ್ರಿ ನರೇಂದ್ರ ಮೋದಿ**

ಉತ್ತಮ ಮೂಲಸೌಕರ್ಯಗಳ ಫಲವಾಗಿ, ಅಸ್ಸಾಂ ಈಗ ಆತ್ಮನಿರ್ಭರ ಭಾರತದ ಪ್ರಮುಖ ಚಾಲಕ ಶಕ್ತಿಯಾಗಿ ಅಭಿವೃದ್ಧಿ ಹೊಂದುತ್ತಿದೆ. ಕೆಲವು ವರ್ಷಗಳಲ್ಲಿ, ಅಸ್ಸಾಂನ ಹಳ್ಳಿಗಳಲ್ಲಿ ಸುಮಾರು 11,000 ಕಿ.ಮೀ ರಸ್ತೆಗಳನ್ನು ನಿರ್ಮಿಸಲಾಗಿದೆ. ಅದು ಭೂಪೇನ್ ಹಜಾರಿಕಾ ಸೇತುವೆ ಆಗಿರಬಹುದು, ಬೋಗಿಬೀಲ್ ಸೇತುವೆಯೇ ಆಗಿರಬಹುದು ಅಥವಾ ಸಾರೈಘಾಟ್ ಸೇತುವೆ ಆಗಿರಬಹುದು, ಅವೆಲ್ಲವೂ ರಾಜ್ಯದಲ್ಲಿ ಸಂಪರ್ಕವನ್ನು ಹೆಚ್ಚಿಸಲು ಸಹಾಯ ಮಾಡುತ್ತಿವೆ. ಇದು ಸ್ಥಳೀಯರ ಪ್ರಯಾಣದ ತೊಡಕನ್ನು ನಿವಾರಿಸಿದೆ ಮತ್ತು ಕೈಗಾರಿಕೆಗಳಿಗೆ ಚೈತನ್ಯ ನೀಡಿದೆ. ಈಶಾನ್ಯ ರಾಜ್ಯಗಳು ಸಾವಯವ ಕೃಷಿಯ ಕೇಂದ್ರವಾಗಿ ಅಭಿವೃದ್ಧಿ ಹೊಂದುತ್ತಿವೆ ಮತ್ತು ಪ್ರವಾಸೋದ್ಯಮವು ಅದರ ಸಂಸ್ಕೃತಿಗೆ ಹೊಸ ಗುರುತು ಮೂಡಿಸಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳುತ್ತಾರೆ: "ಅರಣ್ಯೋತ್ಪನ್ನಗಳ ಅಪಾರ ಸಂಪತ್ತನ್ನು ಸಂಗ್ರಹಿಸುವ ಬುಡಕಟ್ಟು ಜನರಿಗೆ ಹತ್ತಿರದಲ್ಲಿ ಆಧುನಿಕ ಸಂಸ್ಕರಣಾ ಘಟಕಗಳು ಲಭ್ಯವಾಗುವಂತೆ ಮಾಡಲಾಗುತ್ತಿದೆ. ಇದಲ್ಲದೆ, ಬಿದಿರು ಮತ್ತು ಸಾವಯವ ಉತ್ಪನ್ನಗಳಿಗೆ ಕ್ಲಸ್ಟರ್‌ಗಳನ್ನು ಸಹ ರೂಪಿಸಲಾಗುತ್ತದೆ. ಇಡೀ ಈಶಾನ್ಯವು ಸಾವಯವ ಕೃಷಿಯ ಪ್ರಮುಖ ಕೇಂದ್ರವಾಗಬಹುದು." ದಶಕಗಳಿಂದ ಹಿಂದುಳಿದಿದ್ದ ವಲಯ ಈಗ 'ಪೂರ್ವೋದಯ'ದೊಂದಿಗೆ ಅಭಿವೃದ್ಧಿಯತ್ತ ಸಾಗುತ್ತಿದೆ. ರಾಜ್ಯಗಳೊಂದಿಗೆ ಸಹಯೋಗದ ಸರ್ಕಾರದ ಪ್ರಯತ್ನಗಳು ಈ ಪ್ರದೇಶಕ್ಕೆ ಸ್ವಾವಲಂಬನೆ ಸಾಧಿಸಲು ನೆರವಾಗುತ್ತಿವೆ. ಗತ ವೈಭವವನ್ನು ಇಲ್ಲಿ ಮರುಸ್ಥಾಪಿಸುವುದು ನವ ಭಾರತಕ್ಕೂ ಚೈತನ್ಯ ನೀಡಲಿದೆ.

ಹಾಲ್ದಿಯಾದಲ್ಲಿ ಪ್ರಧಾನಮಂತ್ರಿಯವರು ಮಾಡಿದ ಪೂರ್ಣ ಭಾಷಣವನ್ನು ಆಲಿಸಲು ಕ್ಯೂಆರ್.ಕೋಡ್ ಸ್ಕ್ಯಾನ್ ಮಾಡಿ

## ಸಂಪುಟ ನಿರ್ಣಯಗಳು

# ಆತ್ಮನಿರ್ಭರ ಭಾರತದತ್ತ ಹೆಜ್ಜೆ

**ಬಿವಿಎಫ್‌ಸಿಎಲ್‌ಗೆ ಸರ್ಕಾರದ ನೆರವು ಈಶಾನ್ಯ ವಲಯದ ಅಭಿವೃದ್ಧಿಗೆ ಮತ್ತು ಪ್ರಗತಿಗೆ ಮತ್ತಷ್ಟು ಚೈತನ್ಯ ನೀಡುತ್ತದೆ.**



**ನಿರ್ಣಯ:** ಆರ್ಥಿಕ ವ್ಯವಹಾರಗಳ ಕುರಿತ ಸಂಪುಟ ಸಮಿತಿ, ಅಸ್ಸಾಂನ ನಾಮರೂಪ್‌ನ ಬ್ರಹ್ಮಪುತ್ರ ಕಣಿವೆ ರಸಗೊಬ್ಬರ ನಿಗಮ ನಿಯಮಿತ (ಬಿವಿಎಫ್‌ಸಿಎಲ್), ತನ್ನ ಯೂರಿಯಾ ಉತ್ಪಾದನಾ ಘಟಕಗಳ ಕಾರ್ಯಾಚರಣೆಯನ್ನು ಉಳಿಸಿಕೊಳ್ಳಲು 100 ಕೋಟಿ ರೂ.ಗಳ ಅನುದಾನವನ್ನು ನೀಡುವ ರಸಗೊಬ್ಬರ ಇಲಾಖೆಯ ಪ್ರಸ್ತಾವನೆಯನ್ನು ಅನುಮೋದಿಸಿದೆ.

**ಪ್ರಯೋಜನಗಳು:**

- ಘಟಕದ ಸುಗಮ ಕಾರ್ಯಾಚರಣೆಗಾಗಿ ಯಾಂತ್ರಿಕ, ವಿದ್ಯುತ್, ಸಲಕರಣೆಗಳು ಮತ್ತು ವೇಗವರ್ಧಕ ವಸ್ತುಗಳನ್ನು ಖರೀದಿಸುವುದರೊಂದಿಗೆ ಕನಿಷ್ಠ ಕಾರ್ಯಾಚರಣೆಯ ದುರಸ್ತಿ ಕೈಗೊಳ್ಳಬೇಕಾಗಿದೆ. ಇದಕ್ಕೆ ಅಂದಾಜು 100 ಕೋಟಿ ರೂ. ವೆಚ್ಚವಾಗಲಿದೆ.
- ಬಿವಿಎಫ್‌ಸಿಎಲ್ ತನ್ನ ಎರಡು ಘಟಕಗಳನ್ನು ಅಂದರೆ ನಾಮರೂಪ್–II ಮತ್ತು ನಾಮರೂಪ್–IIIನ್ನು ತನ್ನ ನಾಮರೂಪ್ ಬಿವಿಎಫ್‌ಸಿಎಲ್ ಆವರಣದಲ್ಲಿ ಕಾರ್ಯಾಚರಣೆ ಮಾಡುತ್ತಿದೆ.
- ಬಿವಿಎಫ್‌ಸಿಎಲ್ ಗೆ ನೀಡಲಾಗುವ 100 ಕೋಟಿ ರೂ. ಅನುದಾನವು, ವಾರ್ಷಿಕ 3.90 ಲಕ್ಷ ಮೆಟ್ರಿಕ್ ಟನ್ ಯೂರಿಯಾ ಉತ್ಪಾದನಾ ಸಾಮರ್ಥ್ಯವನ್ನು ಪುನರ್‌ಸ್ಥಾಪಿಸಲಿದ್ದು, ಸಂಪೂರ್ಣ ಈಶಾನ್ಯ ವಲಯಕ್ಕೆ ಅದರಲ್ಲೂ ಅಸ್ಸಾಂನ ಚಹಾ ಉದ್ಯಮ ಮತ್ತು ಕೃಷಿ ವಲಯಕ್ಕೆ ಸಕಾಲದಲ್ಲಿ ಯೂರಿಯಾ ಲಭ್ಯತೆಯನ್ನು ಖಾತ್ರಿಪಡಿಸುತ್ತದೆ.
- ಇದು ಹಾಲಿ ಇರುವ ಸುಮಾರು 580 ಉದ್ಯೋಗಿಗಳನ್ನು ಶಾಶ್ವತ ಆಧಾರದಲ್ಲಿ ಮತ್ತು 1500 ಜನರಿಗೆ ತಾತ್ಕಾಲಿಕ ಆಧಾರದಲ್ಲಿ ಉದ್ಯೋಗ ಮುಂದುವರಿಸುತ್ತದೆ.
- 28,000 ಜನರು ಈ ಸ್ಥಾಪನೆಯಿಂದ ಪರೋಕ್ಷವಾಗಿ ಪ್ರಯೋಜನ ಪಡೆಯುತ್ತಾರೆ.

# ಬ್ರಹ್ಮಪುತ್ರದ ಗಾಯಕ

ಅಸ್ಸಾಂನ ಸರಿಸಾಟಿಯಿಲ್ಲದ ಸೌಂದರ್ಯ ಮತ್ತು ಸಂಸ್ಕೃತಿಯು ಅದರ ಚಹಾ, ಕರಕುಶಲ ವಸ್ತುಗಳು, ಕೈಮಗ್ಗ, ರೇಷ್ಮೆ ಮತ್ತು ಇನ್ನಿತರ ವಿಧಾನಗಳ ಮೂಲಕ ಪ್ರತಿಫಲಿಸುತ್ತವೆ. ಈ ಎಲ್ಲದರ ಹೊರತಾಗಿ, ಭೂಪೇನ್ ಹಜ಼ಾರಿಕಾ ಅವರಂತಹ ಬಹುಮುಖ ಪ್ರತಿಭೆಯನ್ನು ಅಸ್ಸಾಂ ಜಗತ್ತಿಗೆ ನೀಡಿದೆ. ಅವರು ಇಹ ತ್ಯಜಿಸಿ ಬಹು ಕಾಲದ ನಂತರವೂ ಅವರ ಹಾಡುಗಳ ರಚನೆ ಸಂಗೀತ ಪ್ರಿಯರನ್ನು ಮೋಡಿ ಮಾಡುತ್ತವೆ...



ಜನನ: ಸೆಪ್ಟೆಂಬರ್ 8, 1926 ಮರಣ: ನವೆಂಬರ್ 5, 2011

ಭೂಪೇನ್ ಹಜ಼ಾರಿಕಾ ಅವರು ನೀಲಕಂಠ ಮತ್ತು ಶಾಂತಿಪ್ರಿಯಾ ಹಜಾರಿಕಾ ಅವರ ಮಗನಾಗಿ ಹುಟ್ಟಿದ್ದು ಅಸ್ಸಾಂನ ಸಾಡಿಯಾದಲ್ಲಿ. ಅವರು ಬಾಲ ಪ್ರತಿಭೆ. ತಮ್ಮ 10ನೇ ವಯಸ್ಸಿನಲ್ಲಿ ಮೊದಲ ಹಾಡನ್ನು ಧ್ವನಿಮುದ್ರಣ ಮಾಡಿದರು ಮತ್ತು 13ನೇ ವಯಸ್ಸಿನಲ್ಲಿ ತಮ್ಮ ಮೊದಲ ಹಾಡನ್ನು ಬರೆದರು. ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರದಲ್ಲಿ ತಮ್ಮ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯನ್ನು ಪೂರೈಸಿದರು. ನಂತರ ಅವರು ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಸಮೂಹ ಸಂವಹನದಲ್ಲಿ ಪಿಎಚ್.ಡಿ ಮಾಡಿದರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿದ್ದ ಸಮಯದಲ್ಲಿ, ಮಹಾನ್ ಗಾಯಕ ಮತ್ತು ನಾಗರಿಕ ಹಕ್ಕುಗಳ ಕಾರ್ಯಕರ್ತ ಪಾಲ್ ರೋಬೆಸನ್ ಅವರಿಂದ ಪ್ರಭಾವಿತರಾದರು. ರೊಬೆಸನ್ ಅವರ 'ಓಲ್ಡ್ ಮ್ಯಾನ್ ರಿವರ್'ನಿಂದ ಸ್ಫೂರ್ತಿ ಪಡೆದ ಹಜ಼ಾರಿಕಾ 'ಬಿಸ್ಟಿರ್ನೋ ಪರೋರೆ'ಸಂಯೋಜಿಸಿದರು (ಗುಲ್ಜಾರ್ ಅವರು ಇದನ್ನು 'ಓ ಗಂಗಾ ಬೆಹತಿ ಹೋ ಕ್ಯೂ' ಎಂದು ಹಿಂದಿಗೆ ಭಾಷಾಂತರ ಮಾಡಿದ್ದಾರೆ). ಸಿನೆಮಾ ಮೂಲಕ ಶೈಕ್ಷಣಿಕ ಯೋಜನಾ ಅಭಿವೃದ್ಧಿಯ ಬಳಕೆಯ ಅಧ್ಯಯನಕ್ಕಾಗಿ ಅವರು ಅಮೇರಿಕದ ಚಿಕಾಗೊ ವಿಶ್ವವಿದ್ಯಾಲಯದಿಂದ ಲಿಸ್ಟ್ ಫೆಲೋಶಿಪ್ ಪಡೆದರು.

ಹಜ಼ಾರಿಕಾ ಕವಿ, ಸಂಗೀತ ಸಂಯೋಜಕ, ಗಾಯಕ, ನಟ, ಪತ್ರಕರ್ತ, ಲೇಖಕ ಮತ್ತು ಚಲನಚಿತ್ರ ನಿರ್ಮಾಪಕನಾಗಿ ಅನೇಕ ಗೌರವಗಳನ್ನು ಪಡೆದಿದ್ದರು. ತಾವೇ ಹೇಳಿಕೊಳ್ಳುತ್ತಿದ್ದಂತೆ ಈಜಜಾಬೋರ್ (ಅಲೆಮಾರಿ) ಅಸ್ಸಾಂನ ಜಾನಪದ ಪರಂಪರೆಗೆ ತಮ್ಮ ಹಾಡುಗಳ ಮೂಲಕ ಸುಂದರ ರೂಪ ನೀಡಿದರು.

ಹಜ಼ಾರಿಕಾ ಅವರ ಪ್ರತಿಭೆ ಕೇವಲ ಅಸ್ಸಾಮೀ ಭಾಷೆಗೆ ಸೀಮಿತವಾಗಿರಲಿಲ್ಲ. ಅವರು ಬಾಂಗ್ಲಾ ಮತ್ತು ಹಿಂದಿ ಭಾಷೆಗಳಲ್ಲಿ ಹಲವಾರು ಹಾಡುಗಳನ್ನು ಬರೆದಿದ್ದಾರೆ. ಅವರು ಅನೇಕ ಹಿಂದಿ ಚಿತ್ರಗಳಿಗೆ ಸಂಯೋಜನೆ ನೀಡಿದ್ದಾರೆ, ರುಡಾಲಿ ಚಿತ್ರದಲ್ಲಿ ಅವರು ಮಾಡಿದ ಕಾರ್ಯಕ್ಕಾಗಿ ಅವರನ್ನು ಸ್ಮರಿಸಲಾಗುತ್ತದೆ. ಪ್ರಶಸ್ತಿಗೆ ಭಾಜನವಾದ ಈ ಚಿತ್ರದ ದಿಲ್ ಹೂಮ್ ಹೂಮ್ ಕರೆ – ಹಾಡು ಇನ್ನೂ ಕೇಳುಗರ ಹೃದಯವನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಅವರ ಸಾಹಿತ್ಯ ಮತ್ತು ಸಂಯೋಜನೆಗಳ ನಿಧಿಯನ್ನು ಅಸ್ಸಾಂನಲ್ಲಿ ಭೂಪೇಂದ್ರ ಸಂಗೀತ ಎಂದು ಕರೆಯಲಾಗುತ್ತದೆ. ಅವರು ಅಸ್ಸಾಮೀ ಚಲನಚಿತ್ರಗಳಾದ ಎರಾ ಬತಾರ್ ಸುರ್, ಶಕುಂತಲಾ, ಪ್ರತಿಧ್ವನಿ, ಲೋಟಿಗೋಟಿ, ಮಾನ್ ಪ್ರಜಾಪತಿ, ಸ್ವಿಕಾರೋಕ್ತಿ ಮುಂತಾದವುಗಳನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ, ಸಂಗೀತ ಸಂಯೋಜಿಸಿದ್ದಾರೆ ಮತ್ತು ಹಾಡಿದ್ದಾರೆ. ಹಿಂದಿಯಲ್ಲಿ ಅವರ ಕೆಲವು ಪ್ರಸಿದ್ಧ ಕೃತಿಗಳಲ್ಲಿ ರುಡಾಲಿ, ಏಕ್ ಪಲ್, ಧರ್ಮಿಯಾನ್, ದಮನ್, ಪಪಿಹಾ, ಸಾಜ್, ಗಜಗಾಮಿನಿ ಮುಂತಾದ ಚಲನಚಿತ್ರಗಳು ಸೇರಿವೆ. ಅವರ ಅನೇಕ ಸಂಯೋಜನೆಗಳು ಲಾವಣಿಗಳ ರೂಪದಲ್ಲಿವೆ. ಅವರು ಸಾಮಾಜಿಕ ಪ್ರಜ್ಞೆಯೊಂದಿಗೆ ಮಿಳಿತವಾದ ಹಲವಾರು ಮೇರುಕೃತಿಗಳನ್ನು ಬರೆದು ಸಂಯೋಜಿಸಿದ್ದಾರೆ. ಅವರ ಡೋಲಾ, ಡೋಲಾ, ಅಂತಹ ಒಂದು ಹಾಡಾಗಿದೆ.

**1975ರಲ್ಲಿ, ಹಜ಼ಾರಿಕಾ ಅವರು ಚಮೇಲಿ ಮೇಮ್ ಸಾಬ್ ಚಿತ್ರದ ಅತ್ಯುತ್ತಮ ಸಂಗೀತ ನಿರ್ದೇಶನಕ್ಕಾಗಿ ರಾಷ್ಟ್ರೀಯ ಪ್ರಶಸ್ತಿ ಪಡೆದರು. 1992ರಲ್ಲಿ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಮತ್ತು 2019ರಲ್ಲಿ ಭಾರತರತ್ನ ನೀಡಿ ಗೌರವಿಸಲಾಯಿತು.**

1,000 ಕ್ಕೂ ಹೆಚ್ಚು ಗೀತೆಗಳು ಮತ್ತು ಸುಮಾರು 15 ಪುಸ್ತಕಗಳನ್ನು ಬರೆದಿರುವ ಗೌರವ ಅವರಿಗೆ ಸಲ್ಲುತ್ತದೆ. ಅವರು ಎರಡು ದಶಕಗಳ ಕಾಲ ಮಾಸ ಪತ್ರಿಕೆ ಅಮರ್ ಪ್ರತಿನಿಧಿ ಮತ್ತು ಪ್ರತಿಧ್ವನಿ ಮಾಸಪತ್ರಿಕೆ ಸಂಪಾದಿಸಿದ್ದರು. 'ಬ್ರಹ್ಮಪುತ್ರದ ಗಾಯಕ' ಎಂದು ಜನಪ್ರಿಯವಾಗಿರುವ ಅವರ ಸಂಗೀತದ ನಿನಾದ ಕೇಳುಗರನ್ನು ಇನ್ನೂ ಗುನುಗುನಿಸುವಂತೆ ಮಾಡುತ್ತದೆ. ಅವರ ಕೊಡುಗೆಯನ್ನು ಗೌರವಿಸಿ, ಸರ್ಕಾರವು ಅಸ್ಸಾಂನ ದೇಶದ ಅತಿ ಉದ್ದದ ರಸ್ತೆ ಸೇತುವೆಗೆ ಭೂಪೇನ್ ಹಜ಼ಾರಿಕಾ ಸೇತುವೆ ಎಂದು ಹೆಸರಿಸಿದೆ. ▪



# ನಮ್ಮ ನೆಲದಲ್ಲಿ ಒಂದು ಇಂಚು ತೆಗೆದುಕೊಳ್ಳಲೂ ನಾವು ಯಾರಿಗೂ ಬಿಡುವುದಿಲ್ಲ: ರಕ್ಷಣಾ ಸಚಿವ ರಾಜನಾಥ್ ಸಿಂಗ್

ಭಾರತ ಎಂದಿಗೂ ಯಾವುದೇ ದೇಶದ ಭೂಮಿಯನ್ನು ಒತ್ತುವರಿ ಮಾಡಿಲ್ಲ. ಅದೇ ರೀತಿ ತನ್ನ ಗಡಿ ರಕ್ಷಣೆಯನ್ನೂ ಖಾತ್ರಿಪಡಿಸಿದೆ ಮತ್ತು ಅದರ ರಕ್ಷಣೆಗೆ ಎಲ್ಲ ಅಗತ್ಯ ಕ್ರಮ ಕೈಗೊಂಡಿದೆ. ಇದರ ಫಲವಾಗಿ ಕಳೆದ ೯ ತಿಂಗಳುಗಳ ಸಂಘರ್ಷದ ಬಳಿಕ, ಚೀನಾ ಮತ್ತು ಭಾರತ ಪ್ಯಾಂಗಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ದಂಡೆಯಿಂದ ಸೇನಾಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಒಪ್ಪಂದಕ್ಕೆ ಬಂದಿವೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು 2021ರ ಫೆಬ್ರವರಿ 11ರಂದು ಈ ಕುರಿತಂತೆ ಸಂಸತ್‌ನಲ್ಲಿ ಮಾತನಾಡಿದರು.

2020ರ ಮೇ ತಿಂಗಳಲ್ಲಿ ಆರಂಭವಾದ 9 ತಿಂಗಳ ದೀರ್ಘ ಸಂಘರ್ಷದ ಬಳಿಕ, ಭಾರತ ಮತ್ತು ಚೀನಾ ಪ್ಯಾಂಗ್ಯಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ದಂಡೆಗಳಿಂದ ಸೇನಾ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಒಪ್ಪಂದಕ್ಕೆ ಬಂದಿವೆ. ಎರಡೂ ಕಡೆಯ ಹಿರಿಯ ಕಮಾಂಡರುಗಳ ನಡುವೆ ಒಂಬತ್ತು ಸುತ್ತಿನ ಮಾತುಕತೆಗಳು ನಡೆದವು. ಜೊತೆಗೆ ಮುಖಾಮುಖಿ ಕೊನೆಗೊಳಿಸಲು ಎರಡೂ ರಾಷ್ಟ್ರಗಳ ನಡುವೆ ರಾಜತಾಂತ್ರಿಕ ಮಾತುಕತೆಗಳೂ ಜರುಗಿದವು. ಭಾರತದ ಒಂದು ಇಂಚು ಜಾಗವನ್ನೂ ಯಾರೊಬ್ಬರಿಗೂ ಕಬಳಿಸಲು ಬಿಡುವುದಿಲ್ಲ ಎಂಬ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನಿರ್ಧಾರದ ಆಧಾರದ ಮೇಲೆ ಭಾರತದ ಕಾರ್ಯತಂತ್ರ ಮತ್ತು ವಿಧಾನವಿತ್ತು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಈ ಒಪ್ಪಂದದಲ್ಲಿ ಭಾರತ ಏನನ್ನೂ ಕಳೆದುಕೊಂಡಿಲ್ಲ ಎಂದು ಖಾತ್ರಿಪಡಿಸಿದ್ದಾರೆ.

**ಈ ಕೆಳಗಿನ ಅಂಶಗಳ ಮೇಲೆ ಒಪ್ಪಂದಕ್ಕೆ ಬರಲಾಗಿದೆ:**

- ಪ್ಯಾಂಗಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ದಂಡೆಯಿಂದ ಸೇನಾ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ಕುರಿತಂತೆ ಎರಡೂ ಕಡೆಯವರು ಒಪ್ಪಂದಕ್ಕೆ ಬಂದಿದ್ದಾರೆ.
- ಎರಡೂ ಕಡೆಯವರು ಹಂತಹಂತವಾಗಿ, ಸಮನ್ವಯದಿಂದ ಮತ್ತು ಪರಾಮರ್ಶಿತ ರೀತಿಯಲ್ಲಿ ತಮ್ಮ ಪಡೆಗಳನ್ನು ಮುಂದಕ್ಕೆ ನಿಯೋಜಿಸುವುದನ್ನು ನಿಲ್ಲಿಸುತ್ತವೆ.
- ಚೀನಾ ಕಡೆಯವರು ತಮ್ಮ ಪಡೆಗಳನ್ನು ಉತ್ತರ ದಂಡೆಯ ಫಿಂಗರ್ 8ರ ಪೂರ್ವದಲ್ಲಿ ಇರಿಸಿಕೊಳ್ಳುತ್ತಾರೆ
- ಭಾರತೀಯ ಪಡೆಗಳು ಫಿಂಗರ್ 3ರ ಧನ್ ಸಿಂಗ್ ಥಾಪಾ ಠಾಣೆಯ ತಮ್ಮ ಶಾಶ್ವತ ನೆಲೆಯಲ್ಲಿ ಇರಲಿವೆ.
- ಏಪ್ರಿಲ್ 2020ರ ನಂತರ ದಕ್ಷಿಣ ಮತ್ತು ಉತ್ತರ ದಂಡೆಯಲ್ಲಿ ನಿರ್ಮಿಸಲಾದ ಯಾವುದೇ ಕಟ್ಟಡವನ್ನು ತೆಗೆದು ಭೂಪ್ರದೇಶ ಮರುಸ್ಥಾಪಿಸಲಾಗುವುದು.



### ಮಾತುಕತೆಗೆ ಅನುಸರಿಸಲಾದ ಮೂರು ಪ್ರಮುಖ ತತ್ವಗಳು

ಚೀನಾದ ಏಕಪಕ್ಷೀಯ ಕ್ರಮದಿಂದ ಎದುರಾದ ಸವಾಲುಗಳಿಗೆ ಸಶಸ್ತ್ರ ಪಡೆಗಳು ಸ್ಪಂದಿಸಿ, ಶೌರ್ಯ ಮತ್ತು ಧೈರ್ಯವನ್ನು ತೋರಿಸಿವೆ ಎಂದು ರಕ್ಷಣಾ ಸಚಿವರು ಹೇಳಿದ್ದಾರೆ. ಭಾರತವು ತನ್ನ ಕಾರ್ಯವಿಧಾನದಲ್ಲಿ ಮೂರು ಪ್ರಮುಖ ತತ್ವಗಳನ್ನು ಅನುಸರಿಸಿತು: ಎರಡೂ ಕಡೆಯವರು ಎಲ್.ಎ.ಸಿ.ಯನ್ನು ಕಟ್ಟುನಿಟ್ಟಾಗಿ ಗೌರವಿಸಬೇಕು ಮತ್ತು ಪಾಲಿಸಬೇಕು; ಏಕಪಕ್ಷೀಯವಾಗಿ ಯಥಾಸ್ಥಿತಿಯನ್ನು ಬದಲಾಯಿಸಲು ಎರಡೂ ಕಡೆಯವರು ಪ್ರಯತ್ನಿಸಬಾರದು; ಮತ್ತು ಎರಡೂ ಕಡೆಗಳ ನಡುವೆ ಆಗಿರುವ ಎಲ್ಲಾ ಒಪ್ಪಂದಗಳು ಮತ್ತು ತಿಳಿವಳಿಕೆ ಒಪ್ಪಂದಗಳನ್ನು ಸಂಪೂರ್ಣವಾಗಿ ಪಾಲಿಸಬೇಕು.

### ಚೀನಾ ಅಕ್ರಮವಾಗಿ 43,000 ಚದರ ಕಿಲೋ ಮೀಟರ್ ಭಾರತದ ಭೂಭಾಗವನ್ನು ಆಕ್ರಮಿಸಿದೆ

ಚೀನಾ ಪ್ರಮುಖವಾಗಿ 1962ರ ಸಂಘರ್ಷದ ವೇಳೆ, ಅಕ್ರಮವಾಗಿ ಲಡಾಖ್ ನಲ್ಲಿ 38,000 ಚದರ ಕಿಲೋ ಮೀಟರ್ ಭೂಭಾಗವನ್ನು ಆಕ್ರಮಿಸಿದೆ. ಪಾಕಿಸ್ತಾನ ಅಕ್ರಮವಾಗಿ ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ 5,180 ಚದರ ಕಿ.ಮೀ. ಭೂಭಾಗವನ್ನು ಚೀನಾಗೆ ನೀಡಿದೆ. ಹೀಗಾಗಿ ಚೀನಾ ಅಕ್ರಮವಾಗಿ 43,000 ಚದರ ಕಿಲೋ ಮೀಟರ್ ಭಾರತದ ನೆಲವನ್ನು ಆಕ್ರಮಿಸಿದೆ. ಅದು ಅರುಣಾಚಲ ಪ್ರದೇಶದ ಸುಮಾರು 90,000 ಚದರ ಕಿಲೋ ಮೀಟರ್ ಭಾರತದ ಭೂಭಾಗವನ್ನು ತನ್ನದೆಂದು ಹೇಳುತ್ತಿದೆ. ■



# ಏರೋ ಇಂಡಿಯಾ ಭಾರತದ ವೃದ್ಧಿಸುತ್ತಿರುವ ರಕ್ಷಣಾ ಸಾಮರ್ಥ್ಯದ ಪ್ರದರ್ಶನ

**ಭಾರತೀಯ ವಾಯು ಪಡೆ ನಿರಂತರವಾಗಿ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿದೆ. ತನ್ನ ಬಲವನ್ನು ಪ್ರದರ್ಶಿಸಲು, ಎರಡು ವರ್ಷಗಳಿಗೊಮ್ಮೆ ವೈಮಾನಿಕ ಪ್ರದರ್ಶನ ಮತ್ತು ವಾಯುಯಾನ ವಸ್ತು ಪ್ರದರ್ಶನವನ್ನು ಆಯೋಜಿಸಲಾಗುತ್ತದೆ. ಕಳೆದ ಕೆಲವು ವರ್ಷಗಳಲ್ಲಿ, ಇದು ಏಷ್ಯಾದ ಅತಿ ದೊಡ್ಡ ಮತ್ತು ಜಾಗತಿಕವಾಗಿ ಎರಡನೇ ದೊಡ್ಡ ಸೇನಾ ವೈಮಾನಿಕ ವಸ್ತು ಪ್ರದರ್ಶನವಾಗಿ ಹೊರಹೊಮ್ಮಿದೆ. 2021ರ ಫೆಬ್ರವರಿ 3 ರಿಂದ 5 ರವರೆಗೆ ಬೆಂಗಳೂರಿನಲ್ಲಿ ನಡೆದ ಈ ಪ್ರದರ್ಶನದ 13ನೇ ಆವೃತ್ತಿಯಲ್ಲಿ ವಿಶ್ವವು ಭಾರತದ ಸಾಮರ್ಥ್ಯವನ್ನು ಕಣ್ಣಾರೆ ಕಂಡಿತು.**

ಏರೋ ಇಂಡಿಯಾದ ಮೊದಲ ಆವೃತ್ತಿ 1996ರಲ್ಲಿ ಬೆಂಗಳೂರಿನ ಯಲಹಂಕದ ವಾಯುಪಡೆಯ ನೆಲೆಯಲ್ಲಿ ನಡೆದಿತ್ತು. ಅಲ್ಲಿಂದ ಪ್ರತಿ ಎರಡು ವರ್ಷಗಳಿಗೊಮ್ಮೆ ಆಯೋಜಿಸಲಾಗುತ್ತಿದ್ದು, ಇದು ಕ್ರಮೇಣ ಜಾಗತಿಕ ಮಾನ್ಯತೆ ಪಡೆದುಕೊಂಡಿದೆ. ಆದಾಗ್ಯೂ ಈ ವರ್ಷದ ಪ್ರದರ್ಶನ ವಿಶೇಷವೆಂದು ಸಾಬೀತುಪಡಿಸಿದೆ. ಕಾರಣ, ಈ ಪ್ರದರ್ಶನದಲ್ಲಿ ವಿದೇಶಿ ಕಂಪನಿಗಳು ತಮ್ಮ ತಂತ್ರಜ್ಞಾನವನ್ನು ಪ್ರದರ್ಶಿಸುತ್ತಿದ್ದವು, ಮತ್ತು ಅವರ ಭಾರತೀಯ ಸಹವರ್ತಿಗಳು ತಮ್ಮ ಉತ್ಪನ್ನಗಳು ಮತ್ತು ಸಲಕರಣೆಗಳೊಂದಿಗೆ ಆಗಮಿಸುತ್ತಿದ್ದರು. 2021ರಲ್ಲಿ ಏರೋ ಇಂಡಿಯಾದ ರಜತ ಮಹೋತ್ಸವ ವರ್ಷದಲ್ಲಿ, ಯಲಹಂಕ ವಾಯುನೆಲೆಯಲ್ಲಿ 'ಮೇಕ್ ಇನ್ ಇಂಡಿಯಾ' ಮತ್ತು ಸ್ವಾವಲಂಬಿ ಭಾರತದ ಶಕ್ತಿ ಮತ್ತು ಸಾಮರ್ಥ್ಯಕ್ಕೆ ವಿಶ್ವವು ಮೊದಲ ಬಾರಿಗೆ ಸಾಕ್ಷಿಯಾಯಿತು. ಈ ವರ್ಷದ ಏರೋ ಇಂಡಿಯಾ ಪ್ರದರ್ಶನದ ಧ್ಯೇಯವಾಕ್ಯ "ಭದ್ರತೆ ಮತ್ತು ಸ್ಥಿರತೆಗಾಗಿ ವಾಯು ಪ್ರದೇಶದ ಶಕ್ತಿಯ ಹತೋಟಿ" ಎಂಬುದಾಗಿತ್ತು. ವೈಮಾನಿಕ ಪ್ರದರ್ಶನದ ವೇಳೆ ರಕ್ಷಣಾ ಸಚಿವ ರಾಜನಾಥ್ ಸಿಂಗ್, "121 ತಿಳಿವಳಿಕೆ ಒಪ್ಪಂದಗಳು, 19 ತಂತ್ರಜ್ಞಾನ ಹಸ್ತಾಂತರ, 4 ಹಸ್ತಾಂತರ, 18 ಉತ್ಪನ್ನಗಳ ಬಿಡುಗಡೆ ಮತ್ತು 32 ಪ್ರಮುಖ ಪ್ರಕಟಣೆಗಳು ಏರೋ ಇಂಡಿಯಾ 2021ನ ಅದ್ಭುತ ಯಶಸ್ಸಿನ ಸಂಕೇತವಾಗಿದೆ." ಎಂದು ಹೇಳಿದರು.

## ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಯತ್ತ ಸಾಗುತ್ತಿರುವ ಭಾರತ

ವಿಶ್ವದ ಅತಿದೊಡ್ಡ ಶಸ್ತ್ರಾಸ್ತ್ರ ಆಮದುದಾರರಲ್ಲಿ ಭಾರತ ಕೂಡ ಒಂದಾಗಿದೆ. ಜಾಗತಿಕ ಭದ್ರತೆ ಕುರಿತ ಸ್ಟಾಕ್ ಹೋಮ್ ಮೂಲದ ಸ್ವತಂತ್ರ ಸಂಪನ್ಮೂಲ ಸಂಸ್ಥೆ, ಸ್ಟಾಕ್ ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ರೀತ್ಯ, ಭಾರತವು 2012–18ರ ಅವಧಿಯಲ್ಲಿ ವಿಶ್ವದ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವ ಅತಿದೊಡ್ಡ ದೇಶವಾಗಿದ್ದು, ಒಟ್ಟು ಜಾಗತಿಕ ಪಾಲಿನ ಶೇಕಡಾ 13ರಷ್ಟು ಪಾಲು ಹೊಂದಿದೆ. ಆದರೆ, ಭವಿಷ್ಯದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ಭಾರತವು ರಕ್ಷಣಾ ಉತ್ಪಾದನೆಯಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿಸಲು ಒತ್ತು ನೀಡುತ್ತಿದೆ.

# 83 ತೇಜಸ್‌ಗಾಗಿ ಎಚ್‌ಎಎಲ್‌ಗೆ ಗುತ್ತಿಗೆ ನೀಡಿಕೆ

ಏರೋ ಇಂಡಿಯಾ 2021ರ ಉದ್ಘಾಟನಾ ಸಮಾರಂಭದಲ್ಲಿ, 83 ಲಘು ಯುದ್ಧ ವಿಮಾನ ತೇಜಸ್‌ಗಾಗಿ ಗುತ್ತಿಗೆಯನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ಗೆ ನೀಡಲಾಯಿತು. ಈ ಪೈಕಿ 73 ಎಲ್‌ಸಿಎ ತೇಜಸ್ ಎಂಕೆ–1ಎ ಯುದ್ಧ ವಿಮಾನಗಳಾಗಿದ್ದು, 10 ಎಲ್‌ಸಿಎ ತೇಜಸ್ ಎಂ.ಕೆ.–1 ತರಬೇತಿ ವಿಮಾನಗಳಾಗಿರುತ್ತವೆ. ಇದಕ್ಕಾಗಿ 48,000 ಕೋಟಿ ರೂ.ಗಳ ಗುತ್ತಿಗೆ ಈ ದಿನಾಂಕದವರೆಗೆ ದೇಶೀಯ ಉತ್ಪಾದನೆಗೆ ನೀಡಲಾದ ಅತಿ ದೊಡ್ಡ ರಕ್ಷಣಾ ಗುತ್ತಿಗೆಯಾಗಿದೆ. ಏರೋ ಇಂಡಿಯಾದಲ್ಲಿ ಭಾಗಿಯಾಗಿದ್ದ ಎಂಎಸ್‌ಎಂಇಗಳು 203 ಕೋಟಿ ರೂ. ಮೌಲ್ಯದ ಬೇಡಿಕೆಗಳನ್ನು ಪಡೆದುಕೊಂಡಿವೆ.

**ಏರೋ ಇಂಡಿಯಾ 2021: ವಿಶ್ವದ ಪ್ರಥಮ 'ಹೈಬ್ರಿಡ್' ವೈಮಾನಿಕ ಪ್ರದರ್ಶನ**
ಏರೋ ಇಂಡಿಯಾ 2021 ಪ್ರಪ್ರಥಮವಾದ ಹೈಬ್ರೀಡ್ ಪ್ರದರ್ಶನವಾಗಿತ್ತು. ಈವರೆಗೆ ಬೌದ್ಧಿಕವಾಗಿ ಪ್ರದರ್ಶನದಲ್ಲಿ ಭಾಗಿಯಾಗುತ್ತಿದ್ದವರು ಆನಂದ ಅನುಭವಿಸುತ್ತಿದ್ದರು. ಆದರೆ, ಈ ಬಾರಿ ವರ್ಚುವಲ್ ಮೂಲಕವೂ ಜನರು ಭಾಗಿಯಾಗಿದ್ದರು. ಇದು ಕೋವಿಡ್–19 ನಿರ್ಬಂಧಗಳಿಂದಾಗಿ ಪ್ರದರ್ಶನಕ್ಕೆ ಬರಲು ಸಾಧ್ಯವಾಗದ ಹಲವರಿಗೆ ಅನುಕೂಲವಾಗಿತ್ತು. ಕನಿಷ್ಠ 338 ವಿದೇಶೀ ಕಂಪನಿಗಳು ವರ್ಚುವಲ್ ಮೂಲಕ ಪ್ರದರ್ಶನದಲ್ಲಿ ಭಾಗಿಯಾಗಿದ್ದವು.

**ಮೇಕ್ ಇನ್ ಇಂಡಿಯಾಕ್ಕೆ ಪ್ರಚೋದನೆ**
ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಭಾರತ ಕರೆಯಿಂದ ಪ್ರೇರಿತವಾಗಿ, ವೈಮಾನಿಕ ಪ್ರದರ್ಶನ ವಾಯು ಪ್ರದೇಶ ವಲಯದಲ್ಲಿ ಭಾರತದ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸಾಮರ್ಥ್ಯವನ್ನು ಪ್ರದರ್ಶಿಸಿತು. ಎಲ್.ಸಿ.ಎ. ತರಬೇತಿ ವಿಮಾನ (ಎಲ್.ಐ,ಎಫ್.ಟಿ, ಟ್ರೈನರ್), ಎಚ್.ಟಿ.ಟಿ–40, ಐಜೆಟಿ, ಅಡ್ವಾನ್ಸ್‌ಡ್ ಹಾಕ್ ಎಂಕೆ 132 ಮತ್ತು ಸಿವಿಲ್ ಡಿ.ಓ–228 ಗಳನ್ನು ಒಳಗೊಂಡ ಎಚ್.ಎ.ಎಲ್.ನ 'ಆತ್ಮನಿರ್ಭರ ವಿನ್ಯಾಸದ ವಿಮಾನ ಹಾರಾಟ'ದ ವಿಶಿಷ್ಟ ಪ್ರದರ್ಶನವನ್ನು ವೀಕ್ಷಕರು ಆನಂದಿಸಿದರು. ಇದರ ಜೊತೆಗೆ ಬ್ರಹ್ಮೋಸ್ ಕ್ಷಿಪಣಿ, ಸುಖೋಯ್ ಎಸ್.ಯು.30 ಎಂ.ಕೆ.ಐ ಯುದ್ಧ ವಿಮಾನಗಳು, ಮುಂದುವರಿದ ಹಗುರ ಹೆಲಿಕಾಪ್ಟರ್ ಧ್ರುವ, ಲಘು ಯುದ್ಧ ಹೆಲಿಕಾಪ್ಟರ್ ಮತ್ತು ಲಘು ಯುಟಿಲಿಟಿ ಹೆಲಿಕಾಪ್ಟರ್‌ಗಳೂ ಪ್ರದರ್ಶನದ ಭಾಗವಾಗಿದ್ದವು.



## ತಮಿಳುನಾಡು

**ರಕ್ಷಣಾ ಕೈಗಾರಿಕಾ ಕಾರಿಡಾರ್:** ಚೆನ್ನೈ, ಕೊಯಮತ್ತೂರು, ಹೊಸೂರು, ಸೇಲಂ ಮತ್ತು ತಿರುಚಿರಾಪಳ್ಳಿಗಳನ್ನು ಇದಕ್ಕಾಗಿ ಗುರುತಿಸಲಾಗಿದೆ.



## ಉತ್ತರ ಪ್ರದೇಶ

**ರಕ್ಷಣಾ ಕೈಗಾರಿಕಾ ಕಾರಿಡಾರ್:** ಲಖನೌ, ಕಾನ್ಪುರ, ಜಾನ್ಸಿ, ಆಗ್ರಾ, ಅಲಿಗಢ, ಚಿತ್ರಕೂಟ ಇವು ಎರಡನೇ ರಕ್ಷಣಾ ಕೈಗಾರಿಕಾ ಕಾರಿಡಾರ್ ಭಾಗವಾಗಿವೆ. ಇದು ಬುಂದೇಲ್ ಖಂಡ ವಲಯವನ್ನೂ ಒಳಗೊಂಡಿದೆ.

## ಈ ಕಾರಿಡಾರ್‌ಗಳ ಮಹತ್ವ:

ಭಾರತವು ಕೇವಲ ರಕ್ಷಣಾ ಸಾಮಗ್ರಿಗಳು ಮತ್ತು ಶಸ್ತ್ರಾಸ್ತ್ರಗಳ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯ ಮಾತ್ರ ಮಾಡುತ್ತಿಲ್ಲ ಜೊತೆಗೆ ರಫ್ತಿಗಾಗಿ ಉದ್ಯಮವನ್ನು ಅಭಿವೃದ್ಧಿಪಡಿಸಲು ಬಯಸಿದೆ. ಈ ಕಾರಿಡಾರ್‌ಗಳು ಇದಕ್ಕೆ ಸಹಾಯ ಮಾಡುತ್ತವೆ. ಜಾಗತಿಕ ಮಾರುಕಟ್ಟೆಗೆ ಸರಿಯಾದ ಪೂರೈಕೆ ಸರಪಳಿಯನ್ನು ಖಾತ್ರಿಪಡಿಸಿಕೊಳ್ಳಲು ಇದು ಸಹಾಯ ಮಾಡುತ್ತದೆ. ಈ ಕಾರಿಡಾರ್‌ಗಳು ಸ್ಥಳೀಯ ಉತ್ಪಾದನೆಯ ವೇಗ ವರ್ಧಿಸುತ್ತವೆ, ಇದು ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ರಫ್ತು ಉತ್ತೇಜಿಸುತ್ತದೆ.

## ನಿರೀಕ್ಷೆಗಳೇನು?

ಭಾರತವು 2025ರ ಹೊತ್ತಿಗೆ 25 ಶತಕೋಟಿ ಡಾಲರ್ ದೇಶೀಯ ರಕ್ಷಣಾ ಸಾಮಗ್ರಿ ಉತ್ಪಾದನೆ ಗುರಿ ಹೊಂದಿದೆ. ಈ ಕಾರಿಡಾರ್‌ಗಳು ರಕ್ಷಣಾ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಇದರ ಸಾಧನೆಗಾಗಿ, ನಿರ್ಣಾಯಕ ಪಾತ್ರ ನಿರ್ವಹಿಸಲು ನೆರವಾಗಲಿವೆ. ಇದು ಭವಿಷ್ಯದಲ್ಲಿ ಭಾರತವನ್ನು ದೇಶೀಯ ಶಸ್ತ್ರಾಸ್ತ್ರಗಳ ಉತ್ಪಾದಕ ಮತ್ತು ರಫ್ತುದಾರನಾಗುವ ಅವಳಿ ಗುರಿಗಳನ್ನು ಈಡೇರಿಸಲು ನೆರವಾಗುತ್ತದೆ. ■



# ವನ್ಯಜೀವಿ ರಕ್ಷಣೆ, ಭಾರತದ ರಕ್ಷಣೆ

ಒಂದು ಕೊಂಬಿನ ಖಡ್ಗಮೃಗವು 20ನೇ ಶತಮಾನದ ಅಂತ್ಯದ ವೇಳೆಗೆ ವನ್ಯತಾಣದಲ್ಲಿ 200ಕ್ಕಿಂತ ಕಡಿಮೆ ಸಂಖ್ಯೆಗೆ ಇಳಿದು, ಅಳಿವಿನ ಅಂಚಿಗೆ ತಲುಪಿತ್ತು. ಆದಾಗ್ಯೂ, ಸರ್ಕಾರದ ಸಮಯೋಚಿತ ಪ್ರಯತ್ನಗಳು ಮತ್ತು ಕಠಿಣ ರಕ್ಷಣೆ ಮತ್ತು ನಿರ್ವಹಣೆಯೊಂದಿಗೆ, ದೇಶದ ಖಡ್ಗಮೃಗಗಳ ಸಂಖ್ಯೆಯು ಪುನರುಜ್ಜೀವಗೊಂಡಿದೆ. ಪ್ರಸ್ತುತ ಭಾರತವು ಈ ಜಾತಿಯ ಮೃಗದ ಒಟ್ಟು ಸಂಖ್ಯೆಯ ಪೈಕಿ ಶೇಕಡಾ 75 ರಷ್ಟನ್ನು ಹೊಂದಿದೆ. ಚಿರತೆಗಳು, ಸಿಂಹಗಳು ಮತ್ತು ಹುಲಿಗಳು ಸೇರಿದಂತೆ ಹಲವಾರು ಪ್ರಾಣಿಗಳು ಭಾರತದಲ್ಲಿ ಇದೇ ರೀತಿ ಹೆಚ್ಚಿನ ಸಂಖ್ಯೆಯಲ್ಲಿವೆ.

ಪ್ರಾಣಿಗಳಿಗೆ ಗೌರವ ನೀಡುವುದು ಭಾರತೀಯ ಸಂಸ್ಕೃತಿ ಮತ್ತು ಮೌಲ್ಯ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಪರಿಸರ, ಆನುವಂಶಿಕ, ಸಾಮಾಜಿಕ, ಆರ್ಥಿಕ, ವೈಜ್ಞಾನಿಕ, ಶೈಕ್ಷಣಿಕ, ಸಾಂಸ್ಕೃತಿಕ, ಮನರಂಜನೆ ಮತ್ತು ಕಲಾತ್ಮಕ ಕ್ಷೇತ್ರಗಳಲ್ಲಿ ವನ್ಯಜೀವಿಗಳ ಕೊಡುಗೆಯನ್ನು ದೇಶ ಅಂಗೀಕರಿಸಿದೆ. ಸುಸ್ಥಿರ ಅಭಿವೃದ್ಧಿಗೆ ಪ್ರಾಣಿಗಳು ಸಹ ನಿರ್ಣಾಯಕ. ಆದಾಗ್ಯೂ, ಹಲವಾರು ಕಾರಣಗಳಿಂದಾಗಿ, ಅನೇಕ ಪ್ರಾಣಿಗಳು ಅಳಿವಿನ ಅಂಚಿನಲ್ಲಿದ್ದು ಅಪಾಯದಲ್ಲಿವೆ. ಅಳಿವಿನಂಚಿನಲ್ಲಿರುವ ಇಂತಹ ಪ್ರಭೇದಗಳನ್ನು ಉಳಿಸಲು ಸರ್ಕಾರ ಸಮಗ್ರ ಪ್ರಯತ್ನಗಳನ್ನು ಕೈಗೊಂಡು ವಿವಿಧ ಉಪಕ್ರಮಗಳನ್ನು ಪ್ರಾರಂಭಿಸಿದೆ. ಈ ಸಂರಕ್ಷಣಾ ಕಾರ್ಯಕ್ರಮದಲ್ಲಿ ಕನಿಷ್ಠ 22 ವನ್ಯಜೀವಿ ಪ್ರಭೇದಗಳನ್ನು ಸೇರಿಸಲಾಗಿದೆ. ಚಿರತೆಗಳು, ಸಿಂಹಗಳು ಮತ್ತು ಹುಲಿಗಳ ಸಂಖ್ಯೆಯಲ್ಲಿ ಭಾರತ ತೀವ್ರ ಏರಿಕೆ ಕಂಡಿದ್ದು ಇದು ಸಂರಕ್ಷಣಾ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ.

ಮಾರ್ಚ್ 3 ರಂದು ಜಗತ್ತು ವಿಶ್ವ ವನ್ಯಜೀವಿ ದಿನವನ್ನು ಆಚರಿಸುತ್ತಿರುವಾಗ, ಭಾರತದಲ್ಲಿನ ವನ್ಯಜೀವಿಗಳ ಸುಧಾರಿತ ಚಿತ್ರಣವನ್ನು ಗಮನಿಸೋಣ.



## ಚಿರತೆಗಳು

ಒಟ್ಟು ಸಂಖ್ಯೆ

**12,852**

ಡಿಸೆಂಬರ್ 2020ರಲ್ಲಿದ್ದಂತೆ

### ಚಿರತೆಗಳ ಸಂಖ್ಯೆಯಲ್ಲಿ ಶೇ. 60ರಷ್ಟು ಹೆಚ್ಚಳ

- 2014ರಲ್ಲಿ ಇದ್ದ ಅಂದಾಜು ಸಂಖ್ಯೆ 7,910
- ಮಧ್ಯಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಅನುಕ್ರಮವಾಗಿ 3,421, 1,783 ಮತ್ತು 1,690 ಅತಿ ಹೆಚ್ಚು ಚಿರತೆಗಳಿವೆ ಎಂದು ಅಂದಾಜು ಮಾಡಲಾಗಿದೆ.

## ಸಿಂಹಗಳು

- 2015ರಲ್ಲಿದ್ದ ಹಿಂದಿನ ಶೇ.27ರ ವೃದ್ಧಿಯಿಂದ ಶೇ.28.87ಕ್ಕೆ ಹೆಚ್ಚಳ.
- 2015ರಲ್ಲಿ 22,000 ಚದರ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಹಂಚಿಕೊಂಡಿದ್ದ ಸಿಂಹಗಳ ಪ್ರದೇಶ, 2020ರಲ್ಲಿ 30,000 ಚದರ ಕಿ.ಮೀ.ಗೆ ಹೆಚ್ಚಳ – ಶೇ.36ರಷ್ಟು ಏರಿಕೆ.
- 2018ರಲ್ಲಿ ಸರ್ಕಾರ ಏಷ್ಯಾ ಸಿಂಹಗಳ ಸಂರಕ್ಷಣೆ ಯೋಜನೆ ಆರಂಭಿಸಿದೆ.

ಒಟ್ಟು ಸಂಖ್ಯೆ

**674**

2020ರಲ್ಲಿ ನಡೆಸಿದ ಗಣತಿಯ ಅಂದಾಜಿನ ರೀತ್ಯ



## ಹುಲಿಗಳು

**ಹುಲಿಗಳ ಸಂಖ್ಯೆ ಶೇ.33 ಹೆಚ್ಚಳ**

- 2018ರ ಗಣತಿಯ ಪ್ರಕಾರ, ಭಾರತದಲ್ಲಿ ಹುಲಿಗಳ ಸಂಖ್ಯೆ 2,967ಕ್ಕೆ ಏರಿದೆ.
- ಮಧ್ಯಪ್ರದೇಶದಲ್ಲಿ ಅತಿ ಹೆಚ್ಚಿನ ಸಂಖ್ಯೆ ಹುಲಿಗಳು 526 ಇದ್ದರೆ, ಕರ್ನಾಟಕದಲ್ಲಿ 524 ಮತ್ತು ಉತ್ತರಖಂಡದಲ್ಲಿ 442 ಇದ್ದು ಮೂರನೇ ಸ್ಥಾನದಲ್ಲಿದೆ.
- ಭಾರತವು ಹುಲಿಗಳ ಸಂಖ್ಯೆಯನ್ನು ದುಪ್ಪಟ್ಟು ಮಾಡಬೇಕೆಂಬ ಸೇಂಟ್ ಪೀಟರ್ಸ್ ಬರ್ಗ್ ಘೋಷಣೆಯ ಸಾಕಾರಕ್ಕೆ ಬದ್ಧವಾಗಿದ್ದು, 2022ರ ಗಡುವಿಗೆ ಮೊದಲೇ ಆ ಸಾಧನೆ ಮಾಡಿದೆ.
- ಭಾರತದ 2018ರ ಹುಲಿ ಗಣತಿ, ವಿಶ್ವದ ಅತಿ ದೊಡ್ಡ ಕ್ಯಾಮರಾದಲ್ಲಿ ಸೆರೆ ಹಿಡಿವ ವನ್ಯ ಜೀವಿ ಸಮೀಕ್ಷೆಯಾಗಿ ಹೊಸ ಗಿನ್ನಿಸ್ ದಾಖಲೆ ನಿರ್ಮಿಸಿತು.
- ಭಾರತ ಈಗ ವಿಶ್ವದ ಶೇ.70ರಷ್ಟು ಹುಲಿಗಳ ಸಂತತಿಯನ್ನು ಹೊಂದಿದೆ.



**"ಜಗತ್ತಿನ ಶೇ.70ರಷ್ಟು ಹುಲಿ ಸಂಸತಿ, ಶೇ.70ರಷ್ಟು ಏಷ್ಯಾ ಸಿಂಹಗಳು ಮತ್ತು ಶೇ.60ಕ್ಕಿಂತ ಅಧಿಕ ಚಿರತೆಗಳ ಸಂಖ್ಯೆಯು ಭಾರತದಲ್ಲಿ ಜೀವವೈವಿಧ್ಯಗಳ ವಿಕಾಸಕ್ಕೆ ಪ್ರಮಾಣಪತ್ರವಾಗಿದೆ, ಈ ದೊಡ್ಡ ಬೆಕ್ಕುಗಳು ಆಹಾರ ಸರಪಳಿಯ ಮೇಲ್ಭಾಗದಲ್ಲಿ ಕೂರುವುದರಿಂದ ಮತ್ತು ಅವುಗಳ ವೃದ್ಧಿಸುತ್ತಿರುವ ಸಂಖ್ಯೆ ಇಡೀ ಪರಿಸರ ವ್ಯವಸ್ಥೆಯ ಯೋಗಕ್ಷೇಮವನ್ನು ತೋರಿಸುತ್ತದೆ."**

**–ಪ್ರಕಾಶ್ ಜಾವಡೇಕರ್,**
ಪರಿಸರ, ಅರಣ್ಯ ಮತ್ತು
ಹವಾಮಾನ ಬದಲಾವಣೆ ಖಾತೆ ಸಚಿವರು



### ಮಾನವ–ವನ್ಯಜೀವಿ ಸಂಘರ್ಷದ ನಿರ್ವಹಣೆ

ವನ್ಯಮೃಗ ಕುರಿತ ರಾಷ್ಟ್ರೀಯ ಮಂಡಳಿಯ ಸ್ಥಾಯಿ ಸಮಿತಿ, 2021ರ ಜನವರಿ 5ರಂದು, ದೇಶದಲ್ಲಿ ಮಾನವ–ವನ್ಯಮೃಗ ಸಂಘರ್ಷ ನಿರ್ವಹಣೆ ಕುರಿತ ಸಲಹೆಗಳನ್ನು ಅನುಮೋದಿಸಿದೆ. ಮಾನವ–ವನ್ಯಜೀವಿನಗಳ ನಡುವಿನ ಸಂಘರ್ಷದ ಪರಿಸ್ಥಿತಿಗಳ ನಿರ್ವಹಣೆಗಾಗಿ ಇದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬಹಳ ಮುಖ್ಯವಾದ ಸಲಹೆಗಳನ್ನು ನೀಡಿದೆ.

### ಚೇತರಿಕೆ ಕಾರ್ಯಕ್ರಮದ ಅಡಿಯಲ್ಲಿ 22 ಅಳಿವಿನಂಚಿನ ಪ್ರಮುಖ ಪ್ರಭೇದಗಳು

ತೀರಾ ಅಳಿವಿನಂಚಿನಲ್ಲಿರುವ ಪ್ರಭೇದಗಳ ಸಂರಕ್ಷಣೆಗಾಗಿ ಸರ್ಕಾರ ಚೇತರಿಕೆ ಕಾರ್ಯಕ್ರಮವನ್ನು ನಡೆಸುತ್ತಿದೆ. 2021ರ ಜನವರಿಯಲ್ಲಿ ಮಧ್ಯಮ ಗಾತ್ರದ ಕಾಡುಬೆಕ್ಕು–ಕ್ಯಾರಕಲ್ ಅನ್ನು ವಿಮರ್ಶಾತ್ಮಕವಾಗಿ ಅಳಿವಿನಂಚಿನಲ್ಲಿರುವ ಪ್ರಭೇದಗಳ ಪಟ್ಟಿಗೆ ಸೇರಿಸಲಾಗಿದೆ. ಇದರೊಂದಿಗೆ, ಈಗ, ಚೇತರಿಕೆ ಕಾರ್ಯಕ್ರಮದಡಿಯಲ್ಲಿ 22 ವನ್ಯಜೀವಿ ಪ್ರಭೇದಗಳಿವೆ. ಇವುಗಳಲ್ಲಿ ಹಿಮ ಚಿರತೆ, ಬಸ್ಟರ್ಡ್ (ಫ್ಲೋರಿಕನ್ ಸೇರಿದಂತೆ), ಡಾಲ್ಫಿನ್, ಹಂಗುಲ್, ನೀಲಗಿರಿ ತಹರ್, ಕಡಲಾಮೆಗಳು, ಡುಗಾಂಗ್ಸ್, ತಿನ್ನಬಹುದಾದ ನೆಸ್ಟ್ ಸ್ವಿಫ್ಲೆಟ್, ಏಷ್ಯಾದ ಕಾಡುಕೋಣ, ನಿಕೋಬಾರ್ ಮೆಗಾಪೋಡ್, ಮಣಿಪುರ ಬ್ರೋ–ಆಂಟಲೆರ್ಡ್ ಜಿಂಕೆ, ರಣಹದ್ದುಗಳು, ಮಲಬಾರ್ ಸಿವೆಟ್, ಒಂದು ಕೊಂಬಿನ ಖಡ್ಗಮೃಗ, ಏಷಿಯಾದ ಸಿಂಹ, ಸ್ವಾಂಪ್ ಜಿಂಕೆ, ಜೆರ್ಡಾನ್ಸ್ ಕೋರ್ಸರ್, ನಾರ್ದರ್ನ್ ರಿವರ್ ಟೆರ್ರಾಪಿನ್, ಕ್ಲೌಡೆಡ್ ಚಿರತೆ, ಅರೇಬಿಯನ್ ಸೀ ಹಂಪ್‌ಬ್ಯಾಕ್ ತಿಮಿಂಗಿಲ ಮತ್ತು ಕೆಂಪು ಪಾಂಡಾ ಸೇರಿವೆ.

### ಉತ್ತಮ ನಿರ್ವಹಣೆಯ ಸಂರಕ್ಷಿತ ಪ್ರದೇಶಗಳನ್ನು ಶ್ರೇಣೀಕರಿಸಿ, ಪ್ರಶಸ್ತಿ ನೀಡಲಿರುವ ಸರ್ಕಾರ

2021ರಿಂದ ಮೊದಲ್ಗೊಂಡು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ದೇಶದ 10 ಅತ್ಯುತ್ತಮ ರಾಷ್ಟ್ರೀಯ ಉದ್ಯಾನಗಳು, 5 ಕರಾವಳಿ ಮತ್ತು ಸಾಗರ ಉದ್ಯಾನಗಳು ಮತ್ತು 5 ಅತ್ಯುತ್ತಮ ಮೃಗಾಲಯಗಳನ್ನು ಶ್ರೇಣೀಕರಿಸಿ ಪ್ರಶಸ್ತಿ ನೀಡಲಿದೆ. ಸಚಿವಾಲಯವು ದೇಶದಲ್ಲಿನ 146 ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯಮೃಗ ಧಾಮಗಳ ನಿರ್ವಹಣಾ ದಕ್ಷತೆ ಮೌಲ್ಯಮಾಪನ (ಎಂಇಇ) ವನ್ನೂ ಬಿಡುಗಡೆ ಮಾಡಿದೆ.

### ಸಂರಕ್ಷಿತ ಪ್ರದೇಶ ಹೆಚ್ಚಳ

ದೇಶದ ಅರಣ್ಯವ್ಯಾಪ್ತಿ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಸಂರಕ್ಷಿತ ಪ್ರದೇಶದಲ್ಲೂ ಹೆಚ್ಚಳವಾಗಿದೆ. 2014ರಲ್ಲಿ 692 ಸಂರಕ್ಷಿತ ಪ್ರದೇಶಗಳಿದ್ದವು, ಇದನ್ನು 2019ರಲ್ಲಿ 860ಕ್ಕೆ ಹೆಚ್ಚಿಸಲಾಗಿದೆ. ಸಮುದಾಯ ಮೀಸಲು ಅರಣ್ಯಗಳು 2014ರಲ್ಲಿದ್ದ 43ರಿಂದ 2019ರಲ್ಲಿ 100ಕ್ಕಿಂತ ಹೆಚ್ಚಾಗಿವೆ.

## ವನ್ಯಮೃಗಗಳ ಸಂರಕ್ಷಣೆಗೆ ಇತರ ಉಪಕ್ರಮಗಳು

**ಭಾರತೀಯ ಘೇಂಡಾಮೃಗ ವಿಷನ್ (ಐಆರ್‌ವಿ) 2020 ಕಾರ್ಯಕ್ರಮ:** ಪ್ರಸ್ತುತ ಇರುವ ಖಡ್ಗಮೃಗದ ಸಂಖ್ಯೆಯನ್ನು ರಕ್ಷಿಸಲು ಮತ್ತು ಕಾರ್ಯಕ್ರಮದ ಮೂಲಕ ಪ್ರಭೇದದ ವಿತರಣೆಯನ್ನು ಹೆಚ್ಚಿಸಲು ಪ್ರಯತ್ನಗಳು ನಡೆಯುತ್ತಿವೆ. ಪ್ರಸ್ತುತ, ದೊಡ್ಡ ಒಂದು ಕೊಂಬಿನ ಖಡ್ಗಮೃಗದ ಒಟ್ಟು ಸಂಖ್ಯೆಯ ಶೇಕಡಾ 75 ರಷ್ಟು ಅಸ್ಸಾಂ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಕಂಡುಬರುತ್ತದೆ.

**ಪ್ರಾಜೆಕ್ಟ್ ಡಾಲ್ಫಿನ್:** ನದಿ ಮತ್ತು ಸಾಗರ ಡಾಲ್ಫಿನ್‌ಗಳನ್ನು ಸಂರಕ್ಷಿಸಲು ಇದನ್ನು 2020ರಲ್ಲಿ ಘೋಷಿಸಲಾಯಿತು. ಸರ್ಕಾರ ನದಿಯ ಡಾಲ್ಫಿನ್‌ಗಳನ್ನು ರಾಷ್ಟ್ರೀಯ ಜಲಚರ ಪ್ರಾಣಿ ಎಂದು ಘೋಷಿಸಿದೆ. ನದಿ ಡಾಲ್ಫಿನ್‌ಗಳ ಬಗ್ಗೆ ನಡೆಸಲಾದ ಅಧ್ಯಯನಗಳ ರೀತ್ಯ, ಡಾಲ್ಫಿನ್‌ಗಳ ಸಂಖ್ಯೆ ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಮುಖ್ಯವಾಹಿನಿಗಳಲ್ಲಿ ಸ್ಥಿರವಾಗಿರುವುದು ತಿಳಿದುಬಂದಿದೆ, ಆದರೆ ಉಪ ನದಿಗಳಲ್ಲಿ ಇವುಗಳ ಸಂಖ್ಯೆ ಇಳಿಮುಖವಾಗಿದೆ. ನದಿ ಡಾಲ್ಫಿನ್‌ಗಳ ಸಂರಕ್ಷಣೆ, ಅಭಿವೃದ್ಧಿಯ ಕ್ರಿಯಾ ಯೋಜನೆಯಡಿ, ಗಂಗಾ ನದಿಯಲ್ಲಿ ಗಂಗಾ ನದಿ ಡಾಲ್ಫಿನ್‌ಗಳ ಮಹತ್ವದ ವಾಸಸ್ಥಾನಗಳನ್ನು ಸಂರಕ್ಷಿತ ಪ್ರದೇಶ ಎಂದು ಅಧಿಸೂಚಿಸಲಾಗಿದೆ.

**ರಾಷ್ಟ್ರೀಯ ಸಾಗರ ಆಮೆ ಕ್ರಿಯಾ ಯೋಜನೆ:** ಭಾರತದಲ್ಲಿ ಕಡಲಾಮೆಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಸರ್ಕಾರ 'ರಾಷ್ಟ್ರೀಯ ಸಾಗರ ಆಮೆ ಕ್ರಿಯಾ ಯೋಜನೆ' ಯನ್ನು 2021ರ ಜನವರಿಯಲ್ಲಿ ಆರಂಭಿಸಿದೆ. ಈ ಕ್ರಿಯಾ ಯೋಜನೆಯ ಹಿಂದಿನ ಉದ್ದೇಶ, ಕಡಲಾಮೆ ಮತ್ತು ಪೂರಕ ಪ್ರಭೇದಗಳಿಗೆ ಸಂಯೋಜಿತ ಮತ್ತು ಕಾರ್ಯಸಾಧ್ಯ ವ್ಯವಸ್ಥೆಯ ಮೂಲಕ ಆರೋಗ್ಯಪೂರ್ಣ ಮತ್ತು ಸೂಕ್ತ ಪರಿಸರ ವ್ಯವಸ್ಥೆ ಕಲ್ಪಿಸುವುದಾಗಿದೆ.

**ಹಿಮ ಚಿರತೆ ಯೋಜನೆ:** ಭಾರತ ಹಿಮ ಚಿರತೆ ಮತ್ತು ಅವುಗಳ ವಾಸಸ್ಥಾನವನ್ನು ಸಂರಕ್ಷಿಸುತ್ತಿದೆ. ಸರ್ಕಾರ ಹಿಮ ಚಿರತೆ ವಾಸಸ್ಥಾನ ಸಂರಕ್ಷಣೆಗಾಗಿ ಇರುನೆಲೆ ಪುನರ್‌ಸ್ಥಾಪನೆ ಮತ್ತು ಪಾಲ್ಗೊಳ್ಳುವಿಕೆಯ ಭೂರಮೆ ಆಧಾರಿತ ನಿರ್ವಹಣಾ ಯೋಜನೆಗಳನ್ನು ಜಾರಿಗೆ ತರಲು ಬದ್ಧವಾಗಿದೆ. ಹಿಮ ಚಿರತೆ ಮತ್ತು ಅದರ ವಾಸಸ್ಥಾನವನ್ನು ರಕ್ಷಿಸುವುದು ಕೆಳದಂಡೆಯ ಲಕ್ಷಾಂತರ ಜನರಿಗೆ ಬೆಂಬಲ ನೀಡುವ, ಹಿಮಾಲಯದ ಪ್ರಮುಖ ನದಿಗಳ ರಕ್ಷಣೆಯನ್ನೂ ಖಾತ್ರಿಪಡಿಸುತ್ತದೆ. ಹಿಮ ಚಿರತೆಯನ್ನು ಎತ್ತರ ಪ್ರದೇಶ ಹಿಮಾಲಯದ ಪ್ರಮುಖ ಪ್ರಭೇದವೆಂದು ಸರ್ಕಾರ ಗುರುತಿಸಿದೆ.



**ಆನೆ ಯೋಜನೆ:** 2017ರ ಆನೆ ಯೋಜನೆಯ ಗಣತಿಯ ರೀತ್ಯ, ಭಾರತವು ಅತಿ ಹೆಚ್ಚಿನ ಸಂಖ್ಯೆಯ ಏಷ್ಯಾದ ಕಾಡಾನೆಗಳನ್ನು ಹೊಂದಿದ್ದು, ಅದು ಸುಮಾರು 29,964 ಆಗಿದೆ. ಭಾರತವು ಜಾಗತಿಕ ಏಷ್ಯಾ ಆನೆಗಳ ಸಂಖ್ಯೆಯ ಶೇ.60ಕ್ಕೂ ಹೆಚ್ಚು ಆನೆಗಳಿಗೆ ಬೆಂಬಲವಾಗಿದೆ. ಭಾರತದಲ್ಲಿ ಸುಮಾರು 2700 ಸಾಕಾನೆಗಳಿವೆ. ಸರ್ಕಾರ ಭಾರತೀಯ ಆನೆಗಳನ್ನು ರಾಷ್ಟ್ರೀಯ ಪಾರಂಪರಿಕ ಪ್ರಾಣಿ ಎಂದು ಘೋಷಿಸಿದೆ.

**ರಣಹದ್ದುಗಳ ಸಂರಕ್ಷಣೆಗೆ ಕ್ರಿಯಾ ಯೋಜನೆ 2020–25:** ಭಾರತದಲ್ಲಿ 9 ಪ್ರಭೇದದ ವನ್ಯ ರಣಹದ್ದುಗಳಿವೆ. ಈ ಮೂರು ಜಾತಿಯ ಅಂದರೆ ಬಿಳಿಯ ಬೆನ್ನಿನ ರಣಹದ್ದು, ತೆಳು ಕೊಕ್ಕಿನ ರಣಹದ್ದು ಮತ್ತು ಉದ್ದ ಕೊಕ್ಕಿನ ರಣಹದ್ದುಗಳು ಗಣನೀಯವಾಗಿ ಇಳಿಮುಖವಾಗಿವೆ. ಈ ಎಲ್ಲ ಮೂರು ರಣಹದ್ದು ಪ್ರಭೇದಗಳನ್ನು 2000ದಲ್ಲಿ 'ಅತ್ಯಂತ ಅಳಿವಿನಂಚಿನ' ಪ್ರಭೇದ ಎಂದು ವಿಶ್ವ ಸಂರಕ್ಷಣಾ ಒಕ್ಕೂಟ ಐಯುಸಿಎನ್ ಪಟ್ಟಿ ಮಾಡಿದೆ. ರಣಹದ್ದುಗಳ ಸಂತತಿ ಉಳಿಸಲು ಹೊಸ ಕ್ರಿಯಾ ಯೋಜನೆ ರೂಪಿಸಲಾಗುತ್ತಿದೆ. ■

# ಲಸಿಕೆ ಮೈತ್ರಿ: ಜಗತ್ತಿಗೆ ಭಾರತದ ಜೀವರಕ್ಷಣೆಯ ಉಡುಗೊರೆ

ಮೈತ್ರಿಯ ಮತ್ತು ನಾಯಕತ್ವದ ನಿಜವಾದ ಪರೀಕ್ಷೆ ಆಗುವುದು ಸಂಕಷ್ಟದ ಸಮಯದಲ್ಲಿ. ಭಾರತ ಕೌಶಲಪೂರ್ಣವಾಗಿ ಕೊರೊನಾ ಸಾಂಕ್ರಾಮಿಕದ ವಿರುದ್ಧ ಹೋರಾಟ ನಡೆಸಿದ್ದಷ್ಟೇ ಅಲ್ಲ, ಜೊತೆಗೆ 20 ರಾಷ್ಟ್ರಗಳಿಗೆ ಭಾರತದಲ್ಲಿ ತಯಾರಿಸಲಾದ ಲಸಿಕೆಗಳ ನೆರವನ್ನೂ ವಿಸ್ತರಿಸಿದೆ.

ಕೊರೊನಾ ಸಾಂಕ್ರಾಮಿಕದ ಆರಂಭದಲ್ಲಿ, ಭಾರತ ಇದನ್ನು ಸೂಕ್ತವಾಗಿ ನಿರ್ವಹಿಸುವುದಿಲ್ಲ ಎಂಬ ಕಳವಳ ವ್ಯಾಪಕವಾಗಿತ್ತು, ಇದು ಭಾರತಕ್ಕಷ್ಟೇ ಅಲ್ಲ, ಇಡೀ ಮಾನವ ಕುಲಕ್ಕೇ ದೊಡ್ಡ ಸಂಕಷ್ಟ ತರುತ್ತದೆ. ಪ್ರಾಣ ಹಾನಿ ಊಹಿಸಲೂ ಅಸಾಧ್ಯ. ಕಣ್ಣಿಗೆ ಕಾಣದ ಶತ್ರು ಏನೆಲ್ಲಾ ಮಾಡಬಹುದೆಂಬ ಸೂಚನೆ, ಯಾರಿಗೂ ಇರಲಿಲ್ಲ. ಸೋಂಕಿನ ಹರಡುವಿಕೆಯನ್ನು ಹೇಗೆ ತಡೆಯುವುದು ಮತ್ತು ತಮ್ಮ ದೇಶದ ನಾಗರಿಕರನ್ನು ಹೇಗೆ ರಕ್ಷಿಸುವುದು ಎಂಬುದರ ಕುರಿತು ಯಾರಿಗೂ ಯಾವುದೇ ಶಿಷ್ಟಾಚಾರ ಇರಲಿಲ್ಲ. ಆದರೆ ಕಠಿಣ ನಿರ್ಧಾರಗಳು, ಸರಿಯಾದ ಆಲೋಚನೆ ಮತ್ತು ಸನ್ನದ್ಧತೆಯಿಂದ ಭಾರತವು ಅದನ್ನು ಮಾಡುವಲ್ಲಿ ಯಶಸ್ವಿಯಾಯಿತು ಮತ್ತು ಇಂದು ಅದು ವಿಶ್ವದ 100ಕ್ಕೂ ಹೆಚ್ಚು ದೇಶಗಳಿಗೆ ಆಶಾಕಿರಣವಾಗಿ ಹೊರಹೊಮ್ಮಿದೆ.

ಇತ್ತೀಚೆಗೆ ರಾಜ್ಯಸಭೆಯಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಹೀಗೆ ಹೇಳಿದರು: "ಇಂದು, ಕೊರೊನಾ ಭಾರತಕ್ಕೆ ತನ್ನ ವಿಶ್ವದೊಂದಿಗಿನ ಬಾಂಧವ್ಯಕ್ಕೆ ಹೊಸ ಅರ್ಥವನ್ನು ನೀಡಿದೆ. ಆರಂಭದಲ್ಲಿ ಯಾವ ಔಷಧ ಕೆಲಸ ಮಾಡುತ್ತದೆ ಎಂದು ತಿಳಿಯದೇ ಇದ್ದಾಗ ಮತ್ತು ಅದಕ್ಕೆ ಯಾವುದೇ ಲಸಿಕೆಯೂ ಇಲ್ಲದಿದ್ದಾಗ, ವಿಶ್ವದ ಗಮನ ಭಾರತದ ಔಷಧದತ್ತ ನೆಟ್ಟಿತ್ತು. ಭಾರತ ವಿಶ್ವದ ಔಷಧಾಲಯವಾಗಿ ಹೊರಹೊಮ್ಮಿತ್ತು. ನಮ್ಮ ದೇಶ 150 ದೇಶಗಳಿಗೆ ಆ ಸಮಯದಲ್ಲಿ ಔಷಧಗಳನ್ನು ಪೂರೈಸಿತು. ನಾವು ಮಾನವ ಕುಲವನ್ನು ರಕ್ಷಿಸುವ ನಿಟ್ಟಿನಲ್ಲಿ ಹಿಂದೆ ಬೀಳಲಿಲ್ಲ. ಅಷ್ಟೇ ಅಲ್ಲದೆ, ವಿಶ್ವ ಭಾರತೀಯ ಲಸಿಕೆಗಳನ್ನು ಹೆಮ್ಮೆಯಿಂದ ಸ್ವೀಕರಿಸುತ್ತಿರುವುದಾಗಿ ಹೇಳುತ್ತಿವೆ."

### ಭಾರತದಲ್ಲಿ ವಿಶ್ವದ ಅತಿ ದೊಡ್ಡ ಲಸಿಕಾ ಅಭಿಯಾನ

ಭಾರತದಲ್ಲಿ ತ್ವರಿತವಾಗಿ ಕೊರೊನಾ ಪ್ರಕರಣಗಳ ಇಳಿಕೆ ಕಂಡಿದೆ, ಇದನ್ನು ದೇಶ ಸಾಂಕ್ರಾಮಿಕವನ್ನು ಹಿಂದೂಡಿದೆ ಎಂದು ಹೇಳಬಹುದು. ಪ್ರಸ್ತುತ, ವಿಶ್ವದ ಅತಿ ದೊಡ್ಡ ಲಸಿಕಾ ಅಭಿಯಾನ ಭಾರತದಲ್ಲಿ ನಡೆಯುತ್ತಿದೆ. 2021ರ ಫೆಬ್ರವರಿ 19ರಂದು ಕೋವಿಡ್-19 ವಿರುದ್ಧ ಒಟ್ಟು ಲಸಿಕೆ ಪಡೆದವರ ಸಂಖ್ಯೆ 10 ದಶಲಕ್ಷ ದಾಟಿತ್ತು. ಭಾರತದಲ್ಲಿ ಪ್ರತಿ 10 ಲಕ್ಷಕ್ಕೆ ಪ್ರತಿಯಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ (104) ವಿಶ್ವದಲ್ಲಿಯೇ ಅತ್ಯಂತ ಕಡಿಮೆ ಇದೆ. ರಾಷ್ಟ್ರೀಯ ಚೇತರಿಕೆ ದರ (ಶೇ. 97.26) ಜಾಗತಿಕವಾಗಿ ಅತಿ ಹೆಚ್ಚಿನ ಸಂಖ್ಯೆಯಾಗಿ ಮುಂದುವರಿದಿದೆ.




### ದವಾಯಿ ಭೀ, ಕಡಾಯಿ ಭೀ

(2021ರ ಫೆಬ್ರವರಿ 18ರವರೆಗಿನ ಅಂಕಿಅಂಶ)

**1,01,88,007** ಒಟ್ಟು ಲಸಿಕೆ

**20.94** ಕೋಟಿ ನಡೆಸಲಾದ ಪರೀಕ್ಷೆ

**1,39,542** ಸಕ್ರಿಯ ಪ್ರಕರಣಗಳು

**1,06,67,741** ಗುಣಮುಖ ಪ್ರಕರಣಗಳು

**97.30%** ಚೇತರಿಕೆ ದರ

**ಮರಣ ದರ (ಶೇ.1.42) ಒಟ್ಟು ಸಾವು – 1,56,111**

### ಲಸಿಕೆ ಮಾಹಿತಿ ಒದಗಿಸಲಿರುವ ಆರೋಗ್ಯ ಸೇತು ಆಪ್

ಆರೋಗ್ಯ ಸೇತು ಆಪ್ ಆರೋಗ್ಯ ವಲಯದಲ್ಲಿ ವಿಶ್ವದಲ್ಲಿ ಅತಿ ಹೆಚ್ಚು ಡೌನ್‌ಲೋಡ್ ಆದ ಆಪ್ ಆಗಿದೆ. ಈಗ ಇದನ್ನು ಕೋ-ವಿನ್ ಆಪ್ ದತ್ತಾಂಶಕ್ಕೆ ಸಂಪರ್ಕಿಸಲಾಗಿದೆ. ಈ ಬೆಳವಣಿಗೆಯ ಫಲವಾಗಿ, ಬಳಕೆದಾರರು ದೇಶದಲ್ಲಿ ನಡೆದಿರುವ ಲಸಿಕೆ ಅಭಿಯಾನದ ಬಗ್ಗೆ ಮಾಹಿತಿಯನ್ನೂ ಪಡೆದುಕೊಳ್ಳಬಹುದು. ಇದರ ಜೊತೆಗೆ ಅವರು ಈ ಆಪ್ ಮೂಲಕ ಲಸಿಕೆಯ ಪ್ರಮಾಣೀಕರಣವನ್ನೂ ಪಡೆಯಲಿದ್ದಾರೆ.




### ವಿಶ್ವಕ್ಕೆ ಸ್ನೇಹ ಹಸ್ತದ ವಿಸ್ತರಣೆ

ನೇಪಾಳ, ಬಾಂಗ್ಲಾದೇಶ, ಭೂತಾನ್, ಮಾಲ್ಡೀವ್ಸ್, ಸೆಶೆಲ್ಸ್, ಮ್ಯಾನ್ಮಾರ್ ಮತ್ತು ಮಾರಿಷಸ್ ನಂತರ ಮೇಡ್ ಇನ್ ಇಂಡಿಯಾ ಲಸಿಕೆಯನ್ನು ಈಗ ಬಾರ್ಬಡಾಸ್ ಮತ್ತು ಡೊಮಿನಿಕಾಗಳಿಗೂ ರವಾನಿಸಲಾಗಿದೆ. ಜೊತೆಗೆ ಲಸಿಕೆಯನ್ನು ಬ್ರೆಜಿಲ್, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ ಮತ್ತು ಮೊರಾಕ್ಕೊಗೂ ಕಳುಹಿಸಲಾಗಿದೆ. ಈವರೆಗೆ ಸುಮಾರು 20 ರಾಷ್ಟ್ರಗಳು 2.29 ಕೋಟಿ ಕೊರೊನಾ ಲಸಿಕೆ ಪಡೆದುಕೊಂಡಿವೆ. ■



# ಆರೋಗ್ಯವಂತ ಭಾರತದೆಡೆಗೆ

**ದೇಶದ ಪ್ರಗತಿಗೆ ಆರೋಗ್ಯವಂತ ನಾಗರಿಕರೇ ನಿಜ ಅರ್ಥದಲ್ಲಿ ಆಸ್ತಿಯಾಗುತ್ತಾರೆ. ಸಾಂಕ್ರಾಮಿಕದ ವಿರುದ್ಧ ವಿಶ್ವ ಹೋರಾಡುತ್ತಿರುವಾಗ ಸಮುದಾಯದ ಆರೋಗ್ಯ ಅತ್ಯಂತ ನಿರ್ಣಾಯಕವಾಗುತ್ತದೆ. ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು 2021-22ನೇ ಸಾಲಿನ ಬಜೆಟ್‌ನಲ್ಲಿ ಕೇವಲ ದೂರದರ್ಶಿತ್ವವಷ್ಟೇ ಅಲ್ಲ ಕ್ರಾಂತಿಕಾರಿಯಾಗುವಂತೆ ಆರೋಗ್ಯ ವಲಯಕ್ಕೆ ತೀಕ್ಷ್ಣ ಗಮನ ಹರಿಸಲಾಗಿದೆ.**

ಜನರ ಆರೋಗ್ಯದಲ್ಲಿ ಹೂಡಿಕೆ ಮಾಡಲು ದೃಢ ನಿಲುವಿನ ಅಗತ್ಯವಿರುತ್ತದೆ ಮತ್ತು ಸರ್ಕಾರದ ಧೈರ್ಯವನ್ನು ತೋರಿಸುತ್ತದೆ. ಕೇಂದ್ರ ಬಜೆಟ್ 2021–22 ಅಂತಹ ಒಂದು ಬಜೆಟ್ ಆಗಿದ್ದು, ಹಿಂದಿನ ಬಜೆಟ್‌ಗಳಿಗೆ ಹೋಲಿಸಿದರೆ ಆರೋಗ್ಯ ಮತ್ತು ಸ್ವಾಸ್ಥ್ಯ ಕ್ಷೇತ್ರಕ್ಕೆ ಮಾಡಲಾಗುವ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಆರೋಗ್ಯ ಮತ್ತು ಯೋಗಕ್ಷೇಮವನ್ನು ಬಜೆಟ್‌ನ ಆರು ಮೂಲಭೂತ ಸ್ತಂಭಗಳಲ್ಲಿ ಒಂದು ಎಂದು ಅಂಗೀಕರಿಸಲಾಗಿದೆ. ಆರೋಗ್ಯ ಕ್ಷೇತ್ರಕ್ಕೆ ಒಟ್ಟು ಹಂಚಿಕೆಯನ್ನು 2020–21ರಲ್ಲಿದ್ದ 94,452 ಕೋಟಿ ರೂ.ಗಳಿಂದ 2021–22ರಲ್ಲಿ 2,23,846 ಕೋಟಿ ರೂ.ಗೆ ಹೆಚ್ಚಿಸಲಾಗಿದೆ.

ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಬಜೆಟ್ ಹಂಚಿಕೆಯಲ್ಲಿನ ಭಾರಿ ಹೆಚ್ಚಳವು ಆರೋಗ್ಯ ಕ್ಷೇತ್ರದಲ್ಲಿ ಬಜೆಟ್ ಹಂಚಿಕೆ ಮತ್ತು ವೆಚ್ಚದಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಪ್ರವೃತ್ತಿಯನ್ನು ದೃಢವಾಗಿ ಬಿಂಬಿಸುತ್ತದೆ. 2014 ರಿಂದೀಚೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹಲವಾರು ಜನಕೇಂದ್ರಿತ ಉಪಕ್ರಮಗಳನ್ನು ಪ್ರಾರಂಭಿಸಿದ್ದಾರೆ ಮತ್ತು ಇದು ಸಮಗ್ರ ಆರೋಗ್ಯ ಮತ್ತು ಕ್ಷೇಮದತ್ತ ಸರ್ಕಾರದ ದೃಷ್ಟಿ ಮತ್ತು ಬದ್ಧತೆಯನ್ನು ನಿರೂಪಿಸಿದೆ. ಬಲವಾದ ಬಜೆಟ್ ಬೆಂಬಲ, ನಾವಿನ್ಯಪೂರ್ಣ ಯೋಜನೆಗಳು, ಆರೋಗ್ಯ ಸಂಶೋಧನೆ ಮತ್ತು ಆರೋಗ್ಯ ವಿತರಣೆಯ ವ್ಯವಸ್ಥೆಗಳನ್ನು ಬಲಪಡಿಸುವುದರೊಂದಿಗೆ, ಭಾರತವು ಸಾರ್ವಜನಿಕ ಆರೋಗ್ಯದಲ್ಲಿ ವಿಶ್ವ ನಾಯಕನಾಗಿ ಹೊರಹೊಮ್ಮಲಿದೆ, ಇತರ ದೇಶಗಳಿಗೂ ಅನುಕರಣೀಯ ಉದಾಹರಣೆಗಳನ್ನು ನೀಡುತ್ತದೆ.

## ಹೊಸತು ಏನಿದೆ?

ಮುಂದಿನ 6 ವರ್ಷಗಳಿಗಾಗಿ 64,180 ಕೋಟಿ ರೂ. ಹಂಚಿಕೆಯೊಂದಿಗೆ, ಹೊಸದಾಗಿ ಪ್ರಕಟಿಸಲಾಗಿರುವ ಕೇಂದ್ರ ಪ್ರಾಯೋಜಿತ ಪ್ರಧಾನಮಂತ್ರಿ ಆತ್ಮ ನಿರ್ಭರ ಸ್ವಾಸ್ಥ್ಯ ಭಾರತ್ ಯೋಜನೆ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಹಂತದ ಆರೋಗ್ಯ ಆರೈಕೆ ಸಾಮರ್ಥ್ಯ ಅಭಿವೃದ್ಧಿಪಡಿಸಲಿದ್ದು, ಆರೋಗ್ಯ ಆರೈಕೆ ವ್ಯವಸ್ಥೆಯ ವಿತರಣೆಯನ್ನು ಬಲಪಡಿಸಲಿದೆ, ಹೊಸ ಮತ್ತು ಹೊರಹೊಮ್ಮುವ ಕಾಯಿಲೆಗಳ ಪತ್ತೆ ಮತ್ತು ಗುಣಪಡಿಸಲು ಸಂಸ್ಥೆಗಳನ್ನು ಸ್ಥಾಪಿಸಲಿದೆ ಮತ್ತು ಹಾಲಿ ರಾಷ್ಟ್ರೀಯ ಆರೋಗ್ಯ ಅಭಿಯಾನವನ್ನು ಸ್ವತಂತ್ರವಾಗಿ ಬಲವರ್ಧನೆ ಮಾಡಲಿವೆ. ಪ್ರಧಾನಮಂತ್ರಿ ಆತ್ಮನಿರ್ಭರ ಸ್ವಾಸ್ಥ್ಯ ಭಾರತ ಯೋಜನೆ ಭಾರತದ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯಕ್ಕೆ ಅದ್ಭುತ ಚೈತನ್ಯ ನೀಡಲಿದೆ. ರೋಗ ನಿಯಂತ್ರಣ ಕುರಿತ ರಾಷ್ಟ್ರೀಯ ಕೇಂದ್ರ ಈಗ 5 ಪ್ರಾದೇಶಿಕ ಶಾಖೆಗಳನ್ನು ಒಳಗೊಂಡಿದೆ ಮತ್ತು 20 ಮಹಾನಗರ ಆರೋಗ್ಯ ನಿಗಾ ಘಟಕ ಒಲಗೊಂಡಿದೆ. ಎಲ್ಲಾ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳನ್ನು ಸಂಪರ್ಕಿಸಲು ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಿಗೆ ಸಮಗ್ರ ಆರೋಗ್ಯ ಮಾಹಿತಿ ಪೋರ್ಟಲ್ ವಿಸ್ತರಿಸುವ ಜೊತೆಗೆ, 17 ಹೊಸ ಸಾರ್ವಜನಿಕ ಆರೋಗ್ಯ ಘಟಕಗಳನ್ನು ಕಾರ್ಯಗತಗೊಳಿಸಲಾಗುತ್ತದೆ.

### ಯೋಜನೆಯ ಮುಖ್ಯ ಅಂಶಗಳು:

- 17,788 ಗ್ರಾಮೀಣ ಮತ್ತು 11,024 ನಗರ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಬೆಂಬಲ
- 11 ರಾಜ್ಯಗಳ ಎಲ್ಲ ಜಿಲ್ಲೆಗಳು ಮತ್ತು 3,382 ವಿಭಾಗಗಳ ಸಾರ್ವಜನಿಕ ಆರೋಗ್ಯ ಘಟಕಗಳಲ್ಲಿ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳ ಸ್ಥಾಪನೆ
- 602 ಜಿಲ್ಲೆಗಳು ಮತ್ತು 12 ಕೇಂದ್ರೀಯ ಸಂಸ್ಥೆಗಳಲ್ಲಿ ತುರ್ತು ಆರೈಕೆ ಆಸ್ಪತ್ರೆ ವಿಭಾಗ ಸ್ಥಾಪನೆ
- ರೋಗ ನಿಯಂತ್ರಣ ಕುರಿತ ರಾಷ್ಟ್ರೀಯ ಕೇಂದ್ರದ ಬಲವರ್ಧನೆ

| ಸಚಿವಾಲಯ/ಇಲಾಖೆ | ಚಾಲ್ತಿಯ 2019-20 (ರೂ. ಕೋಟಿಗಳಲ್ಲಿ) | ಬಜೆಟ್ ಅಂದಾಜು 2020-21 (ರೂ. ಕೋಟಿಗಳಲ್ಲಿ) | ಬಜೆಟ್ ಅಂದಾಜು 2021-22 (ರೂ. ಕೋಟಿಗಳಲ್ಲಿ) |
|---|---|---|---|
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 62,397 | 65,012 | 71,269 |
| ಆರೋಗ್ಯ ಸಂಶೋಧನೆ ಇಲಾಖೆ | 1,934 | 2,100 | 2,663 |
| ಆಯುಷ್ ಸಚಿವಾಲಯ | 1,784 | 2,122 | 2,970 |
| ಕೋವಿಡ್ ಸಂಬಂಧದ ವಿಶೇಷ ಅವಕಾಶಗಳು | | | |
| ಲಸಿಕೆ | | | 35,000 |
| ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | 18,264 | 21,518 | 60,030 |
| ಪೌಷ್ಟಿಕತೆ | 1,880 | 3,700 | 2,700 |
| ನೀರು ಮತ್ತು ನೈರ್ಮಲ್ಯಕ್ಕೆ ಎಫ್.ಸಿ. ಅನುದಾನ | | | 36,022 |
| ಆರೋಗ್ಯಕ್ಕೆ ಎಫ್.ಸಿ. ಅನುದಾನ | | | 13,192 |
| ಒಟ್ಟು | 86,259 | 94,452 | 2,23,846 |



"ಯಾವುದೇ ದೇಶದ ಗಟ್ಟಿಮುಟ್ಟಾದ ಮತ್ತು ತಾಳಿಕೆಯ ಆರೋಗ್ಯ ವ್ಯವಸ್ಥೆಗಳು ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಶ್ರೇಣಿಗಳ ಬಲವಾದ ಆರೋಗ್ಯ ಮೂಲಸೌಕರ್ಯಗಳ ಮೇಲೆ ನಿರ್ಮಿಸಲ್ಪಟ್ಟಿವೆ, ರೋಗಗಳ ಪತ್ತೆ ಮತ್ತು ನಿಗಾ ಸಮಾನ ಪ್ರಬಲ ಸಂಸ್ಥೆಗಳಿಂದ ಬೆಂಬಲಿತವಾಗಿದೆ, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳೊಂದಿಗೆ ಕೈಜೋಡಿಸಿ ವಿಶ್ವ ದರ್ಜೆಯ ಅತ್ಯಾಧುನಿಕ ಸಂಶೋಧನೆಗಳು ನೀತಿಗಳು ಮತ್ತು ಕಾರ್ಯಗಳಿಗೆ ಚಾಲನೆ ನೀಡುವ ಪುರಾವೆಗಳನ್ನು ಒದಗಿಸುತ್ತದೆ."

**ಆರೋಗ್ಯ ಸಚಿವ ಡಾ. ಹರ್ಷವರ್ಧನ್**

## ಭಾರತ ಮತ್ತು ಕೋವಿಡ್-19ಕ್ಕೆ ಅದರ ಸ್ಪಂದನೆ

ಕೊರೊನಾ ವೈರಸ್ ವಿರುದ್ಧದ ಹೋರಾಟ ಮತ್ತು ಕೋವಿಡ್-19 ಲಸಿಕೆಯ ವಿಚಾರದಲ್ಲಿ ಭಾರತ ವಿಶ್ವ ನಾಯಕನಾಗಿ ತನ್ನ ಸ್ಥಾನ ಭದ್ರಪಡಿಸಿಕೊಂಡಿದೆ. ಫೆಬ್ರವರಿ 15ರವರೆಗೆ, ಭಾರತ ಒಟ್ಟು 20.67 ಕೋಟಿ ಪರೀಕ್ಷೆಗಳನ್ನು ನಡೆಸಿದೆ. ಕೋವಿಡ್ ಸೋಂಕಿಗೆ ಒಳಗಾದ 1.09 ಕೋಟಿ ಜನರ ಪೈಕಿ, 1.06 ಕೋಟಿ ಮಂದಿ ಗುಣಮುಖರಾಗಿದ್ದಾರೆ. ಭಾರತ ಈಗ ಕೋವಿಡ್-19 ಪತ್ತೆ ಸಾಧನಗಳನ್ನು ಉತ್ಪಾದಿಸುವಲ್ಲಿ ಸ್ವಾವಲಂಬಿಯಾಗಿದೆ ಮತ್ತು ಹೆಚ್ಚುವರಿ ಉತ್ಪನ್ನವನ್ನು ರಫ್ತು ಮಾಡಲು ಶಕ್ತವಾಗಿದೆ.

**ಕೊರೊನಾ ವೈರಾಣು ಲಸಿಕೆಗೆ 35 ಸಾವಿರ ಕೋಟಿ ರೂ. :** ಬಜೆಟ್‌ನಲ್ಲಿ 35 ಸಾವಿರ ಕೋಟಿ ರೂಪಾಯಿ ಬೆಂಬಲದೊಂದಿಗೆ ಭಾರತದ ಕೋವಿಡ್-19 ವಿರುದ್ಧದ ಹೋರಾಟಕ್ಕೆ ಮತ್ತಷ್ಟು ಬಲ ಬಂದಿದೆ. ಭಾರತದ ಸಾಮರ್ಥ್ಯವು ಅದರ ಉತ್ಪಾದನೆ ಮತ್ತು ಲಸಿಕೆ ನೀಡಿಕೆಯ ವೇಗದಲ್ಲಿ ಗೋಚರಿಸುತ್ತಿದೆ. ಫೆಬ್ರವರಿ 15ರವರೆಗೆ 87 ಲಕ್ಷ ಫಲಾನುಭವಿಗಳಿಗೆ ಲಸಿಕೆ ನೀಡಲಾಗಿದೆ.

**20ಕ್ಕೂ ಅಧಿಕ ಲಸಿಕೆಗಳು ಪ್ರಗತಿಯಲ್ಲಿ:** ಭಾರತವು ಇನ್ನೂ ಕನಿಷ್ಠ 18-20 ಲಸಿಕೆಗಳ ಮೇಲೆ ಕಾರ್ಯ ನಿರ್ವಹಿಸುತ್ತಿದೆ, ಅವು ವಿವಿಧ ಹಂತಗಳಲ್ಲಿವೆ. ಅವುಗಳಲ್ಲಿ ಕೆಲವು ಚಿಕಿತ್ಸಾಲಯ ಪ್ರಯೋಗ ಪೂರ್ವ ಹಂತದಲ್ಲಿದ್ದರೆ, ಕೆಲವು ಚಿಕಿತ್ಸಾಲಯ ಪ್ರಯೋಗದ ಹಂತದಲ್ಲಿವೆ, ಕೆಲವು ಹಂತ 1 ಮತ್ತು ಕೆಲವು 2ನೇ ಮತ್ತು ಮತ್ತೆ ಕೆಲವು 3ನೇ ಹಂತದಲ್ಲಿವೆ ಮತ್ತು ಕೆಲವೇ ತಿಂಗಳುಗಳಲ್ಲಿ ಸಾರ್ವಜನಿಕ ಬಳಕೆಗೆ ಲಭ್ಯವಾಗಲಿವೆ. ಭಾರತ ಹಲವು ರಾಷ್ಟ್ರಗಳಿಗೆ ಲಸಿಕೆ ರಫ್ತು ಮಾಡುತ್ತಿದೆ. ■

# ತನ್ನ ಮಹಾನಾಯಕರಿಗೆ ಸೂಕ್ತ ಮನ್ನಣೆ ನೀಡುತ್ತಿರುವ ಭಾರತ




**ಭಾರತ ತನ್ನ ಸ್ವಾತಂತ್ರ್ಯದ 75ನೇ ವರ್ಷಕ್ಕೆ ಕಾಲಿಡುತ್ತಿರುವಾಗ, ಸ್ವಾತಂತ್ರ್ಯಕ್ಕೆ ಅಪಾರ ಕೊಡುಗೆ ನೀಡಿದ ಮಹಾನುಭಾವರನ್ನು ಸ್ಮರಿಸುವುದು ಅತ್ಯಂತ ಮಹತ್ವಪೂರ್ಣ ಎಂದು ಸರ್ಕಾರ ಭಾವಿಸಿದೆ. ಪ್ರಧಾನಮಂತ್ರಿಯವರು 2021ರ ಫೆಬ್ರವರಿ 16ರಂದು ಉತ್ತರ ಪ್ರದೇಶದ ಬಹ್ರೇಚ್ ಜಿಲ್ಲೆಯ ಚಿತ್ತೌರ ಸರೋವರದ ಅಭಿವೃದ್ಧಿ ಕಾಮಗಾರಿ ಮತ್ತು ಮಹಾರಾಜಾ ಸುಹೇಲ್‌ದೇವ್ ಅವರ ಸ್ಮಾರಕಕ್ಕೆ ಶಂಕುಸ್ಥಾಪನೆ ನೆರವೇರಿಸುವ ಮೂಲಕ, ದೇಶ ಅಂಥ ಒಬ್ಬ ಮಹಾಪುರುಷ ಮಹಾರಾಜಾ ಸುಹೇಲ್‌ದೇವ್‌ರನ್ನು ಸ್ಮರಿಸಿತು.**

ಭಾರತೀಯತೆಯನ್ನು ರಕ್ಷಿಸಲು ಮಹಾರಾಜ ಸುಹೇಲ್‌ದೇವ್ ನೀಡಿದ ಕೊಡುಗೆಯನ್ನು ನಿರ್ಲಕ್ಷಿಸಲಾಗಿದೆ. ಪಠ್ಯಪುಸ್ತಕಗಳಿಂದ ನಿರ್ಲಕ್ಷಿತರಾಗಿದ್ದರೂ ಮಹಾರಾಜ ಸುಹೇಲ್‌ದೇವ್ ಅವರನ್ನು ಅವಧ್, ತಾರೈ ಮತ್ತು ಪೂರ್ವಾಂಚಲ ಜನಪದದ ಮೂಲಕ ಜನರ ಹೃದಯದಲ್ಲಿ ಜೀವಂತವಾಗಿಸಿದೆ.

**ಪ್ರಧಾನ ಮಂತ್ರಿ**
**ನರೇಂದ್ರ ಮೋದಿ**

ಪ್ರಧಾನಮಂತ್ರಿಯವರ ಪೂರ್ಣ ಭಾಷಣ ಆಲಿಸಲು ಕ್ಯುಆರ್. ಕೋಡ್ ಸ್ಕ್ಯಾನ್ ಮಾಡಿ.

ಯಾವುದೇ ಸಂಸ್ಕೃತಿಗೆ ಮತ್ತು ದೇಶಕ್ಕೆ, ತಮ್ಮ ಮಾತೃಭೂಮಿಗಾಗಿ ಎಲ್ಲವನ್ನೂ ತ್ಯಾಗ ಮಾಡಿದಂಥ ಜನರನ್ನು ಸ್ಮರಿಸುವುದು ಮುಖ್ಯವಾಗುತ್ತದೆ. ಭಾರತದ ಅಂತಹ ಒಬ್ಬ ಪುತ್ರ ಮಹಾರಾಜಾ ಸುಹೇಲ್‌ದೇವ್ ಸ್ಮರಣೆಯಾಗಿದೆ, ದೇಶ ತನ್ನ 75ನೇ ಸ್ವಾತಂತ್ರ್ಯದ ವರ್ಷಕ್ಕೆ ಕಾಲಿಡುತ್ತಿರುವಾಗ ಮಹಾರಾಜ ಸುಹೇಲ್‌ದೇವ್‌ರಂತಹ ಚೇತನದ ಕೊಡುಗೆಯನ್ನು ಸ್ಮರಿಸುವುದು ಹೆಚ್ಚು ಮಹತ್ವದ್ದಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮಹಾರಾಜಾ ಸುಹೇಲ್‌ದೇವ್ ಅವರು ಶ್ರಾವಸ್ತಿಯ ರಾಜರಾಗಿದ್ದರು ಮತ್ತು ತಮ್ಮ ಶೌರ್ಯಕ್ಕೆ ಹೆಸರುವಾಸಿಯಾಗಿದ್ದರು. 11ನೇ ಶತಮಾನದಲ್ಲಿ ನಡೆದ ಯುದ್ಧದಲ್ಲಿ ಅವರು ಘಜ್ನಿ ಮೊಹಮ್ಮದ್‌ನ ಸೋದರಳಿಯ ಘಾಜಿ ಸಯ್ಯದ್ ಸಲಾರ್ ಮಸೂದ್‌ನನ್ನು ಕೊಂದು ಹಾಕಿದ್ದರು. ಭಾರತ ಮತ್ತು ಭಾರತೀಯತೆಗಾಗಿ ಯಾರು ಎಲ್ಲವನ್ನೂ ತ್ಯಾಗ ಮಾಡಿದರೂ ಅಂಥ ಜನರಿಗೆ ಇತಿಹಾಸದ ಪುಸ್ತಕಗಳಲ್ಲಿ ಸೂಕ್ತ ಮನ್ನಣೆ ದೊರೆತಿಲ್ಲ. ಭಾರತೀಯ ಇತಿಹಾಸಕಾರರಿಂದ ಭಾರತೀಯ ಇತಿಹಾಸವನ್ನೇ ರೂಪಿಸಿದವರ ವಿರುದ್ಧದ ಈ ಅಪಚಾರ ಮತ್ತು ಅನ್ಯಾಯಗಳನ್ನು ಈಗ ಸರ್ಕಾರವು ಸರಿಪಡಿಸುತ್ತಿದೆ ಎಂದು ಪ್ರಧಾನಮಂತ್ರಿ ಹೇಳಿದರು.

2021ರ ಫೆಬ್ರವರಿ 16 ರಂದು ಮಹಾರಾಜ ಸುಹೇಲ್‌ದೇವ್ ವಾರ್ಷಿಕೋತ್ಸವದಂದು ಪ್ರಧಾನಮಂತ್ರಿಯವರು, ಮಹಾರಾಜ ಸುಹೇಲ್‌ದೇವ್ ಸ್ಮಾರಕ ಮತ್ತು ಬಹ್ರೇಚ್ ಜಿಲ್ಲೆಯ ಚಿತ್ತೌರಾ ಸರೋವರದ ಅಭಿವೃದ್ಧಿ ಕಾರ್ಯಗಳಿಗೆ ಶಿಲಾನ್ಯಾಸ ನೆರವೇರಿಸಿದರು.

# "ಆತ್ಮನಿರ್ಭರತೆಯ ಪರಿವರ್ತನೆ ಎಲ್ಲ ಸ್ವಾತಂತ್ರ್ಯ ಯೋಧರಿಗೆ ಸಲ್ಲುವ ಶ್ರದ್ಧಾಂಜಲಿ'



ಭಾರತ 75ನೇ ಸ್ವಾತಂತ್ರ್ಯ ವರ್ಷಕ್ಕೆ ಕಾಲಿಡುತ್ತಿರುವಾಗ, ಶತಮಾನದ ಸ್ವಾತಂತ್ರ್ಯ ಹೋರಾಟದ ಹೆಗ್ಗುರುತಿನ ಘಟನೆಯಾದ "ಚೌರಿ ಚೌರ" ಶತಮಾನೋತ್ಸವಕ್ಕೂ ಕಾಲಿಡುತ್ತಿದೆ. ಶತಮಾನೋತ್ಸವದ ಕಾರ್ಯಕ್ರಮಗಳನ್ನು ಸ್ಥಳೀಯ ಕಲೆ, ಸಂಸ್ಕೃತಿ ಮತ್ತು ಸ್ವಾವಲಂಬನೆಯೊಂದಿಗೆ ಸಂಪರ್ಕಿಸುವ ಪ್ರಯತ್ನಗಳು ನಡೆದಿವೆ. ಇದು ಸ್ವಾತಂತ್ರ್ಯ ಹೋರಾಟಗಾರರಿಗೆ ನಿಜವಾದ ಗೌರವ ನಮನವಾಗಿರುತ್ತದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಮೂಹಿಕ ಪಾಲ್ಗೊಳ್ಳುವಿಕೆ ಪ್ರಮುಖವಾಗಿತ್ತು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಅಸಂಖ್ಯಾತ ಘಟನೆಗಳು ನಡೆದಿದ್ದವು. 1921ರ ಫೆಬ್ರವರಿ 4ರಂದು ಚೌರಿ ಚೌರಾದಲ್ಲಿ ಅಂತಹ ಒಂದು ಘಟನೆ ನಡೆದಿತ್ತು. 100 ವರ್ಷಗಳ ಹಿಂದೆ ಪೊಲೀಸ್ ಠಾಣೆಗೆ ಬೆಂಕಿ ಹಚ್ಚುವ ಮೂಲಕ ಸಾಮಾನ್ಯ ಜನರು ಬ್ರಿಟಿಷರಿಗೆ ಸವಾಲು ಹಾಕಿದ್ದರು. ಈ ಘಟನೆ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ದಿಕ್ಕು ನೀಡಿತು. ಚೌರಿ ಚೌರಾದ ಐತಿಹಾಸಿಕ ಹೋರಾಟಕ್ಕೆ ಈಗ ಸೂಕ್ತ ಪ್ರಾಮುಖ್ಯತೆ ನೀಡಲಾಗುತ್ತಿದೆ. ಫೆಬ್ರವರಿ 4, 2021ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಚೌರಿ ಚೌರಾ' ಶತಮಾನೋತ್ಸವವನ್ನು ಉದ್ಘಾಟಿಸಿದರು. ಅವರು ಚೌರಿ ಚೌರಾ ಶತಮಾನೋತ್ಸವ ಕಾರ್ಯಕ್ರಮದ ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು.

ಈ ಸಂಘಟಿತ ಬಲ ಗುಲಾಮಗಿರಿಯ ಸಂಕೋಲೆಯನ್ನು ಕಿತ್ತೊಗೆಯಿತು. ಇದೇ ಸಂಘಟಿತ ಶಕ್ತಿ ಆತ್ಮನಿರ್ಭರ ಭಾರತ ಅಭಿಯಾನಕ್ಕೂ ಆಧಾರವಾಗಿದೆ. "ದೇಶದ ಏಕತೆ ಮತ್ತು ದೇಶದ ಮೇಲಿನ ಗೌರವ ನಮಗೆ ಅತ್ಯಂತ ಮಹತ್ವದ್ದಾಗಿದೆ ಎಂದು ನಾವು ಸಂಕಲ್ಪತೊಡಬೇಕಿದೆ. ಈ ಮನೋಭಾವದಿಂದ, ನಾವು ಪ್ರತಿಯೊಬ್ಬ ದೇಶವಾಸಿಯೊಂದಿಗೆ ಮುಂದೆ ಸಾಗಬೇಕು,"ಎಂದು ಪ್ರಧಾನಮಂತ್ರಿ ಹೇಳಿದರು.

## ಪ್ರಧಾನಮಂತ್ರಿಯವರ ಭಾಷಣದ ಆಯ್ದ ಅಂಶಗಳು

- ಚೌರಿ ಚೌರದಲ್ಲಿ 100 ವರ್ಷಗಳ ಹಿಂದೆ ಏನಾಯಿತು, ಅದು ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ ಸಾಮಾನ್ಯ ಘಟನೆಯಷ್ಟೇ ಅಲ್ಲ, ಆದರೆ ಚೌರಿ ಚೌರ ರವಾನಿಸಿದ ಸಂದೇಶ ದೊಡ್ಡದು ಮತ್ತು ಆವರಿಸುವಂತಹುದು. ಅದು ಕೇವಲ ಪೊಲೀಸ್ ಠಾಣೆಗೆ ಬೆಂಕಿ ಮಾತ್ರ ಹಚ್ಚಿದ್ದಲ್ಲ; ಅದು ಜನರ ಹೃದಯದಿಂದ ಹೊರಹೊಮ್ಮಿದ ಆಕ್ರೋಶವಾಗಿತ್ತು.
- ಚೌರಿ ಚೌರ ಘಟನೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿಶೇಷ ಸ್ಥಾನ ಪಡೆಯುತ್ತದೆ, ಏಕೆಂದರೆ, ಈ ಐತಿಹಾಸಿಕ ಘಟನೆಯಿಂದ ಒಂದೇ ಪ್ರಕರಣಕ್ಕಾಗಿ 19 ಸ್ವಾತಂತ್ರ್ಯ ಹೋರಾಟಗಾರರನ್ನು ಗಲ್ಲಿಗೆ ಏರಿಸಲಾಗಿತ್ತು.
- 2021ರ ಫೆಬ್ರವರಿ 4ರಿಂದ ಆರಂಭವಾಗಿ ಇಡೀ ವರ್ಷ ಕಾರ್ಯಕ್ರಮಗಳು ನಡೆಯಲಿವೆ.
- ನಾವು 150ಕ್ಕೂ ಹೆಚ್ಚು ಸ್ವಾತಂತ್ರ್ಯಯೋಧರನ್ನು ನೇಣಿನ ಕುಣಿಕೆಯಿಂದ ಕಾಪಾಡಿದ ಮಹಾಮನ ಮದನ್ ಮೋಹನ ಮಾಳವೀಯ ಮತ್ತು ಬಾಬಾ ರಾಘವದಾಸ್ ಅವರ ಪ್ರಯತ್ನವನ್ನು ಸ್ಮರಿಸಬೇಕು, ಶ್ರದ್ಧಾಂಜಲಿ ಸಲ್ಲಿಸಬೇಕು.
- ರೈತರ ಪ್ರಗತಿಗಾಗಿ, ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಕಳೆದ ಆರು ವರ್ಷಗಳಿಂದ ನಿರಂತರ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಮಹಾರಾಜ ಸುಹೇಲ್‌ದೇವ್ ಅವರ ಹೆಸರಿನ ವೈದ್ಯಕೀಯ ಕಾಲೇಜು ಕಟ್ಟಡವನ್ನೂ ಪ್ರಧಾನಿ ಉದ್ಘಾಟಿಸಿದರು. ಮಹಾರಾಜ ಸೂಕ್ಷ್ಮ ಸಂವೇದನೆಯ ಮತ್ತು ಅಭಿವೃದ್ಧಿ ಪರವಾಗಿದ್ದ ಆಡಳಿತಗಾರರಾಗಿದ್ದರು ಎಂದು ಪ್ರಧಾನಮಂತ್ರಿ ಸ್ಮರಿಸಿದರು. ವೈದ್ಯಕೀಯ ಕಾಲೇಜು ಸ್ಥಾಪನೆ ಮತ್ತು ಆರೋಗ್ಯ ಸೌಲಭ್ಯಗಳ ವಿಸ್ತರಣೆ ಸ್ಥಳೀಯರ ಬದುಕು ಸುಗಮಗೊಳಿಸಲಿವೆ ಎಂದು ಹೇಳಿದರು. ಮಹಾರಾಜ ಸುಹೇಲ್‌ದೇವ್ ಅವರ ಸ್ಮಾರಕ ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುವುದಲ್ಲದೆ, ಪ್ರವಾಸೋದ್ಯಮವನ್ನೂ ಉತ್ತೇಜಿಸಲಿದೆ ಇದು ರಾಜನಿಗೆ ಸಲ್ಲಿಸಿದ ಗೌರವ ನಮನವಾಗಿದೆ ಎಂದರು. "ಕಳೆದ ಕೆಲವು ವರ್ಷಗಳಲ್ಲಿ ನಿರ್ಮಿಸಲಾದ ಇತಿಹಾಸ, ನಂಬಿಕೆ ಮತ್ತು ಆಧ್ಯಾತ್ಮಿಕತೆಗೆ ಸಂಬಂಧಿಸಿದ ಸ್ಮಾರಕಗಳ ದೊಡ್ಡ ಗುರಿ ಪ್ರವಾಸೋದ್ಯಮವನ್ನು ಉತ್ತೇಜಿಸುವುದಾಗಿದೆ" ಎಂದು ಪ್ರಧಾನಮಂತ್ರಿ ಹೇಳಿದರು.

ಭಾರತದ ಇತಿಹಾಸ ವಸಾಹತು ಶಕ್ತಿಗಳಿಂದ ಬರೆದಿರುವುದಷ್ಟೇ ಅಲ್ಲ ಅಂತಹ ಮನೋಭಾವದವರಿಂದಲೂ ಬರೆದಿರುವಂತಹುದಾಗಿದೆ ಎಂದು ಪ್ರಧಾನಮಂತ್ರಿ ಹೇಳಿದರು. ಭಾರತೀಯ ಇತಿಹಾಸವು ಸಾಮಾನ್ಯ ಜನರಿಂದ ತಮ್ಮ ಜಾನಪದಗಳಲ್ಲಿ ಪೋಷಿಸಲ್ಪಟ್ಟಿದೆ ಮತ್ತು ತಲೆಮಾರುಗಳಿಂದ ಸಾಗಿ ಬಂದಿದೆ ಎಂದರು. ■



# ಭಾರತವನ್ನು ವಿಪತ್ತುಗಳಿಂದ

## ರಕ್ಷಿಸುತ್ತಿದೆ, ಕಾಪಾಡುತ್ತಿದೆ

ವಿಶಿಷ್ಟವಾದ ಭೂ-ಹವಾಮಾನ ಮತ್ತು ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಿಂದಾಗಿ, ಭಾರತವು ವಿವಿಧ ಹಂತಗಳಲ್ಲಿ, ಪ್ರವಾಹ, ಅನಾವೃಷ್ಟಿ, ಚಂಡಮಾರುತಗಳು, ಸುನಾಮಿ, ಭೂಕಂಪಗಳು, ನಗರ ಪ್ರವಾಹ, ಭೂಕುಸಿತಗಳು, ಹಿಮಪಾತಗಳು ಮತ್ತು ಕಾಳ್ಗಿಚ್ಚಿಗೆ ಗುರಿಯಾಗುತ್ತಿದೆ. ಈ ವಿಪತ್ತಿನ ಸಮಯದಲ್ಲಿ, ಭಾರತದಲ್ಲಿ ವಿಪತ್ತು ನಿರ್ವಹಣೆಯ ಉನ್ನತ ಸಂಸ್ಥೆಯಾದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್‌ಡಿಎಂಎ) ರಕ್ಷಣೆಗೆ ಧಾವಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ, ವಿಪತ್ತು ನಿರ್ವಹಣೆ ಕೇವಲ ಪರಿಹಾರ ಮತ್ತು ಪರಿಹಾರ ಸಾಮಗ್ರಿ ನೀಡಿಕೆಗೆ ಸೀಮಿತವಾಗಿಲ್ಲ ಎಂಬುದನ್ನು ಭಾರತ ಸಾಬೀತುಪಡಿಸಿದೆ.

ಸುರಕ್ಷಿತ ಮತ್ತು ವಿಪತ್ತು ತಾಳಿಕೊಳ್ಳುವಂತಹ ಭಾರತವನ್ನು ನಿರ್ಮಿಸುವ ದೃಷ್ಟಿಯೊಂದಿಗೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎನ್.ಡಿ.ಎಂ.ಎ) ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ನೈಸರ್ಗಿಕ ವಿಪತ್ತು ಅಥವಾ ಮಾನವ ನಿರ್ಮಿತ ಅಥವಾ ಕೊರೊನಾ ವೈರಾಣುವಿನಂತಹ ಸಾಂಕ್ರಾಮಿಕವಾಗಿದ್ದರೂ, ಹೋರಾಟದಲ್ಲಿ ಎನ್‌ಡಿಎಂಎ ಮುಂಚೂಣಿಯಲ್ಲಿರುತ್ತದೆ.

ವಿಪತ್ತು ನಿರ್ವಹಣೆಗೆ ಒಂದು ಉನ್ನತ ಸಂಸ್ಥೆಯಾಗಿ, ಎನ್‌ಡಿಎಂಎ ವಿಪತ್ತುಗಳಿಗೆ ಸಮಯೋಚಿತ ಮತ್ತು ಪರಿಣಾಮಕಾರಿ ಸ್ಪಂದನೆಯನ್ನು ಖಚಿತಪಡಿಸಿಕೊಳ್ಳಲು ನೀತಿಗಳು, ಯೋಜನೆಗಳು ಮತ್ತು ಮಾರ್ಗಸೂಚಿಗಳನ್ನು ರೂಪಿಸುತ್ತದೆ. ಇದು 'ತಡೆಗಟ್ಟುವಿಕೆ, ತಗ್ಗಿಸುವಿಕೆ, ಪೂರ್ವಸಿದ್ಧತೆ ಮತ್ತು ಸ್ಪಂದನೆ' ಎಂಬ ನೀತಿಯ ಅಭಿವೃದ್ಧಿಯನ್ನು ರೂಪಿಸುತ್ತದೆ. ಎಲ್ಲಾ ಸರ್ಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಜನರ ಭಾಗವಹಿಸುವಿಕೆಯ ನಿರಂತರ ಮತ್ತು ಸಾಮೂಹಿಕ ಪ್ರಯತ್ನಗಳ ಮೂಲಕ ನೈಸರ್ಗಿಕ ಮತ್ತು ಮಾನವ ನಿರ್ಮಿತ ವಿಪತ್ತುಗಳಿಂದ ಉಂಟಾಗುವ ಹಾನಿ ಮತ್ತು ವಿನಾಶವನ್ನು ತಗ್ಗಿಸುವ ರಾಷ್ಟ್ರೀಯ ಸಂಕಲ್ಪವನ್ನು ಉತ್ತೇಜಿಸಲು ಸರ್ಕಾರ ಶ್ರಮಿಸುತ್ತದೆ. ಸುರಕ್ಷಿತ,

## ಭಾರತ ಎಷ್ಟು ಸೂಕ್ಷ್ಮವಾಗಿದೆ?



ದೇಶದ 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ, 27 ವಿಕೋಪ ಪೀಡಿತವಾಗುತ್ತಿರುತ್ತವೆ. ಶೇಕಡ 58.6 ಭೂಭಾಗ ಸಾಧಾರಣದಿಂದ ಅತಿ ತೀವ್ರತೆಯ ಭೂಕಂಪಕ್ಕೆ ಒಳಗಾಗುತ್ತದೆ; ಶೇಕಡ 12ರಷ್ಟು ಭೂಭಾಗ ಪ್ರವಾಹ ಮತ್ತು ನದಿ ಕೊರೆತಕ್ಕೆ ಒಳಗಾಗುತ್ತದೆ; 5,700 ಕಿ.ಮೀ. ಕರಾವಳಿ ಭಾಗ ಚಂಡಮಾರುತ ಮತ್ತು ಸುನಾಮಿ ಪೀಡಿತವಾಗುತ್ತವೆ; ಗಿರಿ ಪ್ರದೇಶಗಳು ಭೂಕುಸಿತ ಮತ್ತು ಹಿಮಪಾತದ ಅಪಾಯ ಎದುರಿಸುತ್ತವೆ. ನಗರ ಪ್ರವಾಹ, ಅಗ್ನಿ ಆಕಸ್ಮಿಕಗಳು, ಕೈಗಾರಿಕಾ ಅಪಘಾತಗಳು ಮತ್ತು ರಾಸಾಯನಿಕ, ಜೈವಿಕ ಮತ್ತು ವಿಕಿರಣ ವಸ್ತುಗಳಿಂದ ಎದುರಾಗುವ ಇತರ ಮಾನವ ನಿರ್ಮಿತ ವಿಪತ್ತುಗಳು ಹೆಚ್ಚುವರಿ ತೊಡಕುಗಳಾಗಿವೆ. ಯೋಜನಾ ಬದ್ಧವಲ್ಲದ ನಗರೀಕರಣ, ಹೆಚ್ಚಿನ ಅಪಾಯದ ವಲಯಗಳೊಳಗೆ ಅಭಿವೃದ್ಧಿ ಮತ್ತು ಇತರ ಅಂಶಗಳು ಸೂಕ್ಷ್ಮತೆಗಳನ್ನು ಹೆಚ್ಚಿಸುವ ಮೂಲಕ ವಿಪತ್ತಿನ ಅಪಾಯಗಳನ್ನು ಮತ್ತಷ್ಟು ಹೆಚ್ಚಿಸಿವೆ.

### ಎನ್‌ಡಿಎಂಎ ಮತ್ತು ಕೊರೊನಾ ವೈರಾಣು



ಎನ್‌ಡಿಎಂಎ ಕಾಯಿದೆ ನೆರವಿನಿಂದ ಭಾರತವು ಕೊರೊನಾ ಸಾಂಕ್ರಾಮಿಕದ ವಿರುದ್ಧ ದೊಡ್ಡ ಸಮರವನ್ನು ಸಾರಿತು. 2020ರ ಮಾರ್ಚ್ 24ರಂದು ರಾಷ್ಟ್ರವ್ಯಾಪಿ ಲಾಕ್ ಡೌನ್ ಘೋಷಣೆಗೆ ಮೊದಲೇ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಎನ್.ಡಿ.ಎಂ.ಎ. ಶಿಫಾರಸಿನ ಮೇರೆಗೆ ವಿಪತ್ತು ನಿರ್ವಹಣಾ ಕಾಯಿದೆಯನ್ನು ಮೊದಲ ಬಾರಿಗೆ ಚಲಾಯಿಸಿದವು. ಈ ಕಾಯಿದೆ ಲಕ್ಷಾಂತರ ಜನರ ಜೀವವನ್ನು ಉಳಿಸಲು ನೆರವಾಯಿತು ಮತ್ತು ದೊಡ್ಡ ಸಂಕಷ್ಟದಿಂದ ದೇಶವನ್ನು ಪಾರು ಮಾಡಲು ಆಧಾರವಾಯಿತು. ಭಾರತದಲ್ಲಿ ಸಾಂಕ್ರಾಮಿಕ ರೋಗದ ಗತಿಯನ್ನು ನಿಧಾನಗೊಳಿಸಿದ ಲಾಕ್‌ಡೌನ್ ನಿರ್ಧಾರವು 14–29 ಲಕ್ಷ ಪ್ರಕರಣಗಳು, 37–78 ಸಾವಿರ ಸಾವುಗಳನ್ನು ತಡೆಗಟ್ಟಿದೆ ಎಂದು ಅಂದಾಜಿಸಲಾಗಿದೆ.

### ಆಪದಾ ಮಿತ್ರ: ಆಪತ್ತಿಗಾದವನೇ ನೆಂಟ



ವಿಪತ್ತು ಸಮಯದಲ್ಲಿ ಸಮುದಾಯದ ಮಹತ್ವವನ್ನು ಗುರುತಿಸಿ, ಸರ್ಕಾರವು 2015ರಲ್ಲಿ 'ಆಪದಾ ಮಿತ್ರ' ವನ್ನು ಪ್ರಾರಂಭಿಸಿತು. ಈ ಯೋಜನೆಯು ಈಗ ಅದರ ಪ್ರಾಯೋಗಿಕ ಹಂತದಿಂದ ವಿಪತ್ತು ಸ್ಪಂದನೆ ಮತ್ತು ಅಪಾಯವನ್ನು ತಗ್ಗಿಸುವ ಜನಾಂದೋಲನವಾಗಿ ವಿಸ್ತರಣೆಯಾಗಲು ಸಜ್ಜಾಗಿದೆ. ಒಡಿಶಾದಲ್ಲಿ ಫನಿ–2019 ಚಂಡಮಾರುತದ ಸಂದರ್ಭದಲ್ಲಿ ಅದರ ಸ್ವಯಂ ಸೇವಕರು ನಿರ್ಣಾಯಕ ಪಾತ್ರ ವಹಿಸಿದ್ದಾರೆ; 2020ರ ಆಗಸ್ಟ್ 20ರಂದು ಉತ್ತರ ಪ್ರದೇಶದ ಗೋರಖ್‌ಪುರ್ ಜಿಲ್ಲೆಯಲ್ಲಿ ದೋಣಿ ದುರಂತದಲ್ಲಿ 135 ಜೀವಗಳನ್ನು ಉಳಿಸಲಾಗಿದೆ; ಮತ್ತು ಉತ್ತರಾಖಂಡದ ಹರಿದ್ವಾರದಲ್ಲಿ 2018– 19 ರಲ್ಲಿ ಕವಾಡ್ ಯಾತ್ರೆಯ ಸಂದರ್ಭದಲ್ಲಿ ಗಂಗಾ ನದಿಯಲ್ಲಿ ಮುಳುಗುತ್ತಿದ್ದ 125 ಜನರನ್ನು ಉಳಿಸಲಾಗಿದೆ. ಸ್ವಯಂಸೇವಕರಾಗಿ ಭಾಗವಹಿಸುವ ಮಹಿಳೆಯರು ಮತ್ತು ಬಾಲಕಿಯರನ್ನು 'ಆಪದಾ ಸಖಿ' ಎಂದು ಕರೆಯಲಾಗುತ್ತದೆ.

ವಿಪತ್ತು ತಾಳಿಕೊಳ್ಳುವ ಮತ್ತು ಚೈತನ್ಯಶೀಲ ಭಾರತವನ್ನು ನಿರ್ಮಿಸಲು ತಂತ್ರಜ್ಞಾನ–ಚಾಲಿತ, ಸಕ್ರಿಯ, ಬಹು–ಅಪಾಯ ಮತ್ತು ಬಹು–ಕ್ಷೇತ್ರೀಯ ತಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ ಇದನ್ನು ಸಾಧಿಸಲು ಯೋಜಿಸಲಾಗಿದೆ.

### ವರ್ಷಗಳು ಉರುಳಿದಂತೆ ವಿಪತ್ತಿನ ಬಗೆಗಿನ ನಿಲುವು ಹೇಗೆ ಬದಲಾಗಿದೆ

ಭಾರತದಲ್ಲಿ, ವಿಪತ್ತು ಎಂದರೆ ಬರ ಅಥವಾ ಪ್ರವಾಹವೆಂಬ ಕಾರಣದಿಂದ, ವಿಪತ್ತು ನಿರ್ವಹಣೆಯು ಕೃಷಿ ಇಲಾಖೆಯ ಕೆಲಸ ಎಂದು ಪರಿಗಣಿಸಲಾಗಿತ್ತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, ಇದರ ಚಿತ್ರಣವನ್ನು ಬದಲಾಯಿಸಿ ಹೊಸ ದೃಷ್ಟಿಕೋನ ನೀಡಿದರು. 2001ರಲ್ಲಿ ಗುಜರಾತ್ ಅತ್ಯಂತ ಭೀಕರ ಭೂಕಂಪಕ್ಕೆ ತುತ್ತಾಯಿತು. ಸರ್ಕಾರಗಳು ಈ ವಿಪತ್ತು ಎದುರಿಸಲು ಸಜ್ಜಾಗಿರಲಿಲ್ಲ. ನರೇಂದ್ರ ಮೋದಿ ಅವರಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ನೀಡಿದ ಬಳಿಕ, ಅವರು ಯೋಜಿಸಿದ ಮೊದಲ ಸುಧಾರಣೆಗಳಲ್ಲಿ ಗುಜರಾತ್ ರಾಜ್ಯ ವಿಪತ್ತು ನಿರ್ವಹಣಾ ಕಾಯ್ದೆ–2003 ರೂಪಿಸಿದ್ದೂ ಒಂದಾಗಿತ್ತು. ಈ ಕಾಯಿದೆಯಡಿ, ದೇಶದಲ್ಲಿ ಮೊದಲ ಬಾರಿಗೆ, ವಿಪತ್ತು ನಿರ್ವಹಣೆಯನ್ನು ಕೃಷಿ ಇಲಾಖೆಯಿಂದ ಬೇರ್ಪಡಿಸಿ ಗೃಹ ಇಲಾಖೆಗೆ ವಹಿಸಲಾಯಿತು.

# ಜೀವ ಉಳಿಸುವ ಎನ್‌ಡಿಎಂಎ:

**ಕೆಲವು ವರ್ಷಗಳಲ್ಲಿ, ಭಾರತವು ನಿಖರವಾಗಿ ಮತ್ತು ಮುಂಚಿತವಾಗಿಯೇ ವಿಶೇಷವಾಗಿ ಚಂಡಮಾರುತಗಳ ಬಗ್ಗೆ ಮುನ್ನೆಚ್ಚರಿಕೆಗಳನ್ನು ನೀಡುವಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದೆ**




**2015ರಲ್ಲಿ ನೇಪಾಳದಲ್ಲಿ ಹಿಮಾಲಯದ ಭೂಕಂಪ ಸಂಭವಿಸಿದ ತರುವಾಯ, ಎನ್‌ಡಿಎಂಎ ಭಾರತದಿಂದ ರಕ್ಷಣೆ ಮತ್ತು ಪರಿಹಾರ ತಂಡಗಳನ್ನು ಸಿದ್ಧಗೊಳಿಸಿತು. ಮೇಲುಸ್ತುವಾರಿ ಮತ್ತು ತಾಂತ್ರಿಕ ಸಲಹೆ ನೀಡಲು ತಜ್ಞರ ತಂಡವನ್ನು ಅಣಿಗೊಳಿಸಿತು.**

ಈ ಕಾಯಿದೆ ಕೇಂದ್ರಕ್ಕೆ ನೀಲನಕ್ಷೆಯಾಗಿದೆ, ಇದು ಇಡೀ ದೇಶಕ್ಕೆ ವಿಪತ್ತು ನಿರ್ವಹಣಾ ಕಾಯಿದೆಯನ್ನು ರೂಪಿಸಿದೆ. ಭಾರತದಲ್ಲಿ ವಿಪತ್ತು ನಿರ್ವಹಣೆಗೆ ಸಮಗ್ರ ಮತ್ತು ಸರ್ವಾಂಗೀಣ ವಿಧಾನವನ್ನು ಮುನ್ನಡೆಸಲು ಮತ್ತು ಕಾರ್ಯಗತಗೊಳಿಸಲು 2005ರ ಕಾಯಿದೆಯು ಪ್ರಧಾನಮಂತ್ರಿಗಳ ನೇತೃತ್ವದ ಎನ್‌ಡಿಎಂಎ ಮತ್ತು ಆಯಾ ರಾಜ್ಯಗಳ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಗಳನ್ನು ರಚಿಸಲು ಅವಕಾಶ ನೀಡುತ್ತದೆ.

2014ರಲ್ಲಿ ನರೇಂದ್ರ ಮೋದಿ ಅವರು ಪ್ರಧಾನಮಂತ್ರಿಯಾದರು. ವಿಪತ್ತು ನಿರ್ವಹಣೆಯಲ್ಲಿ ಅವರ ದೃಷ್ಟಿಕೋನ ಎನ್‌ಡಿಎಂಎ ಬಲವರ್ಧನೆಗೆ ಹಲವು ಸುಧಾರಣಾ ಕ್ರಮ ಕೈಗೊಂಡಿತು. ಕಠಿಣ ತರಬೇತಿ ಮತ್ತು ಜಾಗೃತಿಯೊಂದಿಗೆ, ಭಾರತವು 2015ರಲ್ಲಿ ರಾಷ್ಟ್ರೀಯ ವಿಪತ್ತು ಸಹಾಯವಾಣಿ 1078 ಅನ್ನು ಸಹ ಪ್ರಾರಂಭಿಸಿತು.

ಪ್ರಾರಂಭವಾದಾಗಿನಿಂದ 2015ರವರೆಗೆ, ಎನ್‌ಡಿಎಂಎ ವಿಪತ್ತು ನಿರ್ವಹಣೆಯ ವಿವಿಧ ಹೆಚ್ಚುವರಿ ವಿಷಯಗಳ ಕುರಿತು 18 ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಾರ್ಗಸೂಚಿಗಳನ್ನು ಸಿದ್ಧಪಡಿಸಿತ್ತು, ಐದು ಮಾರ್ಗಸೂಚಿಗಳನ್ನು 2014–15 ರೊಂದರಲ್ಲೇ ನೀಡಲಾಗಿದೆ.

2016ರ ಜೂನ್ 1ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ವಿಪತ್ತು ನಿರ್ವಹಣಾ ಯೋಜನೆ (ಎನ್‌ಡಿಎಂಪಿ)ಯನ್ನು ಬಿಡುಗಡೆ ಮಾಡಿದರು. ಇದು ವಿಪತ್ತು ನಿರ್ವಹಣೆಗೆ ದೇಶದಲ್ಲಿ ಸಿದ್ಧಪಡಿಸಲಾದ ಪ್ರಪ್ರಥಮ ರಾಷ್ಟ್ರೀಯ ಯೋಜನೆಯಾಗಿತ್ತು. ಅಲ್ಲದೆ, ಇದು ವಿಶ್ವದ ಮೊದಲ ರಾಷ್ಟ್ರೀಯ ಯೋಜನೆಯೂ ಆಗಿದ್ದು, ವಿಪತ್ತಿನ ಅಪಾಯ ತಗ್ಗಿಸುವ 2015–2030 ಕುರಿತ ಸೆಂಡೈ ಚೌಕಟ್ಟಿಗೆ ಸ್ಪಷ್ಟವಾಗಿ ಹೊಂದಿಕೆಯಾಗಿದೆ, ಇದಕ್ಕೆ ಭಾರತವೂ ಅಂಕಿತ ಹಾಕಿದೆ. ಯೋಜನೆಯನ್ನು 2019ರಲ್ಲಿ ಪರಿಷ್ಕರಿಸಲಾಯಿತು. ಇದು ಡಿಆರ್‌ಆರ್ ಕುರಿತು ಹತ್ತು ಅಂಶಗಳ ಕಾರ್ಯಸೂಚಿಯನ್ನು ಒಳಗೊಂಡಿತ್ತು, ಇದನ್ನು ಪ್ರಧಾನಮಂತ್ರಿ ವಿವರಿಸಿದ್ದರು.

2019ರಲ್ಲಿ, ಎನ್‌ಡಿಎಂಎ 'ವೈಕಲ್ಯ ಒಳಗೊಂಡ ವಿಪತ್ತಿನ ಅಪಾಯವನ್ನು ತಗ್ಗಿಸುವ ರಾಷ್ಟ್ರೀಯ ಮಾರ್ಗಸೂಚಿ'ಗಳನ್ನು ಬಿಡುಗಡೆ ಮಾಡಿತು. ಇದರೊಂದಿಗೆ ಭಾರತ ಇಂಥ ಮಾರ್ಗಸೂಚಿ ರೂಪಿಸಿದ ವಿಶ್ವದ ಪ್ರಥಮ ರಾಷ್ಟ್ರವೆನಿಸಿತು. ■

# ಉತ್ತರಾಖಂಡದ ಚಮೋಲಿಯಲ್ಲಿ ಹಿಮಪ್ರವಾಹ;
# 51 ಸಾವು, 153 ನಾಪತ್ತೆ



2021ರ ಫೆಬ್ರವರಿ 7 ರಂದು, ಬೆಳಗ್ಗೆ 10ರ ಸುಮಾರಿಗೆ, ಉತ್ತರಾಖಂಡದ ಚಮೋಲಿ ಜಿಲ್ಲೆಯ ಅಲಕಾನಂದ ನದಿಯ ಉಪನದಿಯಾದ ಋಷಿ ಗಂಗಾ ನದಿಯ ಮೇಲ್ಭಾಗದಲ್ಲಿ ಹಿಮಪಾತ ಸಂಭವಿಸಿತು. ಇದು ರಿಷಿ ಗಂಗಾ ನದಿಯ ನೀರಿನ ಮಟ್ಟ ಹಠಾತ್ತನೆ ಏರಲು ಕಾರಣವಾಯಿತು. ಈ ಘಟನೆ ನಡೆದ ತಕ್ಷಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಸ್ಥಿತಿಯ ಬಗ್ಗೆ ಕಟ್ಟುನಿಟ್ಟಿನ ಜಾಗರೂಕತೆ ವಹಿಸಿದವು.

2021ರ ಫೆಬ್ರವರಿ 7ರಂದು ಉಪಗ್ರಹ ದತ್ತಾಂಶ, 5,600 ಮೀಟರ್ ಎತ್ತರದ ಪ್ರದೇಶದಲ್ಲಿ ಹಿಮನದಿಯ ತುತ್ತ ತುದಿಯ ಋಷಿ ಗಂಗಾ ನದಿಯ ಜಲಾನಯನ ಪ್ರದೇಶದಲ್ಲಿ ಸುಮಾರು 14 ಚದರ ಕಿ.ಮೀ ಪ್ರದೇಶವನ್ನು ಭೂಕುಸಿತದಿಂದ ಪ್ರಚೋದಿತವಾಗಿತ್ತು ಎಂದು ತಿಳಿಸಿತು. ಇದು ಋಷಿ ಗಂಗಾ ನದಿಯ ಕೆಳಭಾಗದಲ್ಲಿ ಹಿಮ ಪ್ರವಾಹಕ್ಕೆ ಕಾರಣವಾಯಿತು, ಅದರ ಹಾದಿಯಲ್ಲಿರುವ ಎಲ್ಲವನ್ನೂ ಕೊಚ್ಚಿಕೊಂಡು ಹೋಯಿತು. 13.2 ಮೆಗಾ ವ್ಯಾಟ್‌ನ ಕಾರ್ಯಾಚರಣೆಯಲ್ಲಿದ್ದ ಋಷಿ ಗಂಗಾ ಕಿರು ಜಲ ವಿದ್ಯುತ್ ಯೋಜನೆಯೂ ಕೊಚ್ಚಿ ಹೋಯಿತು. ಹಠಾತ್ ಬಂದ ಪ್ರವಾಹ ದೌಲಿಗಂಗಾ ನದಿಯ ಕೆಳದಂಡೆಯ 520 ಮೆ.ವ್ಯಾ. ಎನ್‌ಟಿಪಿಸಿ ಜಲ ವಿದ್ಯುತ್ ಯೋಜನೆಯ ಮೇಲೂ ಪ್ರಭಾವ ಬೀರಿತು.

ಸಿಲುಕಿಕೊಂಡಿದ್ದ ಜನರನ್ನು ರಕ್ಷಿಸಲು ಬಹು–ಸಂಸ್ಥೆಗಳ ಕಾರ್ಯಾಚರಣೆಯನ್ನು ಕೂಡಲೇ ಪ್ರಾರಂಭಿಸಲಾಯಿತು. ನಿಕಟ ಸಮನ್ವಯದಿಂದ ಕೆಲಸ ಮಾಡಲು ಮತ್ತು ರಾಜ್ಯ ಆಡಳಿತಕ್ಕೆ ಅಗತ್ಯವಾದ ಎಲ್ಲ ನೆರವು ನೀಡುವಂತೆ ಕೇಂದ್ರ ಸರ್ಕಾರ ಸಂಬಂಧಪಟ್ಟ ಸಂಸ್ಥೆಗಳಿಗೆ ನಿರ್ದೇಶನ ನೀಡಿತು. 2021ರ ಫೆಬ್ರವರಿ 15ರ ಹೊತ್ತಿಗೆ, ಕನಿಷ್ಠ 51 ಶವಗಳನ್ನು ಹೊರತೆಗೆಯಲಾಯಿತು ಮತ್ತು ಇನ್ನೂ 153 ಜನರು ನಾಪತ್ತೆಯಾಗಿದ್ದಾರೆ. ರಕ್ಷಣಾ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪರಿಹಾರ ಮತ್ತು ರಕ್ಷಣಾ ಕಾರ್ಯಗಳಿಗಾಗಿ ಕೇಂದ್ರವು ಎಲ್ಲ ನೆರವನ್ನು ರಾಜ್ಯ ಸರ್ಕಾರಕ್ಕೆ ನೀಡುವ ಭರವಸೆ ನೀಡಿದ್ದಾರೆ. ▪

## ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳು

- ಪರಿಸ್ಥಿತಿಯ ಬಗ್ಗೆ 24x7 ನಿಗಾ ಇಡಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅದನ್ನು ಸ್ವತಃ ನಿಕಟವಾಗಿ ನೋಡುತ್ತಿದ್ದಾರೆ.
- ಕೇಂದ್ರ ಇಂಧನ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ (ಸ್ವತಂತ್ರ ನಿರ್ವಹಣೆ) ರಾಜ್ ಕುಮಾರ್ ಸಿಂಗ್, ಅವರು ಸ್ಥಳಕ್ಕೆ ಭೇಟಿ ನೀಡಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಳ ಮೇಲುಸ್ತುವಾರಿ ಮಾಡಿದರು.
- 450 ಸಿಬ್ಬಂದಿ ಅಗತ್ಯ ಸಾಧನ ಸಲಕರಣೆಗಳೊಂದಿಗೆ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಐಟಿಬಿಪಿ ನಿಯಂತ್ರಣ ಕೊಠಡಿ ಸ್ಥಾಪಿಸಿದೆ.
- ಐದು ಎನ್‌ಡಿಆರ್‌ಎಫ್ ತಂಡಗಳು ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿವೆ
- ಕಾರ್ಯ ಪಡೆಯ ಒಬ್ಬ ಎಂಜಿನಿಯರ್ (ಇಟಿಎಫ್) ಸೇರಿದಂತೆ ಭಾರತೀಯ ಸೇನಾಪಡೆಯ 8 ತಂಡಗಳು, ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಎರಡು ಆಂಬುಲೆನ್ಸ್‌ಗಳನ್ನು ಒಳಗೊಂಡ ಒಂದು ವೈದ್ಯಕೀಯ ತಂಡವನ್ನು ಸಹ ನಿಯೋಜಿಸಲಾಗಿತ್ತು. ಭಾರತೀಯ ನೌಕಾಪಡೆಯ ಒಂದು ಮುಳುಗು ತಂಡವೂ ಸ್ಥಳದಲ್ಲಿತ್ತು.
- ಭಾರತೀಯ ವಾಯುಪಡೆಯ ಐದು ಹೆಲಿಕಾಪ್ಟರ್‌ಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಜೋಶಿಮಠದಲ್ಲಿ ಒಂದು ನಿಯಂತ್ರಣ ಕೊಠಡಿ ತೆರೆಯಲಾಗಿತ್ತು. ಸಶಸ್ತ್ರ ಸೀಮಾ ಬಲ (ಎಸ್‌ಎಸ್‌ಬಿ)ಯ ಒಂದು ತಂಡ ಮತ್ತು ಹಿಮ ಮತ್ತು ಹಿಮಪಾತ ಅಧ್ಯಯನ ಸಂಸ್ಥೆ (ಎಸ್‌ಎಎಸ್‌ಇ)/ಡಿಆರ್‌ಡಿಓ.ದ ಒಂದು ತಂಡ ಸ್ಥಳದಲ್ಲಿ ಬೀಡುಬಿಟ್ಟಿತ್ತು.

# ಮೊನ್ಪಾ ಕೈಯಲ್ಲಿ ತಯಾರಿಸುವ ಕಾಗದ

## 1000 ವರ್ಷಗಳ ಹಿಂದಿನ ಪಾರಂಪರಿಕ ಕಲೆಯ ಪುನಶ್ಚೇತನ

**ಅರುಣಾಚಲ ಪ್ರದೇಶದ ತವಾಂಗ್ ಜಿಲ್ಲೆಯ ಕೈಯಲ್ಲಿ ತಯಾರಿಸುವ ಕಾಗದ ಮೊನ್ಪಾ ಅಥವಾ "ಮೊನ್ ಶೂಗು" ಅಳಿವಿನ ಅಂಚಿನಲ್ಲಿತ್ತು. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತಮ್ಮ ರೇಡಿಯೋ ಕಾರ್ಯಕ್ರಮ ಮನ್ ಕಿ ಬಾತ್ ನಲ್ಲಿ ನೀಡಿದ ವಿಶೇಷ ಉಲ್ಲೇಖಕ್ಕೆ ಧನ್ಯವಾದ ಹೇಳಲೇಬೇಕು, 1,000 ವರ್ಷಗಳಷ್ಟು ಹಳೆಯದಾದ ಈ ಪಾರಂಪರಿಕ ಕಲೆ ಮತ್ತೊಮ್ಮೆ ಜೀವ ತಳೆದಿದೆ.**

ಸುಂದರವಾದ ಪರ್ವತಗಳಿಂದ ಆವೃತವಾದ ಅರುಣಾಚಲ ಪ್ರದೇಶದ ತವಾಂಗ್ ಜಿಲ್ಲೆಯು ಮಾನ್ಪಾ ಬುಡಕಟ್ಟು ಜನಾಂಗದ ನೆಲೆಯಾಗಿದೆ. ಮೊನ್ಪಾ ಕೈಯಿಂದ ಮಾಡಿದ ಕಾಗದ ಅಥವಾ "ಮಾನ್ ಶುಗು" ತಯಾರಿಸುವಲ್ಲಿ ಬುಡಕಟ್ಟು ಜನಾಂಗದವರು ಸಿದ್ಧಹಸ್ತರಾಗಿದ್ದಾರೆ. ಇದು ಪುರಾತನ ಕಲಾ ಪ್ರಕಾರವಾಗಿದ್ದು, ಶುಗು ಶೆಂಗ್ ಕುರುಚಲು ಸಸ್ಯದ ತೊಗಟೆಯಿಂದ ಕಾಗದವನ್ನು ತಯಾರಿಸುವ ಕಲೆಯಾಗಿರುತ್ತದೆ. ಈ ಪ್ರಕ್ರಿಯೆಗೆ ಮರಗಳನ್ನು ಕಡಿಯುವ ಅಗತ್ಯವಿಲ್ಲ. ಈ ಕಾಗದವನ್ನು ಒಂದು ಕಾಲದಲ್ಲಿ ತವಾಂಗ್‌ನ ಪ್ರತಿಯೊಂದು ಮನೆಯಲ್ಲೂ ತಯಾರಿಸಲಾಗುತ್ತಿತ್ತು ಆದರೆ ಕಳೆದ 100 ವರ್ಷಗಳಲ್ಲಿ ಈ ಕಲೆ ಕ್ರಮೇಣ ಕಣ್ಮರೆಯಾಗುತ್ತಿತ್ತು.

ಮೊನ್ಪಾ ಕೈಯಿಂದ ತಯಾರಿಸುವ ಕಾಗದ ಪ್ರಧಾನಮಂತ್ರಿಯವರು 'ಮನ್ ಕಿ ಬಾತ್' ನಲ್ಲಿ ಪ್ರಸ್ತಾಪಿಸಿದ ತರುವಾಯ ಮತ್ತೆ ಜನರ ಗಮನ ಸೆಳೆಯಿತು, "ಸ್ಥಳೀಯರು ಈ ಕಾಗದವನ್ನು ಶುಗು ಶೆಂಗ್ ಎಂಬ ಸಸ್ಯದ ತೊಗಟೆಯಿಂದ ತಯಾರಿಸುತ್ತಾರೆ, ಆದ್ದರಿಂದ ಈ ಕಾಗದವನ್ನು ತಯಾರಿಸಲು ಮರಗಳನ್ನು ಕತ್ತರಿಸಬೇಕಾಗಿಲ್ಲ. ಇದಲ್ಲದೆ, ಈ ಕಾಗದವನ್ನು ತಯಾರಿಸಲು ಯಾವುದೇ ರಾಸಾಯನಿಕವನ್ನು ಬಳಸಲಾಗುವುದಿಲ್ಲ, ಆದ್ದರಿಂದ, ಈ ಕಾಗದವು ಪರಿಸರಕ್ಕೆ ಮತ್ತು ಆರೋಗ್ಯಕ್ಕೂ ಸುರಕ್ಷಿತವಾಗಿದೆ."

### ಮೊನ್ಪಾ ಬಗ್ಗೆ ಕೆಲವು ಅಂಶಗಳು

- ಮೊನ್ಪಾ ಕಾಗದ ತಯಾರಿಕೆ 1,000 ವರ್ಷಗಳ ಹಿಂದೆ ರೂಪುಗೊಂಡ ಕಲೆ
- ಈ ಕಾಗದ ಅತ್ಯಂತ ಹಗುರ, ಆದರೆ ಇದರ ನೈಸರ್ಗಿಕ ನಾರುಗಳು ಈ ಕಾಗದಕ್ಕೆ ಹೆಚ್ಚಿನ ಹಿಗ್ಗುವಿಕೆ ಶಕ್ತಿಯನ್ನು ನೀಡುತ್ತವೆ ಮತ್ತು ಇದು ವಿವಿಧ ಕಲಾಕೃತಿಗಳಿಗೆ ಸೂಕ್ತವಾಗಿದೆ.
- ಈ ಕಾಗದದ ಮೇಲೆ ಬರೆಯುವುದು ಕೂಡ ತಿದ್ದಲಾಗದಂಥದ್ದು ಎಂದು ಖ್ಯಾತವಾಗಿದೆ.
- ಇದನ್ನು ಬೌದ್ಧ ಧರ್ಮಗ್ರಂಥಗಳು, ಹಸ್ತಪ್ರತಿಗಳನ್ನು ಬರೆಯಲು ಮತ್ತು ಪ್ರಾರ್ಥನಾ ಮುದ್ರಣ ವಸ್ತು ತಯಾರಿಸಲು ಬಳಸಲಾಗುತ್ತಿತ್ತು.
- ಈ ಕಾಗದವನ್ನು ಹಿಂದೆ ಟಿಬೆಟ್, ಭೂತಾನ್, ಮ್ಯಾನ್ಮಾರ್ ಮತ್ತು ಜಪಾನ್ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಆದರೆ, ಹೊಸ ತಂತ್ರಜ್ಞಾನದ ಶೋಧನೆಯ ಬಳಿಕ, ಕಳೆದ 100 ವರ್ಷಗಳಲ್ಲಿ ಈ ಕಲೆ ಕಣ್ಮರೆಯಾಯಿತು.



**ಕೆವಿಐಸಿ ಮೂಲಕ ಮೊನ್ಪಾದ ಆನ್‌ಲೈನ್ ಮಾರಾಟ**

ಪ್ರಧಾನಮಂತ್ರಿಯವರು ಮೊನ್ಪಾ ಕುರಿತು ಪ್ರಸ್ತಾಪ ಮಾಡಿದ ಬಳಿಕ, ಕೈಯಲ್ಲಿ ತಯಾರಿಸುವ ಈ ಕಾಗದದ ಬೇಡಿಕೆ ಹಠಾತ್ ಹೆಚ್ಚಾಯಿತು. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ) ಇ-ಪೋರ್ಟಲ್ www.khadiindia.gov.in ಮೂಲಕ ಮೊನ್ಪಾ ಕೈಯಲ್ಲಿ ತಯಾರಿಸುವ ಕಾಗದ ಮಾರಾಟ ಮಾಡುತ್ತಿದೆ. ಇದರ ಆರಂಭದ ಮೊದಲ ದಿನವೇ ಮೊನ್ಪಾ ಕಾಗದದ 100 ಹಾಳೆಗಳು ಮಾರಾಟವಾದವು. ಕೈಯಲ್ಲಿ ತಯಾರಿಸಿದ ಈ ಒಂದು ಕಾಗದದ ಬೆಲೆ ರೂ. 50. ಮೊನ್ಪಾ ಕಾಗದ ಪರಿಸರವನ್ನು ಬೆಂಬಲಿಸುವುದಷ್ಟೇ ಅಲ್ಲ, ಇದು ಸ್ಥಳೀಯ ಕುಶಲಕರ್ಮಿಗಳಿಗೆ ಹೊಸ ಆದಾಯದ ಮಾರ್ಗವನ್ನೂ ತೆರೆದಿದೆ. ■

RNI No. :
DELKAN/2020/78828
March: 1-15, 2021

ನ್ಯೂ ಇಂಡಿಯಾ
**ಸಮಾಚಾರ**
ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NOU (S)-91/2020-22, posting at BPC, Meghdoot Bhawan, New Delhi - 110 001 on 26-28 advance Fortnightly (Publishing Date February 18, 2021, Pages - 44)



# ನಾಟ್ಯಾಂಜಲಿ

**(ಮಾರ್ಚ್ 11 [ಮಹಾ ಶಿವರಾತ್ರಿ] ರಿಂದ ಮಾರ್ಚ್ 15, 2021ರವರೆಗೆ)**

ಪ್ರತಿವರ್ಷ ಮಹಾ ಶಿವರಾತ್ರಿಯಿಂದ ಪ್ರಾರಂಭವಾಗಿ, ಐದು ದಿನಗಳ ಕಾಲ ನಾಟ್ಯಾಂಜಲಿ-ನೃತ್ಯೋತ್ಸವವನ್ನು ತಮಿಳುನಾಡಿನ ಚಿದಂಬರಂನಲ್ಲಿ ಆಯೋಜಿಸಲಾಗುತ್ತದೆ. 1000 ವರ್ಷಗಳಷ್ಟು ಪುರಾತನವಾದ ಚಿದಂಬರಂ ನಟರಾಜ ದೇವಸ್ಥಾನದಲ್ಲಿ ಆಯೋಜಿಸಲಾಗುವ ಈ ಉತ್ಸವವನ್ನು ನಾಟ್ಯ ದೇವತೆ ಮತ್ತು ದೈವಿಕ ನೃತ್ಯಪಟು ನಟರಾಜನಿಗೆ ಸಮರ್ಪಿಸಲಾಗುತ್ತದೆ. ಈ ಉತ್ಸವವು ಭಾರತದ ಶ್ರೀಮಂತ ನೃತ್ಯ ಸಂಸ್ಕೃತಿಯನ್ನು ಮತ್ತು ಭಕ್ತಿ ಭಾವನೆಯೊಂದಿಗೆ ಸಂಯೋಜನೆಯನ್ನು ಪ್ರದರ್ಶಿಸುತ್ತದೆ. ಈ ಉತ್ಸವದಲ್ಲಿ ಪ್ರಪಂಚದಾದ್ಯಂತ ಮತ್ತು ಭಾರತದ ಎಲ್ಲಾ ಭಾಗಗಳಿಂದ ಶಾಸ್ತ್ರೀಯ ನೃತ್ಯಪಟುಗಳು ಭಾಗವಹಿಸುತ್ತಾರೆ.

Kannada Issue 17

ಸಂಪಾದಕ
ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪಿಐಬಿ, ನವದೆಹಲಿ

ಮುದ್ರಕರು ಮತ್ತು ಪ್ರಕಾಶಕರು
ಸತ್ಯೇಂದ್ರ ಪ್ರಕಾಶ್,
ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯೂನಿಕೇಷನ್ ಪರವಾಗಿ

ಪ್ರಕಾಶಕರು
ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯೂನಿಕೇಷನ್
2ನೇ ಮಹಡಿ, ಸೂಚನಾ ಭವನ,
ನವದೆಹಲಿ – 110003

ಮುದ್ರಣ:
ಇನ್‌ಫಿನಿಟಿ ಅಡ್ವರ್ಟೈಸಿಂಗ್ ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ–ಒನ್ ಕಾರ್ಪೊರೇಟ್ ಪಾರ್ಕ್, 10ನೇ ಮಹಡಿ,
ನವದೆಹಲಿ–ಫರೀದಾಬಾದ್ ಬಾರ್ಡರ್
ಎನ್‌ಹೆಚ್–1 ಫರೀದಾಬಾದ್–121003